ಅನುವಾದಕರ್ತರು :

ಶ್ರೀ ದೇಶಭೂಷಣ ಮುನಿಗಳು

ಪ್ರಕಾಶಕರು :

ಶ್ರೀ ಮಲುಗೌಂಡ ಅಪ್ಪಾಜೀ ಚಂಡಿಕೆ ಅವರು

ಸಂಪಾದಕರು :

ಶ್ರೀ ಸ್ಯಾದ್ವಾದ ಭಿಷಜ್ಮಣಿ, ವೈದ್ಯರಾಜ,
ವೈದ್ಯವಿಶಾರದ, ಪಂಡಿತ. ಎಂ. ಎಲ್ಲಪ್ಪಶಾಸ್ತ್ರಿ ಅವರು

ಪ್ರಕಾಶಕ ಸಂಸ್ಥೆ :

ಶ್ರೀ ವಿ[illegible]ಅಣ್ಣಾರಾಯರು, 'ಶಾಂತಿ ಸೇವಾಸದನ' ಸೇಡಬಾಳ

ಬೆಲೆ : ಸ್ವಾಧ್ಯಾಯಕ್ಕಾಗಿ : ೨-೮-೦

ವೀರನಿರ್ವಾಣ ಶಕ ೨೪೭೦

ನಾಲಿ



ಗಳತಿಗೆ ಗ್ರಾಮದ ಭವ್ಯಜೀವರೊಳೊಬ್ಬ । ಚಲುವನಾದಪ್ಪಾಜಿಗೌಂಡ ॥
ಚಲುವೆ ತಾಯವ್ವನಿಂದೊಡಗೂಡುತನುದಿನ । ಫಲಪುಷ್ಪದಿಂದರ್ಚಿಸಿದ ॥*॥
ಫಲಪುಷ್ಪ ಮೊದಲಾದವರಿಂದ ಪೂಜಿಸಿ । ಚಲುಪರು ಸ್ವರ್ಗಕೆ ಪೋಗೆ ॥
ಮಲುಗೌಂಡ ಚಂಡಿಕೆ ಪರಿವಾರದೊಡಗೂಡಿ। ನಿಲದೆ ಭಕ್ತಿಯ ಭರದಿಂದ ॥*॥
ಪೂಜೆಯಮಾಡುತಲನುದಿನಸ್ತುತಿಸುವ । ಶ್ರೀಜಿನ **ಪ್ರಥಮಜಿನೇಶ** ॥
ನೈಜವಾಗಿಹ ಜಿನಧರ್ಮವ ಬಿಡದಿಹ । ಆ ಜಿನಭಕ್ತನ ಪೊರೆಯೈ ॥*॥
ಸಾವಿರದೆಂಟು ನಾಮಗಳಿಂದ ಮೆರೆಯುವ । ಸಾವುಹುಟ್ಟುಗಳಳಿದವನೆ ॥
ಶ್ರೀವೀರನುಪದೇಶದಿ ಬಂದ ಪರಮಾತ್ಮ । ಪಾವನ ಬೆಳಕನು ಪೇಳ್ದ ॥*॥
ಯೋಗೀಂದುದೇವರ ಪಾದವಸ್ಮರಿಸುತ । ಯೋಗವ ಮಾಡುತಲಿರುವ ॥
ಯೋಗಿಯಾಗಿಹ ದೇಶಭೂಷಣಗುರುವನು । ಯೋಗಸಾಗರನೆ ರಕ್ಷಿಪುದು ॥*॥

ವಿಷಯಾನುಕ್ರಮಣಿಕೆ

ಮುನ್ನುಡಿ

ಶ್ರೀ ಯೋಗೀಂದ್ರದೇವಾಚಾರ್ಯ ವಿರಚಿತ 'ಪರಮಾತ್ಮಪ್ರಕಾಶ'ಕ್ಕೆ ಕನ್ನಡ ಭಾವದೀಪಿಕೆಯನ್ನು ಬರೆದ ಗ್ರಂಥವಿದು. ಇದನ್ನು ವಿರಚಿಸಿದವರು ಇಂದಿನ ಯೋಗೀಂದ್ರರಾದ ಶ್ರೀ ದೇಶಭೂಷಣ ಮುನಿಗಳು ಇಂಥವರ ಅಮಲವಾಣಿಗೆ ನಾನು ಮುನ್ನುಡಿ ಬರೆಯುವದು ಸ್ವಲ್ಪ ಅಪ್ರಸ್ತುತವೇ. ಆದರೂ ಪರಿಚಯವೆಂದು ನಾಲ್ಕು ಮಾತುಗಳನ್ನು ಇಲ್ಲಿ ಹೇಳುತ್ತಲಿದ್ದೇನೆ.

ಭಾರತದ ಪ್ರಾಚೀನದರ್ಶನಗಳಲ್ಲಿ ಜೈನದರ್ಶನಕ್ಕೊಂದು ವಿಶಿಷ್ಟಸ್ಥಾನವಿದೆ. ಜೈನರ ದರ್ಶನವು ಸಾರುತ್ತಿದೆ. ಆತ್ಮವು ಪುದ್ಗಲದ ಸಂಸರ್ಗದಿಂದ ಈ ಪ್ರಪಂಚದಲ್ಲಿ ತೊಳಲುತ್ತಿದೆ. ಅದಕ್ಕೆ ಕರ್ಮವೇ ಕಾರಣ. ಈ ಕರ್ಮವನ್ನು ನಷ್ಟಪಡಿಸಿ, ಪುದ್ಗಲದ ಸೆರೆಯೊಳಗಿಂದ ಪಾರಾಗುವುದೇ ಆತ್ಮನ ಗುರಿ. ಅದನ್ನು ಸಾಧಿಸುವುದೇ ಮುಕ್ತಿ. ಇಂಥ ಮುಕ್ತಾತ್ಮನೇ ಪರಮಾತ್ಮ. ಈ ಪರಮಾತ್ಮನನ್ನು ಪ್ರಕಾಶಿಸುವುದೇ ಪರಮಾತ್ಮಪ್ರಕಾಶ.

ಇಂದಿನ ಯುಗದಲ್ಲಿ ಈ ತಿಳಿವು ಜನರಲ್ಲಿ ಹಬ್ಬಬೇಕಾಗಿದೆ. ತನ್ನ ಆತ್ಮತತ್ವವನ್ನು ಅರಿಯದೆ, ಮಿಥ್ಯೆಯನ್ನೇ ಸತ್ಯವೆಂದು ಭಾವಿಸಿ ಲೋಕ ಹಾಳಾಗುತ್ತಿದೆ. ಅಂಥವರನ್ನು ಈ ಪರಮಾತ್ಮಪ್ರಕಾಶ ಚೇತರಿಸಬೇಕಾಗಿದೆ. ಮಾನವನು ತನ್ನ ಚಾರಿತ್ರ್ಯದಿಂದ ದೇವನಾಗಬಹುದು, ಪರಮಾತ್ಮನೆನಿಸಿಕೊಳ್ಳಬಹುದು. ಇದು ಜೈನ ದರ್ಶನದ ತಿರುಳು. ಇಂಥ ಹುರುಳುಳ್ಳ ತಿರುಳನ್ನು ತಿಳಿಸುವುದು ಈ ಪುಟ್ಟಗ್ರಂಥವು.

ಇದರಲ್ಲಿ ಆತ್ಮ, ಜ್ಞಾನ, ಮೋಕ್ಷ, ಧರ್ಮ, ದರ್ಶನಗಳ ವಿವೇಚನೆಯನ್ನು ಅರ್ಥವತ್ತಾಗಿ ಮಾಡಲಾಗಿದೆ. ತತ್ವ ಅಬಾಧಿತ, ಅದನ್ನು ಹೇಳುವ ರೀತಿ ಕಾಲ ಕಾಲಕ್ಕೆ ಬದಲಾದರೇನು ? ಅದು ಬೋಧಿಸುವುದೊಂದೇ. ಇಂದು ಕನ್ನಡ ಜನಕ್ಕೆ ಪರಮಾತ್ಮದರ್ಶನ ಮಾಡಿಕೊಡಲಿಕ್ಕೆ ಯೋಗಿವರ ದೇಶಭೂಷಣರು ಮುಂದೆ ಬಂದಿದ್ದಾರೆ. ಆ ಅಧಿಕಾರ ಅವರಿಗೆ ಇದೆ. ಹಲವು ವರ್ಷಗಳ ತಪಸ್ಸಿನ ಬೆಂಬಲ ಅವರ ವಾಣಿಗೆಯಿದೆ

ನಮ್ಮ ಜೈನಾಚಾರ್ಯರು ಎಂದಿನಿಂದಲೂ ಗ್ರಂಥರಚನೆಮಾಡುತ್ತಲೇ ಬಂದಿರುವರು. ಸಾಧಕರಾಗಿ ಸ್ಯಾದ್ವಾದವು ಸಾಧಕರ ಕೈಪಿಡಿ ಎಂಬುದನ್ನು ಜಗತ್ತಿಗೆ ತೋರಿಸುತ್ತ, ಅದರಂತೆ ತಾವು ಬಾಳುತ್ತ ಬಂದಿರುವರು. ಆ ಪರಂಪರೆಯನ್ನು ಕಾಯ್ದುಕೊಂಡು ಸಾಗುತ್ತಿರುವ ಶ್ರೀ ದೇಶಭೂಷಣಮುನಿಗಳವರಿಂದ ಇನ್ನೂ ಅನೇಕ ಗ್ರಂಥಗಳು ಬೆಳಕಿಗೆ ಬರಲಿ. ಕನ್ನಡ ಸಾಹಿತ್ಯಭಾಂಡಾರ ಬೆಳಗಲಿ.

ಶಾಂತಿ ಸೇವಾಸದನ, ಸೇಡಬಾಳ
೧೪—೧—೧೯೪೮

— ಮಿರ್ಜಿ ಅಣ್ಣಾರಾಯ

ಪರಮಾತ್ಮಪ್ರಕಾಶ ಮತ್ತು ಯೋಗಸಾರ

ಸಂಪಾದಕರ ವಕ್ತವ್ಯ

ಶ್ರೀ ವೀರನಿರ್ವಾಣಶಕೆ ದಾಕ್ಷಿಣಾತ್ಯ ೨೪೯೯ನೆಯ ಚಾತುರ್ಮಾಸದ ನಿಯಮದಲ್ಲಿ ಸ್ತವನಿಧಿಕ್ಷೇತ್ರದ ಸಮೀಪದಲ್ಲಿರುವ ಪಟ್ಟಣಕುಡಿ ಗ್ರಾಮದಲ್ಲಿ ಶ್ರೀ ಪಾರ್ಶ್ವನಾಥಸ್ವಾಮಿಯವರ ದೇವಾಲಯದ ಗೋಪುರದ್ವಾರದ ಗುಹೆಯಲ್ಲಿ ತಪವನ್ನಾಚರಿಸುತ್ತಲಿದ್ದ ಪರಮಪೂಜ್ಯ ತಪೋಧನ ಸ್ವಸ್ತಿಶ್ರೀ ೧೦೮ ದೇಶಭೂಷಣ ಮಹಾಮುನಿಗಳ ದರ್ಶನಲಾಭಕ್ಕಾಗಿ ನಾನು ಪಟ್ಟಣಕುಡಿಗೆ ಹೋಗಿದ್ದೆನು. ದರ್ಶನ, ವಂದನ ಆಹಾರದಾನಾದಿ ಗೃಹಸ್ಥರಿಗೆ ಉಚಿತವಾದ ಧಾರ್ಮಿಕ ಕ್ರಿಯೆಗಳಲ್ಲಿ ನಾಲ್ಕಾರು ದಿನಗಳನ್ನು ಕಳೆದ ಮೇಲೆ ಈ ಗ್ರಂಥದ ಪರಿಶಿಷ್ಟದಲ್ಲಿ ಕೊಡಲಾದ ಧಾರ್ಮಿಕ ಸಮಾರೋಹದ ಘಟನೆಗಳು ನಡೆದು ಶ್ರೀ ಯೋಗೀಂದುದೇವರು ರಚಿಸಿದ ಪರಮಾತ್ಮಪ್ರಕಾಶದ ಪ್ರಕಟನೆಯು ಅತ್ಯಾವಶ್ಯಕವೆಂದು ತೋರಿಬಂದುದರಿಂದ ಶ್ರೀಗಳವರು ನನ್ನನ್ನು ಅಲ್ಲಿಯೇ ನಿಲ್ಲಿಸಿಕೊಂಡು ಸುಮಾರು ಒಂದುತಿಂಗಳವರೆಗೆ ಸಾಂಗತ್ಯದಲ್ಲಿ ಕಪ್ಪು ಹಲಿಗೆಯ ಮೇಲೆ ಬರೆದುಕೊಡುತ್ತಬಂದರು. ನಾನು ಪುಸ್ತಕಕ್ಕೇರಿಸಿದೆನು. ಹೀಗೆ ಕನ್ನಡದ ಸಾಂಗತ್ಯದಲ್ಲಿ ಗ್ರಂಥರಚನೆಯಾಗುತ್ತಿದ್ದಾಗ ಪ್ರತಿದಿನವೂ ಭಕ್ತಿಗಳನ್ನೋದಿ ಭಕ್ತಾಮರ ಗ್ರಂಥಪಠನಗಳ ಶುಭಪ್ರಸಂಗಗಳ ವಾತಾವರಣದಲ್ಲಿ ಸಿದ್ಧವಾದ ಗ್ರಂಥದ ಕೆಲಪದಗಳನ್ನು ಕೇಶಲೋಚನ ಸಮಾರಂಭದ ಸಲುವಾಗಿ ನೆರೆದ ಸಭೆಯಲ್ಲಿ ಓದಿ ಹೇಳಿದುದರ ಫಲವಾಗಿ ಗಳತಿಗೆ ಗ್ರಾಮದ ಶ್ರೀಮಾನ್ ಮಲಗೌಡ ಅಪ್ಪಾಜಿ ಚಂಡಿಕೆಯವರು ಮಾಡಿದ ಧನಸಹಾಯದಿಂದ ಈ ಗ್ರಂಥವು ಪ್ರಕಟವಾಯ್ತು. ಗ್ರಂಥದ ರಚನೆಯು ಸಾಂಗತ್ಯದಿಂದಾಗಿದೆ. ಉತ್ತರ ಕರ್ಣಾಟಕದ ಜೈನ ಜೈನೇತರ ಕನ್ನಡಿಗರಲ್ಲಿ ಬಹಳವಾಗಿ ಬಳಕೆಯಲ್ಲಿದೆ. ಹೆಚ್ಚೇನು ಕೆಲವರಲ್ಲಿ ಕಂಠಪಾಠವೂ ಆಗಿದೆ. ಅಂಥಹವರು ಕನ್ನಡಲಿಪಿಯನ್ನರಿಯದೆ ಕನ್ನಡಭಾಷೆಯ ಗ್ರಂಥಗಳನ್ನು ಮಹಾರಾಷ್ಟ್ರಲಿಪಿಯಿಂದ ಓದುತ್ತ ಬರುತ್ತಿರುವ ಪರಿಪಾಠಿಯನ್ನು ತಪ್ಪಿಸಿ ಕನ್ನಡಲಿಪಿಯಲ್ಲಿ ಮಹಾಕಾವ್ಯಗಳ ಆದರಲ್ಲೂ ಜೈನ ಅಧ್ಯಾತ್ಮಸಾಹಿತ್ಯದ ಓದುಗಾರಿಕೆಯನ್ನು ಪ್ರಚಾರಮಾಡಿ ಆ ಮೂಲಕ ಕರ್ಣಾಟಕದ ಗಡಿನಿರ್ಣಯ, ಏಕೀಕರಣಾದಿ ಪ್ರಯತ್ನಗಳಿಗೆ ತಮ್ಮ ಆಶೀರ್ವಾದ ರೂಪವಾದ ಅನುಗ್ರಹಮಾಡಬೇಕೆಂಬ ಮಹತ್ವಾಕಾಂಕ್ಷೆಯಿಂದ ಶ್ರೀಗಳವರು ಸಾಂಗತ್ಯದಲ್ಲಿದನ್ನು ಬರೆದರು, ಶ್ರೀಮಾನ್ ಮಲಗೌಡರು ಪ್ರಕಟಿಸಿದರು. ಆವರಿಗೆ ಅನಂತ ವಂದನೆಗಳು.

ಈ ಗ್ರಂಥಪ್ರಕಾಶನದ ಕಾರ್ಯದಲ್ಲಿ ಪರಮಪೂಜ್ಯ, ಆಚಾರ್ಯವರ್ಯ, ಸ್ಯಾದ್ವಾದಕೇಸರಿ, ಸ್ವಸ್ತಿಶ್ರೀ ೧೦೮ ಪಾಯಸಾಗರ ಮಹಾಮುನಿಗಳವರ ಕೃಪೆಯ

ಆಶೀರ್ವಾದವನ್ನು ದೊರಕಿಸಿಕೊಟ್ಟುದೂ ಅಲ್ಲದೆ ಉಚಿತ ಸಲಹೆಗಳನ್ನಿತ್ತು ಸಹಾಯ ಮಾಡಿದ ಲಕ್ಷ್ಮೇಶ್ವರದ ಶ್ರೀಮಾನ್ ಗೊಂಗಡಿ ನಾಗರಾಜಯ್ಯನವರಿಗೂ, ಕರ್ಣಾಟಕದ ಏಕೈಕ ಜೈನಪತ್ರಿಕೆಯಾದ ತಮ್ಮ 'ವಿವೇಕಾಭ್ಯುದಯ'ದಲ್ಲಿ ಸ್ವಲ್ಪ ಸ್ವಲ್ಪವಾಗಿ ಪ್ರಕಟಿಸುತ್ತಲಿರುವ ಮಂಗಳೂರಿನ ಅಡ್ವೋಕೇಟ್ ಡಿ. ಪುಟ್ಟುಸ್ವಾಮಿ, ಬಿ.ಎ., ಬಿ.ಎಲ್. ಅವರಿಗೂ, ಗ್ರಂಥದ ಪ್ರಕಾಶನನ್ನು ನೆರವೇರಿಸುವ ಆಶೆಯಿಂದ ಸ್ಥಾಪಿಸಿದ ಸಂಸ್ಥೆಯಾದ ಶೇಡಬಾಳದ 'ಶಾಂತಿ ಸೇವಾಸದನ'ದ ಸಂಚಾಲಕ ವರ್ಗದವರಲ್ಲೊಬ್ಬರಾದ ಶ್ರೀ ಮಿರ್ಜಿ ಅಣ್ಣಾರಾಯರವರಿಗೂ, ಗ್ರಂಥದ ಪರಿಶೋಧನೆ ಮತ್ತು ಉಪೋದ್ಘಾತಾದಿಗಳನ್ನು ಬರೆದುಕೊಟ್ಟ ಬೆಂಗಳೂರು ಶ್ರೀ ಚಾಮರಾಜೇಂದ್ರ ಸಂಸ್ಕೃತಕಾಲೇಜಿನ ಪ್ರಿನ್ಸಿಪಾಲರಾದ ಜೈನ ಸಾಹಿತ್ಯವಿಶಾರದ ಶ್ರೀ ಕೆ. ಎಸ್. ಧರಣೇಂದ್ರಯ್ಯ, ಎಂ.ಎ., ಬಿ.ಟಿ. ಅವರಿಗೂ ಉಕ್ತ ಕೇಶಲೋಚಿನ ಸಮಾರಂಭದ ದಿವಸ ಪತ್ನಿ ಪುತ್ರಾದಿ ಪರಿವಾರದೊಂದಿಗೆ ಪಟ್ಟಣಕುಡಿಗೆ ಬಂದು ಅಮೂಲ್ಯ ಭಾಷಣಮಾಡಿ ಈ ಗ್ರಂಥರಚನೆಯ, ಪ್ರಕಟನೆಯ ವಿಷಯದಲ್ಲಿ ಅನೇಕ ಸಲಹೆಗಳನ್ನಿತ್ತ ಚಿಕ್ಕೋಡಿಯ ಸಬ್ ಜಡ್ಜ್, ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ ಪ್ರೊಫೆಸರ್. ತುಕೋಳ್, ಎಂ.ಎ., ಎಲ್.ಎಲ್.ಬಿ., ಅವರಿಗೂ ನಾನು ಅನೇಕ ಧನ್ಯವಾದಗಳರ್ಪಿಸುತ್ತೇನೆ.

ಶ್ರೀ ಯೋಗೀಂದುದೇವಾಚಾರ್ಯರ ಪರಮಾತ್ಮಪ್ರಕಾಶಗ್ರಂಥವು ಪಾಶ್ಚಾತ್ಯದೇಶಗಳಲ್ಲೂ ಬಳಕೆಯಲ್ಲಿದೆ. ಲಂಡನ್ನಿನ ಪ್ರಸಿದ್ಧ ಜೈನ ಸಂಸ್ಥೆಯಾದ ಶ್ರೀ ಮಹಾವೀರ ಬ್ರದರ್‌ಹುಡ್ ಎಂಬ ಹೆಸರನ್ನು ಬಹುಕಾಲ ಬಳಸಿ ಬಳಿಕ 'ಶ್ರೀ ಋಷಭ ಮಹಾವೀರಸಂಘ'ವೆಂಬ ಹೆಸರಿನಿಂದ ಬಳಕೆಯಲ್ಲಿರುವ ಸಂಘದ ಸದಸ್ಯತ್ವದ ಪ್ರವೇಶದ ನಿಯಮಾವಲಿಯ ಏಳನೆ ನಿಯಮದಲ್ಲಿ ಪರಮಾತ್ಮಪ್ರಕಾಶಗ್ರಂಥದಲ್ಲಿ ಹೇಳಿರುವ ಕೆಲವು ಧಾರ್ಮಿಕ ವಿಧಿಯಂತೆ ನಡೆಯುವವರು ಮಾತ್ರ ಸದಸ್ಯರಾಗಿರಲು ಅರ್ಹರೆಂಬ ಪ್ರಕಟನೆಯಿದೆ. ಆದುದರಿಂದ ಈ ಗ್ರಂಥವು ವಿಶ್ವವ್ಯಾಪಿಯಾಗಿದೆ. ಇಂತಹ ಅಮೂಲ್ಯಗ್ರಂಥದ ವಿಸ್ತಾರ ಕಥನರೂಪವಾದ ಕನ್ನಡ ಗದ್ಯಗ್ರಂಥವೊಂದು ಪ್ರಕಟವಾಗಿ ಮಾಲೆಯ ಒಂದು ಮಣಿಯಾಗಿ ಬೆಳಗುವಂತಾದರೆ ಆಗ ನಾನು ಧನ್ಯನು. ತಪ್ಪನ್ನು ಮನ್ನಿಸಿ, ಪರಮಾತ್ಮಪ್ರಕಾಶನನ್ನಾರಾಧಿಸಿ ಯೋಗಸಾರವನ್ನು ಕಂಠಮಾಡಿದರೆ ನಾನು ಧನ್ಯನು.

ತಾ|| ೧೫—೨—೧೯೪೮ **ಸಂಪಾದಕ**
ಬೆಂಗಳೂರು ನಂಬರ್ ೨.

ಶ್ರೀಮತಿ ತಾಯವ್ವನವರು ಶ್ರೀ ಚಂಡಿಕೆಯವರತಾಯಿಯು ಆಕೆಯಸವಿನೆನಪಿಗಾಗಿ
ಶ್ರೀ ಪರಮಾತ್ಮಪ್ರಕಾಶ ಗ್ರಂಥದ ಪ್ರಕಟನೆಗೆ ಬೇಕಾದ ಹಣವನ್ನಿತ್ತು
ಗ್ರಂಥವನ್ನು ಶಾಸ್ತ್ರಪ್ರಕಾಶಕ್ಕಾಗಿ ಮೀಸಲಾಗಿರಿಸಿ, ಪ್ರಕಟಿಸಿರುವ

ಶ್ರೀ ಮಲಗೌಡ ಅಪ್ಪಾಜೀ ಚಂಡಿಕೆ ಅವರ
ಸಂಕ್ಷೇಪ ಜೀವನಚರಿತ್ರೆ

ಭರತಾರ್ಯಖಂಡದ ದಕ್ಷಿಣದೇಶದಿ । ಮೆರೆವುದು ಕರ್ಣಾಟದೇಶ ॥
ಸುರುಚಿರ ಪರಮನ ಬಸದಿಗಳಿಂದಲಿ । ವರಭವ್ಯಜನರಿಂದ ಕೂಡಿ ॥೧॥

ಬೆಳಗಾಮು ಜಿಲ್ಲೆಯೊಳಿರುವ ಚಿಕ್ಕೋಡಿಯ । ಬೆಳಗುವ ತಾಲ್ಲೂಕಿನೊಳು ॥
ಗಳತಿಗೆಯೆಂಬ ಗ್ರಾಮದಿ ವೃಷಭೇಶನ । ತೊಳಗುವ ಬಿಂಬದಿಮೆರೆವ ॥೨॥

ಚಲುವಾದಿದೇವನ ಬಸದಿಯಗೋಪುರ । ಸುಲಲಿತವಾದುನ್ನತಿಯಿಂ ॥
ಲಲಿತಕಲೆಗಳ ಚಿತ್ರಗಳಿಂದೊಪ್ಪುತ । ಬಲುದೂರಕೆ ಕಾಣುವುದು ॥೩॥

ಆದರ ಪ್ರಾಂಗಣದಿ ವಿಶಾಲದಾವರಣವು । ತ್ತದರ ಬಳಿಯೊಳಿಹ ಗುಹೆಯು ॥
ಸದನವತೊರೆದ ಮುನಿಗಳ ನಿವಾಸಕೆ । ಸದನವೊ ಎನಲೊಪ್ಪಿಹುದು ॥೪॥

ಇಂತು ಮೆರೆವ ವೈಭವದಿಂದ ಕೂಡಿಹ । ಶಾಂತಮೂರುತಿ ಜಿನದೇವ ॥
ಸಂತರಗಳತಿಗೆ ಭವ್ಯರ ಪೊರೆಯೆಂದು । ಸಂತೋಷದಿಂದ ವಂದಿಪೆನು ॥೫॥

ಗಳತಿಗೆಗ್ರಾಮದ ಭವ್ಯಜೀವರುಗಳು । ಚಲುವ ಶ್ರೀ ಜಿನಬಿಂಬಗಳ ॥
ಕಳೆಯುಳ್ಳ ಜಿನಶಾಸ್ತ್ರ ಜಿನಮುನಿಭಕ್ತರು । ಚಲುವರು ವಿದ್ವಾಂಸರವರು ॥೬॥

ಅವರೊಳೊಬ್ಬನು ಚಂಡಿಕೆಯಪ್ಪಾಜಿಯು । ಮಲಗೌಡನೆಂಬ ನಾಮದಲಿ ॥
ಅವನು ಧರ್ಮಾನುರಾಗಿಯು ಮುನಿಭಕ್ತಮ-।ತ್ತವನಾತ್ಮಕಲೆಯೊಳು ಚತುರ ॥೭॥

ಮಲಗೌಡ ಚಂಡಿಕೆ ಮನೆತನವದನೋಡೆ । ಪಲವು ಶತಾಬ್ಧಿಗಳಿಂದ ॥
ಗಳತಿಗೆ ಗ್ರಾಮದಿ ಸುಲಲಿತಧರ್ಮದ । ನೆಲೆವೀಡಾಗಿರುತಿಹುದು ॥೮॥

ಇಂತುಸದ್ಧರ್ಮವ ಸಂತೋಷದಿಂ ಮಾಳ್ಪ । ಸಂತಾನದೊಳಪ್ಪಾಜೀ ॥
ಸಂತನು ಜಿನಪದ ಭಕ್ತನುದ್ಭವಿಸಿದ । ಶಾಂತಸ್ವಭಾವದ ಭವ್ಯ ॥೯॥

ಜಿನಧರ್ಮವ ಬಾಲ್ಯಕಾಲದಿಂದಲಿಕಲ್ತು । ಜಿನಮುನಿಗಳ ಕೃಪೆಯಿಂದ ॥
ಜಿನಭಕ್ತಿಯಬಿಡದಿರುತಿಹತಾಯವ್ವ । ಜಿನಭಕ್ತನಾದಪ್ಪಾಜಿಯನು ॥೧೦॥

ಅಪ್ಪಾಜಿಗೌಡನ ಸುದತಿತಾಯವ್ವನು । ಒಪ್ಪುವ ಸತಿಶಿರೋಮಣಿಯು ॥
ತಪ್ಪದೆ ಜೈನಧರ್ಮವ ಸೇವಿಸುತ್ತಲಿ । ಒಪ್ಪುವ ಸುಖದೊಳಗಿರಲು ॥೧೧॥

ಇಂತಿಹ ದಂಪತಿಗಳ ಪೂರ್ವಪುಣ್ಯದಿ । ಸಂತಾನದ ಕುರುಹಾದ ॥
ಸಂತೋಷದಾಯಕವಹಗರ್ಭಚಿಹ್ನೆಯು । ಸಂತಳಿಗುದ್ಭವಿಸಿದುದು ॥೧೨॥

ತಾಯವ್ವನಗರ್ಭವು ಬೆಳೆಯುತ್ತಿರೆ । ತಾಯವ್ವನಪ್ಪಾಜಿಯರಿಗೆ ॥
ಆಯದಿ ಜೈನಾಭಿಷೇಕದ ಬಯಕೆಯು । ಶ್ರೀಯುತವಾಗಿ ಪುಟ್ಟಿದುದು ॥೧೩॥

ಬಯಕೆಯ ತೀರಿಸಿ ಸುಖಬಾಳುತಿರಲು । ನಯದಿ ಶ್ರೀಮಂತಪ್ರಸ್ತವನು ॥
ಜಯವಂತ ಮಗನು ನಮಗೆ ಹುಟ್ಟಲೆನ್ನುತ । ನಿಯಮವ್ರತದೊಳವರಿರಲು ॥೧೪॥

ನವಮಾಸತುಂಬಿದ ಮರುದಿನ ಶುಭಮಾಸ । ಸುವಿಮಲಶುಭನಕ್ಷತ್ರ ॥
ಇವುಮೊದಲಾದ ಶುದ್ಧಿಯದಿನವೊದಗಲು । ನವಕೋಮಲಾಂಗ ಪುಟ್ಟಿದನು ॥೧೫॥

ಪುಟ್ಟಿದಮಗನ ಮೊಗವನೋಡಿ ಪರಿವಾರ । ತೊಟ್ಟಿಲೊಳ್ಮಲಗಿಸಿಸುತನ ॥
ಇಟ್ಟರು ಸೇಸೆಯ ಸುಖಬಾಳು ಚಿರಕಾಲ । ಪುಟ್ಟಬಾಲಕನೆ ನೀನೆಂದು ॥೧೬॥

ಗಳತಿಗೆಯಾದೀಶನ ಕೃಪೆಯಿಂದಲಿ । ಚಲುವನು ಭುಜಬಲಿಯಂತೆ ॥
ಬೆಳಗುವ ಮಗನು ಪುಟ್ಟಿದನೆಂದೆನ್ನುತ । ಮಲಗೌಡನೆಂದು ಕರೆದರು ॥೧೭॥

ಬಾಲಚಂದ್ರನ ತೆರದಿಂದ ಬೆಳೆಯುತಲಿ । ಬಾಲಲೀಲೆಯ ತೋರಿಸುತ ॥
ಲೀಲೆಯಿಂದೇಳನೆ ವರುಷವು ನಡೆಯಲು । ಮಲಗೌಡ ವ್ರತವಂತನಾದ ॥೧೮॥

ವ್ರತಯುತನಾದ ದ್ವಿಜನ್ಮದ ಬಾಲನು । ಸತತ ವಿದ್ಯಾಭ್ಯಾಸದಿಂದ ॥
ಅತಿಶಯವಾದ ಕಲೆಗಳನೆಲ್ಲವಕಲ್ತು । ಚತುರನಾದನು ವಿದ್ಯೆಯಲಿ ॥೧೯॥

ವಿದ್ಯೆಯಕಲಿಯುತಲಿರ್ಪಾಗ ಹಿರಿಯರು । ವಿದ್ಯಾವತಿಯರ ತಂದು ॥
ಸದ್ಯೋಜಾತರುಪಾಧ್ಯಾಯರಿಂದಲಿ । ವಿಧ್ಯುಕ್ತವಾಗಿ ಮದುವೆಯ ॥೨೦॥

ಮದುವೆಯಾಗಿಹ ಮಲಗೌಡ ಚಂಡಿಕೆ ತಾನು । ಸದನದ ಕಾರ್ಯವನೆಲ್ಲ ॥
ಮುದದಿಂದ ವಹಿಸಿಕೊಳ್ಳುವನೆಂದಿರುವಾಗ । ವಿಧಿಯೊಂದು ಬಂದೊದಗಿದುದು ॥೨೧॥

ತಂದೆಯು ಸ್ವರ್ಗಲೋಕಕೆ ಪೋದನದರಿಂದ । ನೊಂದು ತಾಯವ್ವನು ಮನದಿ ॥
ದಂದುಗದೊಳು ಬಾಳಲಾರೆನೆಂದೆನ್ನುತ । ತಂದೆಯಂದದಿ ಸ್ವರ್ಗವಡರೆ ॥೨೨॥

ಅಪ್ಪಾಜಿ ಎಲ್ಲಿಗೆ ಪೋದೆ ತಾಯವ್ವನೆ । ಅಪ್ಪ ಅವ್ವಗಳಿಲ್ಲದವನು ॥
ಒಪ್ಪುವುದಿಲ್ಲವೀ ಸಂಸಾರದೊಳೆಂದು । ಅಪ್ಪನ ಅವ್ವನ ನೆನೆದು ॥೨೩॥

ಮಿಕ್ಕು ಶೋಕದಿನೊಂದು ಬೆಂಡಾಗಿರಲಾಗ । ಚೊಕ್ಕದಿ ಧರ್ಮವನೆನೆದು ॥
ಅಕ್ಕಟದುಃಖವು ನನಗೊಬ್ಬಗಲ್ಲವೆಂ । ದಕ್ಕರಿಗನು ಭಾವಿಸಿದ ॥೨೪॥

ಧರ್ಮವೆತಾಯ್ತಂದೆ ಧರ್ಮವೆ ಪರಿವಾರ । ಧರ್ಮವೆ ಜಗದಿ ಮುಖ್ಯವಲಾ ॥
ಧರ್ಮವೆ ನನ್ನನುದ್ಧರಿಸುವುದೆನ್ನುತ । ನಿರ್ಮಲಧರ್ಮವಪಿಡಿದ ॥೨೫॥

ಕರ್ಮಚಕ್ರಕೆಸಿಕ್ಕಿ ತೊಳಲುತಲಿರ್ಪಾಗ । ಕರ್ಮವೆ ಬಿಡುಬಿಡೆಂದೆನಲು ॥
ದುರ್ಮನದಿಂದಿಹ ಜನರನುಬಿಡುವುದೆ । ಧರ್ಮವನ್ಮಾಡೆ ಪೋಗುವುದು ॥೨೬॥

ಎಂದು ನಾನಾವಿಧ ಭಾವದಿಂದಲಿಕೂಡಿ । ಸುಂದರಬಾಲಕನವನು ॥
ದಂದುಗದೊಳಗಿದ್ದು ಚಂದದಧರ್ಮವ । ಬಂಧುರವಾಗಿ ಮೆರೆಸುತ ॥೨೭॥

ಧರ್ಮದ ವ್ಯವಹಾರಗಳಿಂದ ದ್ರವ್ಯವ । ನಿರ್ಮಲಲಾಭದಿ ಪಡೆದು ॥
ಧರ್ಮೋದ್ಧಾರಕಾರ್ಯಕೆ ವೆಚ್ಚಮಾಡುತ । ಸ್ವರ್ಮೋಕ್ಷಸುಖವ ಸಾಧಿಸುತ ॥೨೮॥

ನಿತ್ಯಚತುರ್ವಿಧಸಂಘಕೆ ದಾನವ । ನಿತ್ಯೋತ್ಸವವನು ಜಿನಗೆ ॥
ಸತ್ಯದ ಶಾಸ್ತ್ರದ ವಿದ್ಯೆಯದಾನಕೆ । ಇತ್ತು ಸಹಸ್ರಾರು ಧನವ ॥೨೯॥

ಇಂತು ಸಂತೋಷದ ಮನದಿಂದಲನುದಿನ । ಕಂತುವಿನಂದದ ರೂಪ ॥
ಸಂತತ ದಾನವಿನೋದಿಯಾಗಿರುವಾಗ । ಸಂತತ ಪುಣ್ಯೋದಯದಿ ॥೩೦॥

ಬಾವಿಯೊಳಿರ್ದ ಜಲವನನುದಿನದ । ಲ್ಲಾವಾಗಲು ತೆಗೆಯುತಿರೆ ॥
ಬಾವಿಯು ಜಲಹೆಚ್ಚುತಿರುವಂತೆ ಗೌಡಗೆ । ಸೌವರ್ಣಧನವು ಹೆಚ್ಚುತಿದೆ ॥೩೧॥

ಇಂತಿಹ ಮಲಗೌಡ ಚಂಡಿಕೆಯನುದಿನ । ಸಂತತಸುಖದೊಳಗಿರಲು ॥
ಸಂತರು ದೇಶಭೂಷಣಗುರುವಿನಲೋಚ । ಸಂತೋಷದಾಹ್ವಾನ ಬಂತು ॥೩೨॥

ಅಂದಿನದಿನವಾವುದೆಂಬುದಕೇಳಿರಿ । ಚಂದದ ವೀರನಿರ್ವಾಣ ॥
ಸಂದಿರಲೆರಡುಸಾವಿರದಾರ್ನೂರೊಂ । ದಂದದೊಂಬತ್ತನೆ ಶಕೆಯ ॥೩೩॥

ಶ್ರಾವಣಶುದ್ಧದಷ್ಟಮಿರವಿವಾರದ । ತೀವಿದ ಶುಭದಿನದಲ್ಲಿ ॥
ದೇವನ ಮಂಗಲ ಪೂಜಾಪೂರ್ವಕವಾಗಿ । ಭಾವನಿರ್ವೇಗದ ಲೋಚು ॥೩೪॥

ಪಟ್ಟಣಕುಡಿಯೊಳು ದೇಶಭೂಷಣನಳ । ವಟ್ಟುಮಾಡುವ ಲೋಚಿಗಾಗಿ ॥
ದಿಟ್ಟನು ಮಲಗೌಂಡ ಪರಿವಾರದೊಡಗೂಡಿ । ಥಟ್ಟನೆ ಗಳತಿಗೆಯಿಂದ ॥೩೫॥

ಹೊರಟುಬರುತ ದಾರಿಯೊಳಕ್ಕೋಳದ । ಪರಮಜಿನೇಂದ್ರನಾಲಯಕೆ ॥
ಪರಿಪರಿವಿಧದರ್ಚನೆಯದ್ರವ್ಯದಿಪೋಗಿ । ಪರಮನ ಪೂಜೆಯಮಾಡಿ ॥೩೬॥

ಅಲ್ಲಿಂದ ಕಾಲಕೆ ಸರಿಯಾಗಿ ಬಂದುತಾ । ನಿಲ್ಲದೆ ಪಟ್ಟಣಕುಡಿಗೆ ॥
ಅಲ್ಲಿ ಸೇರಿದ ಸಾವಿರಮಂದಿ ಭವ್ಯರ । ಸಲ್ಲೀಲೆಯ ಸಭೆಗೈದಿ ॥೩೭॥

ಪರಮನ ಪೂಜಾಪೂರ್ವಕವಾಗಿಹ । ವರಸಿದ್ಧಭಕ್ತಿಯಕೇಳಿ ॥
ಗುರುದೇಶಭೂಷಣ ಸಿದ್ಧರಸ್ಮರಿಸುತ । ಇರದೆ ತನ್ನಯ ಕರದಿಂದ ॥೩೮॥

ಕರ್ಮದ ಬೇರನು ಕಿತ್ತಿಕ್ಕುವಂದದಿ । ನಿರ್ಮಲಮನದಿಂದ ಕೂಡಿ ॥
ಶರ್ಮರ ಗುರುವರನೆತ್ತಿಯ ಕೆನ್ನೆಯ । ಕರ್ಮದ ಕೂದಲ ಕಿತ್ತ ॥೩೯॥

ಕೂದಲು ಕಿತ್ತಿಕ್ಕಿದಮೇಲೆ ಸಭೆಯೆಲ್ಲ । ಮೋದದಿ ಜಯಜಯವೆನಲು ॥
ಆದರ ವಚನದಿಂದುಪದೇಶಮಾಡಲು । ಆದಿಯಿಂದಲಿ ಕೇಳಿದನು ॥೪೦॥

ಗುರುವಿನ ಮುಖದಿಂದುಪದೇಶವಾಗಲು । ಗುರುವಿನ ಶಿಷ್ಯಪಂಡಿತನು ॥
ಗುರುವು ಬರೆದ ಪರಮಾತ್ಮಪ್ರಕಾಶದ । ಸರಸಸಾಂಗತ್ಯವನೋದೆ ॥೪೧॥

ಪರಮಾತ್ಮನ ಬೆಳಕನು ಪ್ರಕಟಿಸಲು । ಸರಸದಿ ಕೊಡುವೆನು ಹಣವ ॥
ಉರುತರ ಸುಖವನು ಪಡೆವೆನೆನ್ನಲು ಕೇಳಿ । ಕರಗಳ ಕುಟ್ಟಿದರೆಲ್ಲ ॥೪೨॥

ಬಳಿಕ ಹೋಶದ ವ್ರತಕೆಲ್ಲರುಗಮಿಸಲು । ಚಲುವ ವ್ರತಿಕರೆಲ್ಲ ಕುಳಿತು ॥
ಗಳತಿಗೆ ಶಾಲೆಯ ಬಾಲಿಕೆಯರು ಬಂದು । ಲಲಿತಕಲೆಯೊಳು ಧರ್ಮವನು ॥೪೩॥

ಸುಲಲಿತದಿಂದ ಪಾಡಿದಮೇಲೆ ಮಲಗೌಡ । ನಲಿಯುತ ದೇವರಿಗೆರಗಿ ॥
ಬಳಿಕ ಗುರುವಿಗೆರಗಿದ ಮೇಲೆ ಪರಿವಾರ । ಸುಲಲಿತವಾಗಿಯು ನಮಿಸೆ ॥೪೪॥

ಪರಮಾತ್ಮಸಿದ್ಧಿರಸ್ತೆಂದು ಗುರುವು ಪೇಳೆ । ಪರಮನ ಶಿಷ್ಯಪಂಡಿತನು ॥
ಪರಮಾತ್ಮಸಿದ್ಧಿಯ ಹಣವಾಗಲೆಬಂತು । ಪರಮಗುರುವೆ ಎಂದೆನಲು ॥೪೫॥

ನೆರೆದಿದ್ದ ಸಭಿಕರೆಲ್ಲರು ನಕ್ಕುನಲಿದಾಡೆ । ಪರಮಾತ್ಮಲಾಭವ ಹೊಂದಿ ॥
ಸರಸದಿ ಮಲಗೌಡ ತನ್ಮಾರ್ಗಪೋದನು । ಮರುದಿನ ಪಂಡಿತ ತನ್ನ ॥೪೬॥

ಕೈಬರೆಹದ ಪ್ರತಿ ಪ್ರಾಕೃತಭಾಷೆಯ । ವೈಭವ ಪ್ರತಿಗಳ ಹೊಂದಿ ॥
ಈ ಭವದೊಳೆ ಪರಮಾತ್ಮನಕಂಡಂತೆ । ಅಭವನ ಸ್ಮರಿಸುತಲ್ಲಿಂದ ॥೪೭॥

ಗುರುವಿಗೆರಗಿ ತ್ಯಾಗಿಜನಗಳಿಗೆರಗಿ । ಸರಸದ ಮಿತ್ರರೆಲ್ಲರಿಗೆ ॥
ಪರಿಪರಿ ವಿನಯವಚನಗಳನುಡಿಯುತ । ಪರಮಸಂತೋಷದಿ ಹೊರಟು ॥೪೮॥

ಬೆಂಗಳೂರಿಗೆ ಬಂದ ಮರುದಿನದಿಂದಲಿ । ಅಂಗಜವಿಜಯ ತತ್ತ್ವವನು ॥
ಶೃಂಗಾರಕಲ್ಯಾಣನಗರದಿ ಮುದ್ರಿಸಿ । ತುಂಗ ವಿದ್ವಾಂಸರಕೈಗೆ ॥೪೯॥

ಮುದದಿಂದಲರ್ಪಿಸಿ ಕೃತಕಾರ್ಯನಾದನು । ಇದರೊಳಗಿರುವ ತಪ್ಪುಗಳ ॥
ಬದಿಗಿಟ್ಟು ಪರಮಾತ್ಮಬೆಳಕನಾದರಿಪುದು । ಚದುರರೆನ್ನುತ ಬೇಡುವೆನು ॥೫೦॥

ಸಿರಿಭರತೇಶ್ವರ ಹೃದಯಭಾಸ್ಕರನ । ಪರಶಿವಮೂರ್ತಿಗೆ ನಮಿಸಿ ॥
ಗುರುದೇಶಭೂಷಣರಾದೇಶವನು ಕೇಳಿ । ಸರಸದಿ ಪರಮಾತ್ಮಬೆಳಕ ॥೫೧॥

ಮಂಗಲವಾಗಲಿಪ್ಪತ್ನಾಲ್ಕಲಗಿನ । ಮಂಗಲಮಯ ರಾಷ್ಟ್ರಧ್ವಜಕೆ ॥
ಮಂಗಲಮಯವಾಗಿರುವಿಪ್ಪತ್ನಾಲ್ವರ । ತುಂಗಜಿನೇಂದ್ರರಂಕಿತಕೆ ॥೫೨॥

ಓಂ

ಶ್ರೀ ಪರಮಾತ್ಮನೇನಮಃ

ಶ್ರೀ ಯೋಗೀಂದು ದೇವ ಆಚಾರ್ಯರು ಜಗತ್ತಿನ ಕಲ್ಯಾಣಾರ್ಥವಾಗಿ ಅಪಭ್ರಂಶ ಭಾಷೆಯಲ್ಲಿ ರಚಿಸಿರುವ "ಪರಮಾತ್ಮ ಪ್ರಕಾಶ ಮತ್ತು ಯೋಗಸಾರ" ಎಂಬ ಎರಡು ಆಧ್ಯಾತ್ಮಿಕ ಗ್ರಂಥಗಳನ್ನು ನಿರ್ಗ್ರಂಥ ಮಹಾಮುನಿಗಳಾದ ಸ್ವಸ್ತಿ ಶ್ರೀ ದೇಶಭೂಷಣ ಯೋಗಿವರ್ಯರು ಕನ್ನಡಕ್ಕೆ ಸಾಂಗತ್ಯ ರೂಪದಲ್ಲಿ ಅನುವಾದ ಮಾಡಿ ಕನ್ನಡ ಜನತೆಗೆ ಮಹದುಪಕಾರ ಮಾಡಿರುತ್ತಾರೆ. ಈ ಗ್ರಂಥಗಳೆರಡನ್ನೂ ಬೊಂಬಾಯಿ ನಗರದ ಶ್ರೀ ರಾಯಚಂದ್ರ ಜೈನ ಶಾಸ್ತ್ರ ಮಾಲೆಯ ವ್ಯವಸ್ಥಾಪಕರು ಸಂಸ್ಕೃತ ಮತ್ತು ಹಿಂದಿ ವ್ಯಾಖ್ಯಾನಗಳೊಡನೆ ಸುದೀರ್ಘವಾದ ಇಂಗ್ಲೀಷ್ ಉಪೋದ್ಘಾತಸಹಿತನಾಗಿ ರಾಯಲ್ ಆಕಾರದ ಸುಮಾರು ಐದುನೂರು ಪುಟಗಳ ಬೃಹದ್ ಗ್ರಂಥವನ್ನಾಗಿ ಪ್ರಕಟ ಮಾಡಿರುತ್ತಾರೆ. ಇದರ ಸಂಪಾದಕರಾದ ಪ್ರೊಫೆಸರ್ ಎ. ಎನ್. ಉಪಾಧ್ಯೆ.ಎಂ ಎ, ಪಿ ಹೆಚ್ ಡಿ, ಡಿ-ಲಿಟ್; ಅವರು ತಮ್ಮ ಅಮೂಲ್ಯವಾದ ಮತ್ತು ಅಗಾಧವಾದ ಸಂಶೋಧನೆಯಿಂದ ಯೋಗಿವರ್ಯರಾದ ಆಚಾರ್ಯ ಶ್ರೀ ಯೋಗೀಂದುದೇವರ ಕಾಲ, ಭಾಷಾ ಶೈಲಿ, ಪ್ರತಿಭೆ ಗಾಢವಾದ ಆಧ್ಯಾತ್ಮ ಚಿತ್ತವೃತ್ತಿ, ಆತ್ಮತತ್ವ ಮೀಮಾಂಸೆಯಲ್ಲಿ ಅವರಿಗಿದ್ದ ವಿಶ್ವ ವಿಶಾಲ ಮನೋಧರ್ಮ. ಇವುಗಳ ವಿಷಯವನ್ನು ಕುರಿತು ವಿಚಾರ ಪೂರಿತವೂ ವಿಮರ್ಶಾತ್ಮಕವೂ ವಿಸ್ತಾರವೂ ಆದ ಮಹಾ ವ್ಯಾಖ್ಯಾನವನ್ನು ತಮ್ಮ ಉಪೋದ್ಘಾತದಲ್ಲಿ ಲೇಖಿಸಿರುತ್ತಾರೆ. ಅವರು ಪ್ರಸ್ತಾವಿಸಿರುವ ಎಲ್ಲ ವಿಷಯಗಳನ್ನೂ ಈ ಪುಟ್ಟ ಮುನ್ನುಡಿಯಲ್ಲಿ ಉಲ್ಲೇಖಿಸುವುದು ಸಾಧ್ಯವೂ ಅಲ್ಲ; ಮತ್ತು ಅದರ ಆವಶ್ಯಕತೆಯೂ ಇಲ್ಲ. ಆದುದರಿಂದ ಮುಖ್ಯ ಸಾರಾಂಶವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಯೋಗೀಂದು ದೇವರ ದೇಶ, ಕಾಲ ಮೊದಲಾದ ಸಂಗತಿಗಳು ಅವರ ಗ್ರಂಥಗಳಿಂದ ಗೊತ್ತಾಗುವುದಿಲ್ಲ. ಅವರ ಹೆಸರು ಮಾತ್ರ ಜೋಯಿಂದು (ಯೋಗಿಂದು) ಎಂದು ಅವರ ಗ್ರಂಥದ ಕೊನೆಯಲ್ಲಿ ಬಂದಿರುವ ವಾಕ್ಯಗಳಿಂದ ಗೊತ್ತಾಗುತ್ತದೆ. ಭಟ್ಟ ಪ್ರಭಾಕರರೆಂಬ ತಮ್ಮ ಶಿಷ್ಯರಿಗೆ ಪರಮಾತ್ಮ ಸ್ವರೂಪವನ್ನು ತಿಳಿಸುವ ನಿಮಿತ್ತವಾಗಿ ಹುಟ್ಟಿದ ಗ್ರಂಥವೇ ಪರಮಾತ್ಮ ಪ್ರಕಾಶವಾಯಿತು. ಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಗೊಮ್ಮಟನೆಂದು ಹೆಸರು ಪಡೆದಿದ್ದ ಚಾಮುಂಡರಾಯನ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಬರೆದ ಗೊಮ್ಮಟಸಾರ ಎಂಬ ಗ್ರಂಥದಂತೆ ಈ ಗ್ರಂಥವೂ ಆಧ್ಯಾತ್ಮಿಕ ವಿಚಾರದಲ್ಲಿ ಭವ್ಯಾತ್ಮರ ಮನಸ್ಸಿನಲ್ಲಿ ಬರುವ ಸಂಶಯಗಳನ್ನು ನಿವಾರಣೆ ಮಾಡುವ ಉದ್ದೇಶದಿಂದ ರಚಿತವಾಗಿರುವುದೆಂದು ಸ್ಪಷ್ಟವಾಗುತ್ತದೆ.

ಪರಮಾತ್ಮ ಪ್ರಕಾಶವನ್ನು ಎರಡು ಅಧಿಕಾರಗಳನ್ನಾಗಿ ಮಾಡಲಾಗಿದೆ. ಒಂದನೆಯ ಅಧಿಕಾರದಲ್ಲಿ ೧೨೬ ಶ್ಲೋಕಗಳೂ ಎರಡನೆಯ ಅಧಿಕಾರದಲ್ಲಿ ೨೧೯ ಶ್ಲೋಕಗಳೂ ಇವೆ. ಮೊದಲನೆಯ ಅಧಿಕಾರದಲ್ಲಿ ಶ್ರೀ ಯೋಗೀಂದು ದೇವರು

ಅವರ ಶಿಷ್ಯರಾದ ಭಟ್ಟ ಪ್ರಭಾಕರರ ಈ ಕೆಳಗಿನ ಪ್ರಶ್ನೆಗೆ ಉತ್ತರ ಕೊಡುತ್ತಾರೆ:— " ಸ್ವಾಮಿ ನಾವು ಅನಾದಿಕಾಲದಿಂದಲೂ ಈ ಭವ ಸಂಸಾರದಲ್ಲಿ ತೊಳಲುತ್ತಿದ್ದೇವೆ. ಸುಖವೆಂಬುದನ್ನು ಕಾಣದೆ ದುಃಖದಲ್ಲಿ ಮುಳುಗಿದ್ದೇವೆ. ದೇವ, ಮನುಷ್ಯ, ತಿರ್ಯಕ್ ನಾರಕಗಳೆಂಬ ಚತುರ್ಗತಿಗಳಲ್ಲಿ ಹುಟ್ಟಿ ಸಾಯುತ್ತಿದ್ದೇವೆ. ಆದುದರಿಂದ ನಮಗೆ ಪರಮಾತ್ಮನ ಸ್ವರೂಪ — ಪರಮ ಪದದ ಲಕ್ಷಣ ಇವುಗಳನ್ನು ತಿಳಿಸಿ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿ" ಈ ಪ್ರಶ್ನೆಗೆ ಉತ್ತರವಾಗಿ ಶ್ರೀ ಯೋಗೀಂದುದೇವರು ಆತ್ಮನ ಸ್ವರೂಪ, ಕರ್ಮದ ಲಕ್ಷಣ, ಜೀವ ಕರ್ಮಸಂಬಂಧ, ರತ್ನತ್ರಯಸ್ವರೂಪ, ಅಷ್ಟಾವರಣಗಳು ಈ ವಿಷಯಗಳನ್ನು 1ನೆಯ ಅಧಿಕಾರದಲ್ಲಿ ತಿಳಿಸುತ್ತಾರೆ. 2ನೆಯ ಅಧಿಕಾರದಲ್ಲಿ ಮೋಕ್ಷಸ್ವರೂಪವನ್ನು ವಿವರಿಸುತ್ತಾರೆ. ಯೋಗಿಜೀವನ ಮತ್ತು ತ್ಯಾಗಿಜೀವನ ಇವುಗಳ ಸ್ವರೂಪ, ಧ್ಯಾನಲಕ್ಷಣ, ಮೋಕ್ಷಪ್ರಾಪ್ತಿಯಿಂದ ಉಂಟಾಗುವ ಅನಂತಾನಂದ, ಇವುಗಳಲ್ಲಿ ದೃಷ್ಟಾಂತಗಳಿಂದ ಸಮರ್ಥಿಸಿ, ವಿವರಿಸುತ್ತಾರೆ -ಗಹನವಾದ ವಿಷಯಗಳನ್ನು ಸರಳವಾಗಿ ಉಪದೇಶಿಸುವುದರಲ್ಲಿ ಶ್ರೀ ಯೋಗೀಂದು ದೇವರು ಅಪ್ರತಿಮರು.

ಶ್ರೀ ಯೋಗೀಂದು ದೇವರ ಜೀವನಚರಿತ್ರೆಯ ವಿಷಯದಲ್ಲಿ ಅವರ ಗ್ರಂಥಗಳಿಂದ ಯಾವ ಸಂಗತಿಗಳೂ ಗೊತ್ತಾಗುವುದಿಲ್ಲ. ಬೇರೆ ಗ್ರಂಥಗಳ ಆಧಾರದಿಂದ ಅವರ ಕಾಲ ನಿರ್ಣಯವನ್ನು ಮಾಡಲಾಗಿದೆ. ಶ್ರೀ ಯೋಗೀಂದು ದೇವರು ಶ್ರೀ ಕುಂದ ಕುಂದಾಚಾರ್ಯರ ಮತ್ತು ಶ್ರೀ ಪೂಜ್ಯಪಾದರ " ಮೊಖ್ಖ ಪಾಹುಡ " ಮತ್ತು " ಸಮಾಧಿ ಶತಕ " ಗ್ರಂಥಗಳನ್ನು ಚೆನ್ನಾಗಿ ಮನನಮಾಡಿ, ಸಾಧಾರಣ ಜನರ ಭಾಷೆಯಾದ ಅಪಭ್ರಂಶದಲ್ಲಿ ಮೇಲಿನ ಪ್ರಾಕೃತ ಮತ್ತು ಸಂಸ್ಕೃತ ಗ್ರಂಥಗಳಲ್ಲಡಕವಾಗಿರುವ ತತ್ವಗಳನ್ನು ಸರಳ ಶೈಲಿಯಲ್ಲಿ ಬೋಧಿಸಿರುತ್ತಾರೆ. ಶ್ರೀ ದೇವರು ಶ್ರೀ ಪೂಜ್ಯಪಾದರಂತೆ ವೈಯಾಕರಣರಲ್ಲ. ವ್ಯಾಕರಣಕ್ಕೂ ಛಂದಸ್ಸಿನ ನಿಯಮಕ್ಕೂ ಅಷ್ಟು ಗಮನ ಕೊಟ್ಟವರಲ್ಲ. ಆದರೆ ಶ್ರೀ ದೇವರು ಆತ್ಮ ಜ್ಞಾನಿಗಳು. ಕಣ್ಣು ಮುಚ್ಚಿದರೆ ಪರಮಾತ್ಮನ ಸ್ವರೂಪವನ್ನು ನೋಡುತ್ತಿದ್ದ ಯೋಗಿಗಳು. ಅವರ ಸಾಧಾರಣ ಪ್ರಪಂಚದಿಂದ ಮೇಲಿನ ಅಂತಸ್ಥಿನಲ್ಲಿದ್ದ ಅಲೌಕಿಕ ಆಧ್ಯಾತ್ಮಿಕ ಸಾಮ್ರಾಜ್ಯದ ಸಮ್ರಾಟರು. ಅವರ ಧ್ಯಾನದೃಷ್ಟಿಯಲ್ಲಿ ಅವರ ಜೀವಾತ್ಮನು ಪರಮಾತ್ಮನೊಂದಿಗೆ ಒಂದು ಅಂತರ್‌ಮುಹೂರ್ತದಲ್ಲಿ ಲೀನವಾಗುತ್ತಿದ್ದನು. ಈ ಯೋಗಿ ಶ್ರೇಷ್ಠರ ಮನೋಧರ್ಮವು ಸಾಧಾರಣ ಮನುಷ್ಯನ ನಿಲುವಿಗೆ ಅಡಕವಾಗದು. ಇವರ ಅನುಭವವು ವಿಜ್ಞಾನದ ಅಥವಾ ಬುದ್ಧಿಯ ಅಂತಸ್ತನ್ನು ಮೀರಿ ಅಂತರ್ದೃಷ್ಟಿಯ ಕ್ಷೇತ್ರವನ್ನು ಪ್ರವೇಶಿಸುವುದು. ಶ್ರೀ ಯೋಗೀಂದು ದೇವರನ್ನು ಧ್ಯಾನದಿಂದಲೂ, ಆತ್ಮಾರ್ಪಣದಿಂದಲೂ ಪರಮಾತ್ಮನಲ್ಲಿ ಐಕ್ಯನಾಗುವ ಶಕ್ತಿಯುಳ್ಳ ಮುಮುಕ್ಷುವೆಂದು ಕರೆಯಬಹುದಾಗಿದೆ. ಇವರು ಅತೀಂದ್ರಿಯ ವಾದಿಗಳಾದ ಮಹಾ ಯೋಗಿಗಳಾಗಿದ್ದರೆಂಬುವುದರಲ್ಲಿ ಸಂಶಯವಿಲ್ಲ. ಶ್ರೀ ಯೋಗೀಂದು ದೇವರು ಕ್ರಿ. ಶ. ೬ ನೆಯ

ಶತಮಾನದಲ್ಲಿದ್ದರೆಂದು ಪ್ರೊಫೆಸರ್ ಎ. ಎನ್. ಉಪಾಧ್ಯೆ ಅವರು ಅಭಿಪ್ರಾಯ ಪಡುತ್ತಾರೆ.

ಶ್ರೀ ಯೋಗೀಂದು ದೇವರ ಆಧ್ಯಾತ್ಮಿಕ ಅನುಭವಾಮೃತದ ರಸದುಣಿಸನ್ನು ಯೋಗಿವರ್ಯರಾದ ಶ್ರೀ ದೇಶ ಭೂಷಣ ಮಹಾ ಮುನಿಗಳು ಸುಲಭವೂ ಸರಳವೂ ಆದ ಕನ್ನಡ ಹಾಡು ಗಬ್ಬದ ರೂಪದಲ್ಲಿ ಒದಗಿಸಿ ಆತ್ಮಜ್ಞಾನ ಪಿಪಾಸುಗಳಿಗೆ ತಣಿವನ್ನೂ ಅಲೌಕಿಕಾನಂದವನ್ನೂ ಉಂಟುಮಾಡಿರುತ್ತಾರೆ. ಪರಮಾತ್ಮನ ಸ್ವರೂಪವನ್ನು ಉಚ್ಚ ರೀತಿಯಲ್ಲಿ ಸಾಂಗತ್ಯದಲ್ಲಿ ಹಾಡಿರುವ ರತ್ನಾಕರ ಮಹಾ ಕವಿಯ ನೆನಪು ಈ ಗ್ರಂಥವನ್ನು ಓದಿದಾಗಲೆಲ್ಲಾ ಉಂಟಾಗುವುದು.

ಕೊನೆಯಲ್ಲಿ ಒಂದು ಅರಿಕೆ. ಶ್ರೀ ಯೋಗೀಂದು ದೇವರ ಈ ಆಧ್ಯಾತ್ಮಿಕ ಗ್ರಂಥಕ್ಕೆ ಅನೇಕ ಕನ್ನಡ ವ್ಯಾಖ್ಯಾನಗಳಿವೆ. ಮಲಧಾರಿ ಬಾಲ ಚಂದ್ರರ ಕನ್ನಡ, ವ್ಯಾಖ್ಯಾನ ಸಹಿತವಾಗಿ ಪರಮಾತ್ಮ ಪ್ರಕಾಶವು ಪ್ರಕಟಿತವಾದರೆ ಕನ್ನಡಕ್ಕೊಂದು ನವೀನ ಆಭರಣವೊಂದನ್ನು ತೊಡಿಸಿದಂತಾಗುವುದು. ಈ ಗ್ರಂಥದ ಪ್ರಕಾಶಕರಿಗೂ ಸಂಪಾದಕರಿಗೂ ಕನ್ನಡ ನಾಡು ಚಿರಋಣಿ. ಈ ಗ್ರಂಥ ಕನ್ನಡ ಜನತೆಯ ಕೈಗನ್ನಡಿಯಾಗಲಿ.

ಬೆಂಗಳೂರು, ಕೆ. ಎಸ್. ಧರಣೇಂದ್ರಯ್ಯ.
೧೦--೧--೧೯೪೯.

ಸರ್ವಾರ್ಥ ಸಿದ್ಧಿ ಕಂಪನಿಯುವರ ಪ್ರಕಟಣೆ.

ಮಹಾಶಯರೇ!

ಶ್ರೀ ಸಮ್ಮೇದ ಶಿಖರಾದಿ ಪವಿತ್ರ ತೀರ್ಥಕ್ಷೇತ್ರಗಳಿಗೆ ಪ್ರತಿವರುಷವೂ. ಕಾರ್ತಿ ಮಾಸದಲ್ಲಿ ಯಾತ್ರೆಹೋಗಿಬರಲು ಸ್ಪೆಷಲ್ ರೈಲುಗಳನ್ನು ಏರ್ಪಾಡು ಮಾಡಲಾಗ ತ್ತಾದುದರಿಂದ ಯಾತ್ರೆಗೆ ಬರುವ ಯಾತ್ರಿಕರೆಲ್ಲರೂ ಒಬ್ಬರಿಗೆ ಒಂದುನೂರ ಎಪ್ ತ್ತೈದು ರೂಪಾಯಿಗಳಂತೆ ಎರಡು ತಿಂಗಳಿಗೆ ಮುಂಚೆ ಪಾವತಿಮಾಡಿ ಅಥವ 50-0-0 ಐವತ್ತುರೂಪಾಯಿನಂತೆ ಅಡ್ವಾನ್ಸ್ ಪಾವತಿಮಾಡಿ ರಸೀದಿ ಪಡೆಯ ಬೇಕಾಗಿ ವಿನಂತಿ. ಉಳಿದ ವಿಷಯುಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಸರ್ವಾರ್ಥ ಸಿದ್ಧಿ ಕಂಪನಿ,
359, ವಿಶ್ವೇಶ್ವರಪುರಸರ್ಕಲ್
ಬೆಂಗಳೂರುಸಿಟಿ.

ತಮ್ಮವಿಧೇಯರು,
ಮೆಸರ್ಸ್ ಎಂ.ವೈ.ಧರ್ಮಪಾಲ್ ಅಂಡ್ ಬ್ರದರ್, ಅವರು

ಒಂದನೆಯಾತ್ರೆ	ಎರಡನೆಯಾತ್ರೆ	ಮೂರನೆಯಾತ್ರೆ
1935ನೆ ಜನವರಿ	1948ನೆ ಮಾರ್ಚಿ	1949ನೆ ಫೆಬ್ರವರಿ

ಶ್ರೀ ೧೮ಲ ದೇಶಭೂಷಣ ಮಹಾಮುನಿ ಗ್ರಂಥಮಾಲೆಯ ಮಣಿ ೧೦
(ಕರ್ನಾಟಕಶಾಖೆ)

ಶ್ರೀ ಯೋಗೀಂದ್ರ ದೇವಾಚಾರ್ಯ ವಿರಚಿತ

ಪರಮಾತ್ಮ ಪ್ರಕಾಶ

(ಆಧ್ಯಾತ್ಮ, ಸಾಂಗತ್ಯ) (ಕನ್ನಡ ಅನುವಾದ)

ಪ್ರಸ್ತಾವನೆಯ ಸಂಧಿ

ಸಿರಿಭರತೇಶ್ವರ ಹೃದಯಭಾಸ್ಕರನ । ಅರಿಕರ್ಮಗಳ ಸುಟ್ಟವನ ॥
ಸುರುಚಿರ ಮನದಿಂದ ಪ್ರಥಮಜಿನೇಶನ । ವರಪಾದ ಪದ್ಮವನೆನೆದು ॥೧॥

ವೃಷಭ ಜಿನೇಶನೆ ಪರಮ ಪ್ರಕಾಶನೆ । ಅಸಮ ಪಾಪವಗೆಲಿದವನೆ ॥
ವೃಷಭಲಾಂಛನ ದೇವ ಮತಿದೋರು ವಂದಿಪೆ । ಹಸನಾದಮನದಿಂದ ನಾನು ॥೨॥

ಅಜಿತಜಿನೇಶನೆ ಜಿತಮೋಹಮಲ್ಲನೆ । ಅಜರಾಮರ ಸುಖಮಯನೆ ॥
ನಿಜದಿಂದ ಮತಿದೋರು ನಿಜದೋರು ನನಗೆಂದು । ನಿಜಮನದಿಂದೆರಗುವೆನು ॥೩॥

ಶಂಭವಜಿನಪತಿ ನಂಬಿದ ಭಕ್ತರ । ಬೆಂಬಿಡದಲೆ ಪೊರೆವವನೆ ॥
ಇಂಬಾಗಿ ರಕ್ಷಿಸಿ ನಡೆಸು ಕಾವ್ಯವನೆಂದು । ನಂಬುಗೆಯಿಂದ ನುತಿಪೆನು ॥೪॥

ಇವರ ದಿವ್ಯಧ್ವನಿಯಾದ ಶಾರದೆಯ ಮ । ತ್ತಿವರ ಗಣದಿ ಮುಖ್ಯರಹರ ।
ಧವರ ಶ್ರೀಗಣಧರದೇವರ ನುತಿಸಿ ನಾ ! ನವಿಚಳಸುಖತೃಪ್ತನಹೆನು ॥೫॥

ದೋಷವಿನಾಶನ ತ್ರಿಭುವನಖ್ಯಾತನ । ಶ್ರೀಶಯೋಗೀಂದ್ರಾರ್ಯನ ಶ್ರೀ॥
ಭಾಸುರ ಚರಣಕೆ ದೇಶಭೂಷಣನಾನು । ಮಾಸದ ಮನದಿ ವಂದಿಪೆನು ॥೬॥

ದೇವರು ಗುರುಶಾಸ್ತ್ರಗಳನು ವಂದಿಸಿ ಮತ್ತೆ । ತೀವಿದ ಭಕ್ತಿಯಭರದಿ ॥
ದೇವಯೋಗೀಂದ್ರರ ಗುರುಗಳ ಭಕ್ತಿಯಿಂ । ದಾವಾಗಲು ವಂದಿಪೆನು ॥೭॥

ಭರತಾರ್ಯಖಂಡದ ದಕ್ಷಿಣಭಾಗದಿ । ಸುರುಚಿರ ಕರ್ನಾಟದೇಶ ॥
ನಿರುತದಿ ಮೆರೆವುದು ಪರಮನ ಬಸದಿಯಿಂ । ವರಭವ್ಯಜನರಿಂದಕೂಡಿ ॥೮॥

ಅದರೊಳು ನವಖಂಡ ಪಾರ್ಶ್ವನಾಥನಕ್ಷೇತ್ರ । ಚದುರಿಂದ ಸ್ತವನಿಧಿಯಹುದು ॥
ಅದರ ಬಳಿಯೊಳು ಪಟ್ಟಣಕುಡಿಯೆಂದೆಂಬ । ಸದಮಲನಗರ ಒಪ್ಪಿಹುದು ॥೯॥

ಸಿರಿ ಪಾರ್ಶ್ವನಾಥನ ಸುರುಚಿರ ಪ್ರತಿಮೆಯಿಂ । ಪರಮನ ಬಸದಿಯೊಪ್ಪಿಹುದು ॥
ಪರಮನ ಮಂಡಪದಿದಿರೊಳು ಮೆರೆಯುತ ! ವರಗುಹೆಯಿಹುದದರಲ್ಲಿ ॥೧೦॥

ಹುಂಡಾವಸರ್ಪಿಣಿಕಾಲದ್ವೈದನೆಯ । ಮಂಡಿತವಾಗಿಹ ಪ್ರಥಮ ।
ಖಂಡದ ಶ್ರೀವೀರ ನಿರ್ವಾಣಶಕೆಯೊಳು । ಮಂಡಿತವೆರಡು ಸಾವಿರದ ॥೧೧॥

ಆರುನೂರೊಂಬತ್ತನೆಯ ಲೆಕ್ಕದೊಳಪ್ಪ । ಸರ್ವಜಿನ್ನಾಮವತ್ಸರದ ॥
ವರಚಾತುರ್ಮಾಸದಧಿಕಶ್ರಾವಣದ । ಉರುತರ ಶುದ್ಧಪಕ್ಷದಲಿ ॥೧೨॥

ಅಷ್ಟವು ಪೃಥಿವಿಯೊಳಷ್ಟಕರ್ಮವಗೆಲ್ದು ಅಷ್ಟಗುಣಗಳಿಂದೊಪ್ಪುವನ ॥
ದಿಟ್ಟ ಜಿನೇಂದ್ರನಸ್ಮರಿಸಿ ಪಂಚಮಿಯೊಳು ! ಸೃಷ್ಟಿಸಿರುವೆನೀಕೃತಿಯ ॥೧೩॥

ಉಂಡುಟ್ಟವೋಜಿನ ಕಥೆಯಲ್ಲವೀ ಕಾವ್ಯ । ಖಂಡಿತ ಶುಕ್ಲಧ್ಯಾನವನು ॥
ಮಂಡಿಸಿ ಪೇಳ್ವುದು ಪರಮಾತ್ಮಕಲೆಯುನ । ಖಂಡಭಕ್ತಿಯೊಳಿದಕೇಳಿ ॥೧೪॥

ಪರಮಾತ್ಮನನು ಪ್ರಕಾಶಿಸುವೀಕೃತಿ । ಪರಿಪರಿಬಗೆಯ ಸುಖಗಳ ।
ಸಿರುತದೊಳೀವುತ ಚರಮಸಮಯದೊಳು । ಪರಮಸುಖವನೀವುದಲ್ತೆ ॥೧೫॥

ಆದರಿಂದ ಲಾಲಿಸಿಕೇಳ್ವುದೀ ಕೃತಿಯನು । ಸದಮಲಚಿತ್ತದೊಳ್ನೀವು ॥
ಚದುರಿಂದ ಕೇಳಿದಮೇಲೆ ಭಾವಿಸಿದೊಡೆ । ಕದಲಿಹೋಗುವುವು ಕರ್ಮಗಳು ॥೧೬॥

ತಪ್ಪಿದ್ದೊಡೆ ತಿದ್ದುವುದು ಕೋವಿದರು ಮತ್ತೆ । ತಪ್ಪಿಲ್ಲದುದ ಭಾವಿಪುದು ॥
ತಪ್ಪುಂಟು ಒಪ್ಪುಂಟು ಕಾವ್ಯದೊಳಾದರು । ಒಪ್ಪಿರಿಪರಮಾತ್ಮಕಲೆಯ ॥೧೭॥

ಜಿನಮುನಿಗಳು ಪೇಳ್ದವಾಕ್ಯದಿ ತಪ್ಪಿಲ್ಲ । ವೆನುತಲಿ ಪೇಳಿಹಜಿನನು ।
ಜಿನವಾಕ್ಯವನಂಬಿ ನಡೆವುದೆಸಮ್ಯಕ್ತ್ವ । ವೆನುತ ಭಾವಿಸಿ ಕಾವ್ಯವಿದನು ॥೧೮॥

ಅಭಿನಂದನೇಶನ ಶುಭಸಂದೇಶನ । ಇಭರಿಪು ಪೀಠದೊಳಿಹನ ॥
ಅಭಿಮತಸಿದ್ಧಿಯನಿತ್ತು ರಕ್ಷಿಪುದೆಂದು । ಶುಭಮತಿಯಿಂದೆರಗುವೆನು ॥೧೯॥

ಸುಮತಿ ಜಿನೇಶನ ಕುಮತಿಯ ಹರಣನ । ಕ್ರಮವಿರಹಿತಧ್ವನಿಯುತನ ।
ನಮಿತಸುರಾಸುರವಂದಿತಪಾದನ । ನಮಿಸುವೆ ಪರಮಾತ್ಮನನ್ನು ॥೨೦॥

ಪದ್ಮಪ್ರಭೇಶನ ಪದ್ಮಪ್ರಕಾಶನ । ಪದ್ಮಲಾಂಛನ ಪದ್ಮಪ್ರಭನ ।
ಪದ್ಮವು ಮುಗುಳ್ವಂತೆ ಕರಗಳ ಮುಗಿದುನಾ । ಪದ್ಮಜಿನೇಶನ ನುತಿಪೆ ॥೨೧॥

ದೋಷವಿನಾಶನ ತ್ರಿಭುವನಖ್ಯಾತನ । ಶ್ರೀಶಯೋಗೀಂದ್ರಾರ್ಯನ ಶ್ರೀ ॥
ಭಾಸುರ ಚರಣಕೆ ದೇಶಭೂಷಣನಾನು । ಮಾಸದ ಮನದಿ ವಂದಿಪೆನು ॥೨೨॥

ಇಲ್ಲಿಗೆ ಪೀಠಿಕಾ ಪ್ರಕರಣವು ಮುಗಿದುದು

ಓಂ

ಸ್ವಸ್ತಿಶ್ರೀ ೧೦೮ ದೇಶಭೂಷಣ ಮಹಾಮುನಿ ಗ್ರಂಥಮಾಲೆಯ ಮಣಿ. ೧೦

ಶ್ರೀ ಯೋಗೀಂದ್ರ ದೇವಾಚಾರ್ಯ ವಿರಚಿತವಾದ

ಪರಮಾತ್ಮಪ್ರಕಾಶ

(ಕನ್ನಡ ಅನುವಾದ)

(ಪ್ರಥಮ ಮಹಾಧಿಕಾರ) (ಪ್ರಥಮಸ್ಥಲದ ಏಳು ದೋಹೆಗಳು)

ಶ್ರೀ ಬ್ರಹ್ಮದೇವರ ಮಂಗಲಾಚರಣ :--

ಶ್ರೀ ಜಿನಪರಮಾನಂದೈಕಸ್ವರೂಪ। ನಿಜಾನಂದ ನಂದ ಚಿದ್ರೂಪ ॥
ಅಜರಪರಾತ್ಮಪ್ರಕಾಶ ಸುದೀಪನ। ನಿಜಭಕ್ತಿಯಿಂದ ವಂದಿಪೆನು ॥೧॥

ಶ್ರೀ ದೇಶಭೂಷಣರ ಮಂಗಲಾಚರಣ :--

ಸನ್ಮುನಿಪೂಜಿತನಾದ ಸುಪಾರ್ಶ್ವನ। ಸನ್ಮತಿಯನುಪಾಲಿಸೆಂದು ॥
ಮನ್ಮಥಬಾಣವ ನಾಶಗೈವುದಕಾಗಿ। ಮನ್ಮನದಿಂದ ವಂದಿಪೆನು ॥೨॥

ಅಷ್ಟಕರ್ಮವಗೆಲ್ದು ಶಿಷ್ಟಪೂಜಿತನಾದ। ಅಷ್ಟಮಜಿನ ಚಂದ್ರಪ್ರಭನೆ।
ದುಷ್ಟಕರ್ಮವ ಕಳೆವುದಕಾಗಿ ನಿನ್ನಯ। ಶಿಷ್ಟಪಾದಗಳನು ನುತಿಪೆ ॥೩॥

ಪುಷ್ಪದಂತೇಶನೆ ಪುಷ್ಪಸಮೀರನೆ। ಪುಷ್ಪಬಾಣನ ಗೆಲಿದವನೆ।
ನಿಷ್ಪನ್ನಮನದಿಂದ ವಂದಿಪೆನನುಗಾಲ। ಪುಷ್ಪದಂತನ ಜಿನಪತಿಯ ॥೪॥

ಶ್ರೀ ಬ್ರಹ್ಮದೇವರ ಉತ್ಥಾನಿಕೆ:....

ಮೊದಲನೆಯ ಪಾತನಿಕೆಯ ಅಭಿಪ್ರಾಯದಂತೆ ವ್ಯಾಖ್ಯಾನದ ಮೊತ್ತಮೊದಲು ಗ್ರಂಥಾದಿಯಲ್ಲಿ ಶ್ರೀ ಯೋಗೀಂದ್ರದೇವಾಚಾರ್ಯರು ಮಂಗಲಪೂರ್ವಕವಾಗಿ ಇಷ್ಟ ದೇವತಾ ನಮಸ್ಕಾರ ರೂಪವಾದ ಒಂದು ದೋಹಕಸೂತ್ರವನ್ನು ಪ್ರತಿಪಾದಿಸುತ್ತಾರೆ.

ಶ್ರೀ ಯೋಗೀಂದ್ರಾಚಾರ್ಯರ ಮಂಗಲಾಚರಣ :--

ಕರ್ಮಕಲಂಕವ ನಿರ್ಮೂಲನಮಾಡಿ। ನಿರ್ಮಲರೂಪನೆಂದೆನಿಪ ॥
ಶರ್ಮನಿರಂಜನ ಜ್ಞಾನಮಯಾತ್ಮನ। ನಿರ್ಮಲ ಪರಮನನುತಿಪೆ ॥೧॥

ಉತ್ಥಾನಿಕೆ :— ಸಂಸಾರಸಾಗರವನ್ನು ದಾಟಲು ಉಪಾಯವಾದ ವೀತರಾಗ ನಿರ್ವಿಕಲ್ಪ ಸಮಾಧಿಯೆಂಬ ಹಡಗುಹತ್ತಿ ಮುಂದಣಕಾಲದಲ್ಲಿ ಕಲ್ಯಾಣ

ಮಯನೂ ಅನುಪಮನೂ ಆಗಲಿರುವ ಜ್ಞಾನಮಯನಾದ ಆತ್ಮನಿಗೆ ನಮಸ್ಕಾರ ಮಾಡುವರು :—

ಭಾವಿಕಾಲದೊಳಪ್ಪನಂತಸಿದ್ಧರು ತಾವು । ತೀವಿ ಸಮಾಧಿವಡೆವರು ॥
ಶಿವಮಯನಿರುಪಮಜ್ಞಾನಮಯಾತ್ಮರ । ಅವರಡಿಗಳಿಗೆರಗುವೆನು ॥೨॥

ಉತ್ಥಾನಿಕೆ :—ಪರಮಸಮಾಧಿಯೆಂಬ ಬೆಂಕಿಗೆ ಕರ್ಮವೆಂಬ ಕಟ್ಟಿಗೆಗಳನ್ನು ಹೋಮಮಾಡಿ ಸುಡುವುದಕ್ಕಾಗಿ ವರ್ತಮಾನಕಾಲದ ಸಿದ್ಧರಿಗೆ ನಮಸ್ಕಾರ ಮಾಡುವರು : —

ಭೂತಕಾಲದೊಳಪ್ಪನಂತ ಸಿದ್ಧರು ತಾವು । ಪೂತಸಮಾಧಿವಡೆದರು ॥
ಖ್ಯಾತ ಕರ್ಮೇಂಧನಗಳನು ಸುಟ್ಟುರುಹಿ ವಿ । ಖ್ಯಾತರಾದವರ ನುತಿಪೆನು ॥೩॥

ಉತ್ಥಾನಿಕೆ :—ಭೂತಕಾಲದಲ್ಲಿ ಸ್ವರೂಪ ಪ್ರಾಪ್ತಿಪಡೆದು ನಿರ್ವಾಣ ಸುಖದಲ್ಲಿರುವ ಸಿದ್ಧರಿಗೆ ನಮಸ್ಕರಿಸುವರು :—

ತುಂಗಜ್ಞಾನವ ಹೊಂದಿ ಸಿದ್ಧ ಸಮೂಹವು । ಹಿಂಗದೆ ಮುಕ್ತಿಯೊಳಿಹುದು ।
ಮಂಗಳಮೂರ್ಲೋಕ ಗುರುವಾದ ಸಿದ್ಧರ । ತುಂಗಭಾವದೊಳು ವಂದಿಪೆನು ॥೪॥

ಉತ್ಥಾನಿಕೆ:—ವ್ಯವಹಾರನಿಶ್ಚಯನಯಾಶ್ರಯದಿಂದ ತಿಳಿಯಬೇಕಾದ ಸಿದ್ಧರ ಸ್ವರೂಪವನ್ನು ನಿಶ್ಚಯನಯದ ಆಶ್ರಯದಿಂದ ಹೇಳುವರು :—

ಮತ್ತೆ ವಂದಿಪೆನಾನು ಸಿದ್ಧಸಮೂಹವ । ನಿತ್ಯ ಸುಖವನುಣುತಿಹರ ।
ಸುತ್ತು ಲೋಕಾಲೋಕವವೆಲ್ಲವನರಿವ । ಉತ್ತುಂಗ ಗುಣವಪ್ಪೊಂದಿಹರ ॥೫॥

ಉತ್ಥಾನಿಕೆ:—ನಿಷ್ಕಲಾತ್ಮರಾದ ಸಿದ್ಧಪರಮಾತ್ಮರ ಶುದ್ಧ ಸ್ವರೂಪವನ್ನು ಪಡೆಯಲು ಉಪಾಯವನ್ನು ಹುಡುಕುತ್ತ ಮೋಕ್ಷಮಾರ್ಗದಲ್ಲಿರುವ ಸಕಲಾತ್ಮರಿಗೂ ನಮಸ್ಕಾರ ಮಾಡುವರು :—

ಕೇವಲದರ್ಶನ ಜ್ಞಾನಮಯಾತ್ಮರ । ಕೇವಲ ಸುಖಸ್ವಭಾವವನು ॥
ತೀವಿದ ಭಕ್ತಿಯಿಂ ಜಿನರವಂದಿಸಿ ನಾ । ನೋವಿದ ಬೆಳಕನು ಪಡೆವೆ ॥೬॥

ಉತ್ಥಾನಿಕೆ:—ಬೇದಾಭೇದ ರತ್ನತ್ರಯಾರಾಧಕರಾದ ಆಚಾರ್ಯೋಪಾಧ್ಯಾಯ ಸಾಧುಗಳಿಗೆ ನಮಸ್ಕರಿಸುವರು :—

ಪರಮಸಮಾಧಿಯ ಧರಿಸಿದ ಮುನಿಗಳ । ಪರಮಾತ್ಮಸಿದ್ಧಿಗೋಸುಗ ನಾ ॥
ಪರಮಾನಂದದಿ ಮೂವರು ಗುರುಗಳ್ಗೆ । ಪರಮಭಕ್ತಿಯೊಳೆರಗುವೆನು ॥೭॥

ಉತ್ಥಾನಿಕೆ :—ಹೀಗೆ ಶ್ರೀ ಯೋಗೀಂದ್ರದೇವಾಚಾರ್ಯರು ತಮ್ಮ ಶಿಷ್ಯ ಪ್ರಭಾಕರ ಭಟ್ಟನಿಗೆ ಪಂಚ ಪರಮೇಷ್ಠಿಗಳ ನಮಸ್ಕಾರರೂಪವಾದ ಮಂಗಲವನ್ನು



ಚಾರಿತ್ರಚಕ್ರೇಶ್ವರರೆಂಬ ಪೆಸರಿನಿಂ । ಧಾರಿಣಿಯೊಳು ಕೀರ್ತಿವಡೆದು ॥
ಸಾರುತಲುಭಯಚಾರಿತ್ರವ ರಕ್ಷಿಪ । ಧೀರರು ಶಾಂತಿಸಾಗರರು ॥*॥

ಅವರಿಂದ ಮುನಿದೀಕ್ಷೆವಡೆದಾಚಾರ್ಯರು।ಅವರು ಸ್ಯಾದ್ವಾದವಾಗ್ಮಿಗಳು॥
ಸುವಿಮಲಮತಿಗಳಾಗಿಹ ಪಾಯಸಾಗರ । ರವರಿಂದ ದೀಕ್ಷೆಯ ಧರಿಸಿ॥*॥

ಜಯಿಸುತ ಕರ್ಮನ ತಪವನಾಚರಿಸಿ । ಜಯಕೀರ್ತಿಯೋಗೀಶ್ವರರು ॥
ಭಯಬಡಿಸುವ ಮರಣವ ಸಲ್ಲೇಖನದಿಂದ।ಜಯಿಸಿದವರು ಲೀಲೆಯಲಿ॥*॥

ಅವರಿಂದ ಮುನಿದೀಕ್ಷೆಯ ಪೊಂದಿ ಧರ್ಮವ। ಪ್ರವಿಮಲವಾಗಿ ಬೆಳಗುತ ॥
ಅವರಂದದಿ ಪಾಲಿಸುತಲಿ ಮೆರೆಯುವ।ಸುವಿವೇಕಿ **ದೇಶಭೂಷಣನು**॥*॥

ಶ್ರೀ ಜಿನಮುದ್ರೆಯ ಧರಿಸಿಚಾರಿತ್ರವ । ನೈಜದಿ ಪಾಲಿಸುತಿರುವ ॥
ಶ್ರೀ ಜಿನಮುನಿ **ದೇಶಭೂಷಣಗುರುವು**।ಶ್ರೀಜಿನ ಬೆಳಕನು ಪೇಳ್ದ ॥*॥



ಮಾರಮದನಪ್ರದ್ಯುಮ್ನಝುಷಧ್ವಜ । ನಾರಿಸುನಂದೆಯ ಕಂದ ॥
ಶೂರನೆ ಭುಜಬಲಿದೋರ್ಬಲಿಕೇವಲಿ । ಧೀರನೆ ಬಾಹುಬಲೀಶ ॥*॥

ಮಾನವರೆಲ್ಲರ ಮನವಪಹರಿಸುವ । ಮಾನಸಮಥನ ಮನ್ಮಥನೆ ॥
ಭೂನುತ ಚಾಮುಂಡರಾಜನ ದೇವನೆ । ಸಾನುರಾಗದಿ ಪೊರೆಯೆನ್ನ ॥*॥

ನಿನ್ನ ರೂಪನುಪೊಂದಿ ನಿನ್ನ ಧ್ಯಾನದೊಳಿಹ । ನಿನ್ನಯ ದೇಶಭೂಷಣನ ॥
ಸನ್ನುತ ಮನೆದಲಿ ಬಿಡದೆ ವಾಸಿಸುತಿರು । ನಿನ್ನ ಪಾದಕೆ ನಮಿಸುವೆನು ॥*॥

ಪೌದನಾಪುರದೊಳಗಿರುವ ಮಹಾಮೂರ್ತಿ । ಸದನವ ತೊರೆವುದಕಾಗಿ ॥
ಮೃದುಯುದ್ಧ ಮೂರರೊಳಣ್ಣನಗೆಲಿದಿಹ । ಮದನನು **ಗೋಮಟೇಶ್ವರನು** ॥*॥

ಶ್ರವಣಬೆಳ್ಗೊಳದೊಳಗಿರುವ ಮಹಾಕಾಯ । ಶ್ರವಣರ ಗುರು ಪಂಡಿತರ ॥
ಅವರ ಶ್ರೀಮಠವ ಭಕ್ತರ ಪಾಲಿಸುತ್ತಿಹ । ದಿವಿಜಪೂಜಿತ **ಗೋಮಟೇಶ** ॥*॥

ಉಪದೇಶಿಸುವ ರೂಪದ ಪರಮಾತ್ಮ ಪ್ರಕಾಶದ ಪ್ರಥಮ ಮಹಾಧಿಕಾರದಲ್ಲಿ ಪ್ರಥಮಸ್ಥಲದ ಏಳು ದೋಹೆಗಳ ಪೀಠಿಕೆಯು ಮುಗಿದುದು.

ಶೀತಲಜಿನಪತಿ ಭೂತಲಪತಿವಂದ್ಯ । ಮಾತಿಗು ಮನಕು ಸಿಲ್ಕದನೆ ।
ಪ್ರೀತಿಯಿಂ ನುತಿಸಿನಾಂ ಖ್ಯಾತಿಯಗಳಿಸುವೆ । ಸಾತಿಶಯದಿ ಪೊರೆಯೆನ್ನ ||*||
ಶ್ರೇಯಾಂಸ ಜಿನಪನ ನುತಿಸಿ ನಾ ಪಡೆಯುವೆ । ಶ್ರೇಯೋಮಾರ್ಗವೆಲ್ಲವನು ||
ಶ್ರೇಯಾಂಸಿ ಬಹು ವಿಘ್ನಾನಿಯೆನ್ನುವ ಮಾತ । ಆಯದಿಕಳೆದು ಬಿಟ್ಟವನ ||*||
ವಾಸುಪೂಜ್ಯೇಶನ ಮಾಸದ ಮನದಿಂದ । ವಾಸವನಂತೆ ಪೂಜಿಸುವೆ ||
ವಾಸವಪೂಜಿತನಾದ ಜಿನೇಶನ । ಸಾಸಿರನಾಮವ ಪೊಗಳ್ವೆ ||*||

ತ್ರಿವಿಧಾತ್ಮಾಧಿಕಾರವು

ವಿಮಲಜಿನೇಶನು ಅಮಲಧರ್ಮವ ಪೇಳ್ದ । ಅಮಿತತೇಜನು ಜಿನವರನು ||
ನಮಿತ ಸುರಾಸುರವಂದಿತಪದಪದ್ಮ । ಸುಮತಿಯನಿತ್ತು ರಕ್ಷಿಪುದು ||*||
ಸಾಕೇತಪುರದಧಿಪತಿಯಾಗಿದ್ದರು । ನೂಕಿ ಸಮಸ್ತ ಪವವನು ||
ವ್ಯಾಕುಲರಹಿತನನಂತ ಜಿನೇಶಗೆ । ಸಾಕಾರದಿಂದ ವಂದಿಪೆನು ||*||
ಧರ್ಮಜಿನೇಶ ಸದ್ಧರ್ಮದನಿಲಯನು । ಧರ್ಮಪ್ರಸಾರವ ಗೈದು ||
ನಿರ್ಮಲ ಸಿದ್ಧಪದದೊಳಿರ್ಪವನನಾ । ಸ್ವರ್ಮನದಿಂದ ವಂದಿಪೆನು ||*||

ಉ :--ಬಳಿಕ ಪ್ರಭಾಕರಭಟ್ಟನು ಭಾವಪೂರ್ವಕವಾಗಿ ಪಂಚ ಪರಮೇಷ್ಠಿಗಳಿಗೆ ನಮಸ್ಕರಿಸಿದ್ದಾದ ಮೇಲೆ ಸ್ವಗುರು ಶ್ರೀಯೋಗೀಂದ್ರ ದೇವರಿಗೆ ನಮಿಸಿ ಹೀಗೆ ಪ್ರಾರ್ಥಿಸುತ್ತಾನೆ :—

ಭಾವಪೂರ್ವಕವಾಗಿ ಭಟ್ಟ ಪ್ರಭಾಕರ । ತೀವಿದ ಭಕ್ತಿಯು ಭರದಿಂ ।
ಐವರು ಗುರುಗಳ ಚರಣಕೆ ನಮಿಸುತ । ಭಾವಶುದ್ಧಿಯೊಳೊಡಗೂಡಿ ||೮||
ಗುರುಗಳೈವರನು ಯೋಗೀಂದ್ರ ಚಂದ್ರರನು । ಪರಿಶುದ್ಧ ಮನದಿಂದ ನಮಿಸಿ ||
ಪರಮಾತ್ಮ ತತ್ವವ ನಿರವಿಸು ಸ್ವಾಮಿಯೆ । ವರಜಿನದೇವನೆ ಗುರುವೆ ||೮*೧||

ಉ :—ಮುಂದೆ ಯಾವ ಪರಮಾತ್ಮ ಸ್ವಭಾವವಿಲ್ಲದೆ ಈ ಜೀವನು ಅನಾದಿಕಾಲದಿಂದ ಸಂಸಾರದಲ್ಲಿ ತಿರುಗುತ್ತಿದ್ದನೋ ಆ ಪರಮಾತ್ಮನ ಸ್ವಭಾವವನ್ನು ತಿಳಿಯುವ ಇಚ್ಛೆಯನ್ನು ಭಟ್ಟ ಪ್ರಭಾಕರನು ಪ್ರಕಟಿಸುತ್ತಾನೆ :—

ಸಂದುದನಂತದ ಕಾಲದ ಪರಿಯಂತ । ನೊಂದು ಸಂಸಾರದಿ ಬೆಂದು ||
ಇಂದುತನಕ ದುಃಖದ ಮೇರುವಲ್ಲದೆ । ಸಂದುದಿಲ್ಲವು ಸ್ವಲ್ಪ ಸುಖವು ||೯||

ಉ :—ಇದೇ ಮಾತನ್ನು ಮುಂದುವರಿಸಿ :—

ನರಕಾದಿ ಚತುರ್ಗತಿ ದುಃಖದಿ ಬೆಂದೆನು । ಪರಮಾತ್ಮ ಕಲೆಯನರಿಯದೆ ॥
ಪರಮಕಲೆಯನೆನಗರುಹಿ ರಕ್ಷಿಸು ಸ್ವಾಮಿ । ಚರಮ ಪ್ರಸಾದರೂಪದಲಿ ॥೧೦॥

ಉ :—ಪ್ರಭಾಕರಭಟ್ಟನ ಬಿನ್ನಪವನ್ನು ಕೇಳಿ ಶ್ರೀಯೋಗೀಂದು ದೇವರು ತ್ರಿವಿಧಾತ್ಮ ಸ್ವರೂಪ ಕಥನಮಾಡುವರು :—

ಸ್ಮರಿಸಿ ಚಿತ್ತದಿ ಮತ್ತೆ ಗುರುಗಳನೈವರ । ನಿರುತವು ವಂದಿಸಿ ಮುದದಿ ॥
ಸುರುಚಿರ ತ್ರಿವಿಧಾತ್ಮನೆಲೆಯ ಪೇಳುವೆ ಶಿಷ್ಯ । ವರ ಪ್ರಭಾಕರಭಟ್ಟ ಕೇಳು ॥೧೧॥

ಉ :—ತ್ರಿವಿಧಾತ್ಮರ ಸ್ವರೂಪವನ್ನು ತಿಳಿಸಿ ಬಹಿರಾತ್ಮ ತತ್ವವನ್ನು ಬಿಟ್ಟು ಸ್ವಸಂವೇದನ ಜ್ಞಾನದಿಂದ ಪರಮಾತ್ಮನನ್ನು ಭಾವಿಸೆಂದು ಹೇಳುವರು :—

ಅರಿದು ನಿನ್ನೊಳು ತ್ರಿವಿಧಾತ್ಮರ ನೀನು । ತೊರೆ ಮೂಢ ಬಹಿರಾತ್ಮನನು ॥
ಪರಮ ಪವಿತ್ರನ ಪಾಪವಿದೂರನ । ಪರಮಾತ್ಮನ ನೀ ನೋಡು ॥೧೨॥

ಉ :—ಮೂರು ವಿಧದ ಆತ್ಮರಲ್ಲಿ ಬಹಿರಾತ್ಮ ಲಕ್ಷಣವನ್ನು ಹೇಳುವರು :—

ಮೂಢ ವಿಚಕ್ಷಣ ಪರಬ್ರಹ್ಮರೆಂದೆಂಬ । ಮೋಡಿಯೊಳ್ತ್ರಿವಿಧಾತ್ಮರಿಹರು ॥
ಮೂಢನು ದೇಹವೆ ನನ್ನಾತ್ಮನೆನ್ನುತ । ಗಾಢಾಂಧಕಾರದೊಳಿಹನು ॥೧೩॥

ಉ :—ಪರಮ ಸಮಾಧಿಯಲ್ಲಿದ್ದು ದೇಹಕ್ಕಿಂತ ಆತ್ಮನು ಬೇರೆಯೆಂದು ಅಂತರಾತ್ಮನು ತಿಳಿಯುತ್ತಾನೆಂದು ಹೇಳುವರು :—

ಕಾಯದಿಂ ಭಿನ್ನವೆಂದಾತ್ಮನ ಭಾವಿಸಿ । ಕಾಯದೊಳಾತ್ಮನ ನೋಡಿ ।
ದಾಯದಿ ಪರಮ ಸಮಾಧಿಯೊಳಿರ್ಪನೆ । ನ್ಯಾಯದಿ ಪಂಡಿತನೆನಿಪ ॥೧೪॥

ಉ :—ಸಮಸ್ತ ಪರದ್ರವ್ಯಗಳನ್ನು ಬಿಟ್ಟು ಕೇವಲ ಜ್ಞಾನಮಯನೂ, ಕರ್ಮರಹಿತನೂ, ಶುದ್ಧನೂ ಆದವನು ಪರಮಾತ್ಮನು, ಅವನನ್ನು ಭಾವಿಸೆಂದು ಹೇಳುವರು :—

ಸುಜ್ಞಾನಬಲದಿಂದಲೆಂಟುಕರ್ಮವಗೆಲ್ದು । ದೃಜ್ಞಾನರೂಪಿನೊಳಿರ್ಪ ॥
ವಿಜ್ಞಾನಿ ಪರಮನ ಭಾವಿಸು ಜೀವನೆ । ತಜ್ಞನು ಪರಮಾತ್ಮನನ್ನು ॥೧೫॥

ಉ :—ಇಂತಹ ಪರಮಾತ್ಮನನ್ನು ಲಕ್ಷ್ಯ ಲಕ್ಷಣಭಾವಗಳಿಂದ ತಮ್ಮಲ್ಲಿ ಧರಿಸಿ ಹರಿಹರಾದಿ ಮಹಾಪುರುಷರೆಲ್ಲ ಧ್ಯಾನಿಸುತ್ತಾರೆಂದು ಹೇಳುವರು :—

ಹರಿಹರಾದಿಗಳೆಲ್ಲ ನಿರತವು ಭಾವಿಪ । ಪರಿಶುದ್ಧ ಪರಮಾತ್ಮನನ್ನು ॥
ಧರಿಸುತ ಭಾವಿಸು ನಿಜದಿ ನಿರಂತರ । ಪರಮಸಮಾಧಿಯ ಪಡೆವೆ ॥೧೬॥

ಉ :—ನಿತ್ಯ, ನಿರಂಜನ, ಜ್ಞಾನಮಯ, ಪರಮಾನಂದಸ್ವಭಾವಧರ, ಶಾಂತ, ಶಿವಸ್ವರೂಪನಾದ ಪರಮಾತ್ಮನನ್ನು ವರ್ಣಿಸುವರು :—

ನಿತ್ಯ ನಿರಂಜನ ಜ್ಞಾನಮಯಾತ್ಮನ । ಅತ್ಯಂತ ಪರಮ ಚಿದ್ಘನನ ॥
ಸ್ತುತ್ಯ ಸದ್ಭಾವದೊಳಿರುತಿರ್ದು ನೋಡಲು । ಸತ್ಯದ ಸುಖವನು ಪಡೆವೆ ॥೧೭॥

ಉ :—ಅದೇ ಪರಮಾತ್ಮನನ್ನು ವರ್ಣಿಸುವರು :—
ನಿಜಭಾವದೊಳಿದ್ದು ಪರಭಾವವ ಬಿಟ್ಟು । ನಿಜದ ಚಿದ್ಭಾವವ ಪೊಂದಿ ॥
ಅಜರಾಮರನು ಶಿವನು ಶಾಂತನೆನಿಸಿ । ನಿಜಸಿರಿಸುಖದೊಳಗಿಹನು ॥೧೮॥

ಉ :—ಅದೇ ಪರಮಾತ್ಮ ಸ್ವರೂಪವನ್ನೇ ಮೂರು ಗಾಹಾ ಸೂತ್ರಗಳಲ್ಲಿ ಹೇಳುವರು :—
ಚಿನ್ನಗಂಧಸ್ಪರ್ಶವರ್ಣರಸಗಳಿಲ್ಲ । ಜನನ ಮರಣವೆಂಬುದಿಲ್ಲ ॥
ಇನ್ನೊಂದು ನಾಮವಿಲ್ಲದ ಹೇಮವರ್ಣನು । ಸನ್ನುತನವ ನಿರಂಜನನು ॥೧೯॥
ಕ್ರೋಧಮೋಹಗಳಿಲ್ಲ ಮಾನಮಾಯಗಳಿಲ್ಲ । ಮೋದ ಮಾತ್ಸರ್ಯಗಳಿಲ್ಲ ॥
ಸದನ ಧ್ಯಾನಗಳಿಲ್ಲ ದರ್ಪರೋಷಗಳಿಲ್ಲ । ಚದುರ ನಿರಂಜನನವನು ॥೨೦॥
ಪಾಪಪುಣ್ಯಗಳಿಲ್ಲ ಲೋಪದೋಷಗಳಿಲ್ಲ । ದರ್ಪ ವಿಷಾದಗಳಿಲ್ಲ ॥
ತಾಪ ಪ್ರತಾಪವಿಲ್ಲದ ಪರಮಾತ್ಮನಿ । ರ್ಲೇಪ ನಿರಂಜನಭಾವ ॥೨೧॥

ಉ :—ಧಾರಣ, ಧ್ಯೇಯ, ಯಂತ್ರ, ಮಂತ್ರ, ಮಂಡಲ, ಮುದ್ರಾದಿ ವ್ಯವಹಾರ ಧ್ಯಾನವಿಷಯರಾದ, ಮಂತ್ರವಾದ ಶಾಸ್ತ್ರದಲ್ಲಿ ಹೇಳಿದ ಎಲ್ಲ ದೇವರನ್ನೂ ನಿಷೇಧಿಸಿ ನಿರ್ದೋಷ ಪರಮಾತ್ಮನನ್ನು ಧ್ಯಾನಿಸಬೇಕೆಂದು ಹೇಳುವರು :—
ಧ್ಯೇಯಧಾರಣಮುದ್ರೆ ಯಂತ್ರ ಮಂತ್ರಗಳು । ದಾಯಮಂಡಲಗಳೆಂದೆಂಬ ॥
ಮಾಯೆಯುಳ್ಳವ ಪರಮಾತ್ಮನಲ್ಲವುಯೆಂದು । ಪಾಯದಿ ದೇವನ ನೋಡು ॥೨೨॥

ಉ :—ವೇದ, ಶಾಸ್ತ್ರಗಳಿಗೂ, ಇಂದ್ರಿಯಾದಿ ಪರವಸ್ತುಗಳಿಗೂ ಕಾಣದೆ, ವೀತರಾಗ ನಿರ್ವಿಕಲ್ಪ ಸಮಾಧಿಗೆ ಕಾಣುವ ಪರಮಾತ್ಮನನ್ನು ತೋರಿಸುವರು :—
ವೇದಶಾಸ್ತ್ರವಿಂದ್ರಿಯಗಮ್ಯನಲ್ಲ ಸ । ಮಾಧಿಗೆ ಗೋಚರನೆನಿಸಿ ।
ಸಿದ್ಧಪರಾತ್ಮನನಾದಿ ನಿಧನನೆಂದು । ಶುದ್ಧಾತ್ಮನನು ಭಾವಿಪುದು ॥೨೩॥

ಉ :—ವೇದಾದಿ ವಿಷಯಗಳಿಲ್ಲದ ಪರಮಾತ್ಮನು ಸಮಾಧಿಗೆ ವಿಷಯನಾಗುತ್ತಾನೆಂದು ಅವನ ಸ್ವರೂಪವನ್ನು ವ್ಯಕ್ತಪಡಿಸುವರು :—
ಕೇವಲ ದರ್ಶನಜ್ಞಾನಮಯಾತ್ಮನು । ಕೇವಲ ಸುಖದ ಸ್ವಭಾವ ॥
ಕೇವಲ ಶಕ್ತಿಯು ಪರಮಾತ್ಮನೆಂದು । ಭಾವಿಸಿ ತಿಳಿಯೆಲೆ ಯೋಗಿ ॥೨೪॥

ಉ :—ತ್ರಿಭುವನ ವಂದಿತನೇ ಮೊದಲಾದ ಲಕ್ಷಣಗಳಿಂದೊಡಗೂಡಿ ಲೋಕಾಗ್ರದಲ್ಲಿರುವ ಶುದ್ಧಾತ್ಮ ಸ್ವರೂಪವನ್ನು ಹೇಳುವರು :—
ಸಲ್ಲಕ್ಷಣಯುತ ನಿಷ್ಕಲದೇವನು । ಮೂಲೋಕದಗ್ರದೊಳಿಹನು ॥
ಉಲ್ಲಾಸದಿಂದ ಪರಮಪದವಡೆದು । ಸಲ್ಲೀಲೆಯೊಳು ಸುಖಿಪನು ॥೨೫॥

ಉ :—ತ್ರಿವಿಧಾತ್ಮ ಸ್ವರೂಪ ಕಥನದ ಮುಖ್ಯತೆಯಿರುವ ಪ್ರಥಮ ಮಹಾಧಿಕಾರದ ನಾಲ್ಕನೆಯ ಸ್ಥಲದಲ್ಲಿ ಹತ್ತು ದೋಹಾಸೂತ್ರಗಳಿಂದ ಮುಕ್ತಿಹೊಂದಿದ ಸಿದ್ಧಾತ್ಮರ ವ್ಯಾಖ್ಯಾನವು ಇಲ್ಲಿಗೆ ಮುಗಿದು ಮುಂದೆ ಐದು ಕ್ಷೇಪಕ ಸೂತ್ರಗಳು

ಸೇರಿದ ಇಪ್ಪತ್ನಾಲ್ಕು ದೋಹೆಗಳಲ್ಲಿ ಮುಕ್ತಿಯಲ್ಲಿ ಪ್ರಕಟ (ವ್ಯಕ್ತ) ರೂಪದಿಂದಿರುವಂತೆ ಪರಮಾತ್ಮನು ಶುದ್ಧ ನಿಶ್ಚಯನಯದ ಅವಲಂಬನದಿಂದ ದೇಹದಲ್ಲೂ ಶಕ್ತಿರೂಪದಿಂದ ಇರುತ್ತಾನೆಂದು ಹೇಳುವರು :—

ಪರಮಾತ್ಮನು ತಾನು ನಿರ್ಮಲರೂಪದಿ । ಪರಮ ಮುಕ್ತಿಯೊಳಿರುವಂತೆ ।
ಸುರುಚಿರದೇಹದೊಳಿರುತಿರ್ಪನೆಂದು । ಪರಿಕಿಸಿ ನಿನ್ನೊಳು ನೋಡು ॥೨೬॥

ಉ :—ಸರ್ವಜ್ಞಜ್ಞಾನ ನೇತ್ರದಿಂದ ಪರಮಾತ್ಮನನ್ನು ನೋಡಿದರೆ ಕರ್ಮಕ್ಷಯವಾಗುವುದೆಂದು ತಿಳಿದೂ ಕೂಡ ಎಲೈ ಯೋಗಿಯೆ ನೀನು ಅದೇಕೆ ಅವನನ್ನು ನೋಡುವುದಿಲ್ಲ ಎಂದು ಕೇಳುವರು :—

ಯಾವನಿಂದಾದುದೋ ಖಳಕರ್ಮನಾಶವು । ಅವನನು ದೇಹದೊಳಿರಿಸಿ ॥
ಅವಿಚಲಮನದಿಂದ ಭಜಿಸದಲಿಹುದೇಕೆ । ಅವಧರಿಸಿಂತಿದ ನೀನು ॥೨೭॥

ಉ :—ಐದು ಕ್ಷೇಪಕಗಳಿಂದ ಆತ್ಮಸ್ವರೂಪವನ್ನು ಹೇಳುವರು :—

ಮನದ ವ್ಯಾಪಾರಾದಿ ಪರಮಾತ್ಮಪದವಿಲ್ಲ । ತನುದುಃಖ ಸುಖವಿಹುದಲ್ಲಿ ॥
ಸನುಮತದಿಂದಲಿ ತ್ಯಜಿಸುತಲಿವುಗಳ । ನೆನೆ ಶುದ್ಧ ಪರಮಾತ್ಮನನ್ನು ॥೨೮॥

ಉ :—ಪರಮಾತ್ಮನು ವ್ಯವಹಾರನಯದಿಂದ ದೇಹದಲ್ಲೂ, ನಿಶ್ಚಯನಯದಿಂದ ತನ್ನ ಸ್ವರೂಪದಲ್ಲೂ ವಾಸಮಾಡುತ್ತಿರುವನೆಂಬುದನ್ನು ಹೇಳುವರು :—

ಬೇದಾಭೇದವೆಂಬುಭಯನಯಗಳಿಂದ । ಭೇದಿಸಿ ದೇಹ ಜೀವರನು ॥
ಆದರಿಸುತಲಾತ್ಮ ತನ್ನೊಳಗಿಹನೆಂದ । ಭೇದದೊಳರಿ ಪರಮನನು ॥೨೯॥

ಉ :—ಜೀವಕ್ಕೂ ಅಜೀವಕ್ಕೂ ಲಕ್ಷಣದಿಂದ ಭೇದವಿದೆ. ಆದುದರಿಂದ ಇವೆರಡನ್ನೂ ಒಂದೆಂದು ತಿಳಿಯಬೇಡ ಎಂದು ಹೇಳುವರು :—

ಜೀವಾಜೀವರನೊಂದೆಂದು ತಿಳಿಯದೆ । ಈರ್ವರ ಲಕ್ಷಣವನ್ನು ॥
ಆವಾಗಲು ಭೇದದಿಂದ ಬೇರ್ಪಡಿಸಿ । ಜೀವನ ಪೇಳುವೆ ನಾನು ॥೩೦॥

ಉ :—ಜ್ಞಾನಮಯಾದಿ ಲಕ್ಷಣಗಳಿರುವ ಶುದ್ಧಾತ್ಮನನ್ನು ವಿಶೇಷಣದಿಂದ ಹೇಳುವರು :—

ಅಮನನತೀಂದ್ರಿಯ ಜ್ಞಾನಮಯಾತ್ಮನು । ಅಮನನಮೂರ್ತಸ್ವರೂಪ ॥
ಚಿನ್ಮಾತ್ರ ಲಕ್ಷಣದಿಂದ ಪ್ರಕಟವಾಗಿ । ನಿರ್ಮಲನೆಂದು ಭಾವಿಪುದು ॥೩೧॥

ಉ :—ಸಂಸಾರ ಶರೀರ ಭೋಗ ವಿರಕ್ತನಾದವನು ಶುದ್ಧಾತ್ಮಧ್ಯಾನದಿಂದ ಆ ಸಂಸಾರವೆಂಬ ಬಳ್ಳಿಯನ್ನು ಕತ್ತರಿಸುತ್ತಾನೆಂದು ಹೇಳುವರು :—

ಭವತನುಭೋಗ ವಿರಕ್ತನಾದವನು । ಭವವೆಂಬ ಬಳ್ಳಿಯ ಸುಡುವ ।
ಅವನು ಶುದ್ಧಾತ್ಮನ ಚಿಂತಿಸಿಪಡೆವನು । ಅವಧಿಯಿಲ್ಲದ ಸುಖವನ್ನು ॥೩೨॥

ಉ :—ದೇಹವೆಂಬ ದೇವಾಲಯದಲ್ಲಿ ವಾಸಿಸುವವನೇ ನಿಶ್ಚಯನಯದಿಂದ ಪರಮಾತ್ಮನು ಎಂದು ಹೇಳುವರು :—

ದೇವನು ದೇಹ ದೇವಾಲಯದೊಳಗಿಹ । ಪಾವನನಾದಿ ಅನಂತ ॥
ಕೇವಲಜ್ಞಾನ ವಿಭೂಷಿತನಾಗಿಹ । ಪಾವನ ಪರಮ ನಿರ್ಭ್ರಾನ್ತ ॥೩೩॥

ಉ :—ಶುದ್ಧಾತ್ಮಕ್ಕಿಂತ ಭಿನ್ನವಾದ ದೇಹದಲ್ಲಿ ಶುದ್ಧಾತ್ಮನು ವಾಸಿಸುತ್ತಾನಾದರೂ ಅವನು ದೇಹವನ್ನೂ, ದೇಹವು ಅವನನ್ನೂ ಮುಟ್ಟುವುದಿಲ್ಲವೆಂದು ಹೇಳುವರು :—

ದೇಹದೊಳಿರುತಿರ್ದು ದೇಹವ ಸೋಂಕನು । ದೇಹವು ಸೋಂಕದಾತ್ಮನನು ।
ದೇಹದೊಳವನಡಗಿರುತಿರ್ದನಾದರು । ದೇಹವಿಲ್ಲದ ಪರಾತ್ಪರನು ॥೩೪॥

ಉ :—ಸಮರಸಭಾವದಿಂದ ಪರಮಾನಂದವನ್ನು ಪಡೆವವರಿಗೆ ಶುದ್ಧಾತ್ಮನು ಸ್ಫುರಾಯಮಾನನಾಗಿ ಕಾಣುವನು ಎಂದು ಹೇಳುತ್ತಾರೆ :—

ಸಮರಸಭಾವದಿ ಬಾಳುವ ಜೀವನು । ನಮಿಸುತ ಶುದ್ಧಾತ್ಮನನ್ನು ।
ಅಮಲಾನಂದವ ಪೊಂದುತ ಜೀವಿಸಿ । ಸುಮನದೊಳಾತ್ಮನ ಪಡೆವ ॥೩೫॥

ಉ :—ಅನಾದಿಕಾಲದಿಂದ ಜೀವನು ತನಗಿಂತ ಬೇರೆಯಾದ ಕರ್ಮವನ್ನೂ ಅದರಿಂದುಂಟಾದ ಶರೀರವನ್ನೂ ಬಂಧಮಾಡಿಕೊಂಡು ಬಾಳುತ್ತಿದ್ದರೂ ಅವನಿಗೆ ನಿಶ್ಚಯನಯದಿಂದ ಅವುಗಳ ಸಂಬಂಧವಿಲ್ಲವೆಂದು ಹೇಳುವರು:—

ದೇಹದೊಳಿರುತಿರ್ದನಾದರು ಜೀವನು । ದೇಹವ ಸೋಂಕದೊಪ್ಪಿಹನು ॥
ದೇಹದೊಳೆಲ್ಲ ಕರ್ಮವ ಮೆಟ್ಟುತ ತಾನು । ದೇಹವರ್ಜಿತನಾಗಿಹನು ॥೩೬॥

ಉ :—ಆತ್ಮನು ಪರಮಾರ್ಥದಿಂದ ದೇಹಕರ್ಮರಹಿತನಾಗಿದ್ದರೂ ನಾನು ಶರೀರವೇ ಆಗಿರುತ್ತೇನೆಂದು ಮೂಢರು ತಿಳಿಯುತ್ತಾರೆಂದು ಹೇಳುವರು :—

ವ್ಯವಹಾರ ರತ್ನತ್ರಯವನರಿಯದ ಮೂಢ । ನವಶರೀರವ ತನ್ನದೆಂಬ ॥
ಅವಿವೇಕದೊಳು ತಿಳಿಯುವನಂತಲ್ಲವು । ಪ್ರವರ ರತ್ನತ್ರಯನವನು ॥೩೭॥

ಉ :—ಕೇವಲಜ್ಞಾನದಿಂದ ಲೋಕಾಲೋಕವನ್ನೆಲ್ಲ ಬೆಳಗುವ ಪರಮಾತ್ಮನು ಅನಂತಾಕಾಶದ ಮಧ್ಯದ ಒಂದು ನಕ್ಷತ್ರದಂತೆ ಶೋಭಿಸುತ್ತಾನೆಂದು ಹೇಳುವರು :—

ಆಕಾಶದ ಮಧ್ಯದೊಳೊಂದು ನಕ್ಷತ್ರ । ತೂಕದಿ ಬೆಳಗುವತೆರದಿ ।
ಲೋಕಾಲೋಕನದಕ್ಷನಾದಾತ್ಮನು । ಲೋಕದ ಶಿಖರದೊಳಿಹನು ॥೩೮॥

ಉ :—ಯೋಗಿಗಳು ನಿರ್ವಿಕಲ್ಪ ಸಮಾಧಿಯ ಕಾಲದಲ್ಲಿ ಧ್ಯಾನಿಸಲು ಯೋಗ್ಯನೂ, ಅನಂತಜ್ಞಾನಮಯನೂ ಆದ ಪರಮಾತ್ಮನನ್ನು ಹೇಳುವರು:—

ಯೋಗಿಗಳೆಲ್ಲರು ಧ್ಯಾನಿಸಪ ಧ್ಯೇಯನು । ಚಾಗಿಯು ಮೋಕ್ಷಕಾರಣನು ।
ನೀಗಿ ಸಂಸಾರವ ಶುದ್ಧನಾಗಿರುವನು । ರಾಗವಿಲ್ಲದ ಜ್ಞಾನಮಯನು ॥೩೯॥

ಉ :—ಶುದ್ಧಜ್ಞಾನ ಸ್ವಭಾವದ ಜೀವನು ಜ್ಞಾನಾವರಣಾದಿ ಕರ್ಮಗಳ ಕಾರಣದಿಂದ

ತ್ರಸ, ಸ್ಥಾವರ ಜನ್ಮರೂಪದ ಜಗತ್ತನ್ನು ನಿರ್ಮಿಸುತ್ತಾನೆ. ಆದುದರಿಂದ ಅವನೇ ಜಗತ್ಕರ್ತನು, ಉಳಿದ ಬ್ರಹ್ಮಾದಿಗಳಲ್ಲ ಎಂದು ಹೇಳುತ್ತಾರೆ :—

ಲಿಂಗತ್ರಯ ಪರಿಮಂಡಿತ ಪರಮಾತ್ಮ । ಅಂಗದಿ ಜಗನ ಮಾಡುವನೆಂ ॥
ಬಿಂಗಿತ ಕಥನವ ಮಾಡುತ ಮೂಢರು । ಲಿಂಗವರ್ಣನೆಯ ಮಾಡುವರು ॥೪೦॥
ಸ್ಥಾವರತ್ರಸರೂಪಜನ್ಮವ ಸೃಜಿಸುವ । ನೋವದೆ ಕರ್ಮದವಶದಿ ।
ಜೀವನು ಜಗವನು ಸೃಜಿಸುವನಲ್ಲವೆಂ । ದಾವಾಗಲು ನೀ ತಿಳಿಯೈ ॥೪೦*೧॥

ಉ:—ಪರಮಾತ್ಮನ ಕೇವಲಜ್ಞಾನವೆಂಬ ಪ್ರಕಾಶದಲ್ಲಿ ಈ ಜಗತ್ತು ಬೆಳಗುತ್ತಿದೆ, ಮತ್ತು ಈ ಜಗತ್ತಿನಲ್ಲಿ ಅವನು ವಾಸಿಸುತ್ತಿದ್ದರೂ ಜಗತ್ಸ್ವರೂಪನಾಗುವುದಿಲ್ಲ ಎಂದು ಹೇಳುವರು :—

ಜಗದ ಗರ್ಭದೊಳಿರುತಿರ್ದರು ಪರಮಾತ್ಮ । ಜಗವನು ಮುಟ್ಟುವುದಿಲ್ಲ ॥
ಜಗವು ತನ್ನನು ಮುಟ್ಟದಿರುವುದೆಂದರಿತು ನೀ । ಹಗರಣವೆಲ್ಲವ ತ್ಯಜಿಸು ॥೪೧॥

ಉ:—ಪರಮಸಮಾಧಿಯ ಅಭಾವದಿಂದ ಹರಿಹರಾದಿಗಳಿಗೆ ಪ್ರತ್ಯಕ್ಷವಾಗಿ ತಿಳಿಯಲಾಗದಿರುವಂತಹ ಪರಮಾತ್ಮನ ಸ್ವರೂಪವನ್ನು ಹೇಳುವರು :—

ಹರಿಹರಾದಿಗಳೆಲ್ಲರರಿಯದ ಪರಮಾತ್ಮ । ಸುರುಚಿರದೇಹದೊಳಿಹನು ॥
ಪರಮಸಮಾಧಿಯನರಿಯದಲವರು । ಪರಿಪರಿಯಾಗಿರುತಿಹರು ॥೪೨॥

ಉ:—ಪರ್ಯಾಯಾರ್ಥಿಕ ನಯದಿಂದ ಉತ್ಪಾದ ವ್ಯಯಗಳಿಂದೊಡಗೂಡಿದ್ದರೂ ದ್ರವ್ಯಾರ್ಥಿಕನಯದಿಂದ ಉತ್ಪಾದ ವ್ಯಯಗಳಿಲ್ಲದೆ ಸದಾ ಕಾಲವು ಧ್ರೌವ್ಯ (ಅವಿನಾಶಿ) ನಾಗಿರುವ ಪರಮಾತ್ಮನನ್ನು ನಿರ್ವಿಕಲ್ಪ ಸಮಾಧಿಯ ಬಲದಿಂದ ತೀರ್ಥಂಕರ ಪರಮ ದೇವರೂ ಪರಮೌದಾರಿಕ ದೇಹದಲ್ಲಿ ನೋಡುತ್ತಾರೆಂದು ಹೇಳುವರು :—

ಪರ್ಯಾಯಾರ್ಥಿಕನಯದಿಂದ ಪರಮಾತ್ಮ । ನೆರೆಹುಟ್ಟುವ ಸಾಯುವನು ॥
ವರದ್ರವ್ಯಾರ್ಥಿಕನಯದಿಂದ ನೋಡಲು । ನೆರೆ ಹುಟ್ಟಿಸಾಯುವನಲ್ಲ ॥೪೩॥

ಉ:—ಆತ್ಮನು ದೇಹದಲ್ಲಿದ್ದಾಗ ಪಂಚೇಂದ್ರಿಯ ಗ್ರಾಮಗಳಿದ್ದು ದೇಹವನ್ನು ಬಿಟ್ಟ ಮೇಲೆ ಅವು ಹಾರಿಹೋಗುತ್ತವೆಂದು ಹೇಳುವರು :—

ಚಂಚಲದೇಹದೊಳಾತ್ಮನಿರ್ಪಾಗಲು । ಪಂಚೇಂದ್ರಿಯ ಗ್ರಾಮವಿಹುವು ॥
ಸಂಚಿತದೇಹವನವನು ಬಿಟ್ಟಿರಲು । ಪಂಚಗ್ರಾಮಗಳೋಡುವುವು ॥೪೪॥

ಉ:—ಆತ್ಮನು ಪಂಚೇಂದ್ರಿಯಗಳಿಂದ ಐದು ವಿಷಯಗಳನ್ನು ತಿಳಿಯುತ್ತಾನಾದರೂ ಪಂಚೇಂದ್ರಿಯಗಮ್ಯನಲ್ಲವೆಂದು ಹೇಳುವರು :—

ಪಂಚೇಂದ್ರಿಯದಿಂದ ವಿಷಯವನರಿದರು । ಪಂಚೇಂದ್ರಿಯಗಮ್ಯನಲ್ಲ ॥
ಚಂಚಲವಿಲ್ಲದ ಪರಮಾತ್ಮನವನು । ಮಿಂಚಿನಂದದ ಸದಾಶಿವನು ॥೪೫॥

ಉ :—ಪರಮಾರ್ಥದಿಂದ ನೋಡಿದರೆ ಆತ್ಮನಿಗೆ ಬಂಧವೂ ಇಲ್ಲ, ಸಂಸಾರವೂ ಇಲ್ಲ. ಅವನು ವ್ಯವಹಾರಮುಕ್ತನು, ಎಂದು ಭಾವಿಸಿ ನೋಡು ಎಂದು ಹೇಳುವರು :—

ಪರಮಾರ್ಥದಿ ನೋಡೆ ಬಂಧವಿಲ್ಲಾತ್ಮಗೆ । ನರಸಂಸಾರವದಿಲ್ಲ ॥
ಪರಮಾತ್ಮನನಿಂತು ವ್ಯವಹಾರವ ಬಿಟ್ಟು । ಪರಿಕಿಸಿ ನೋಡೆಲೆ ಯೋಗಿ ॥೪೬॥

ಉ :—ಮುಂದಕ್ಕೆ ಹಬ್ಬುವ ಶಕ್ತಿಯಿದ್ದರೂ ಮಂಟಪವಿರುವವರೆಗೆ ಮಾತ್ರ ಬಳ್ಳಿಯು ಹಬ್ಬುವಂತೆ ಆತ್ಮನ ಜ್ಞಾನಕ್ಕೆ ಹೆಚ್ಚು ತಿಳಿಯುವ ಶಕ್ತಿಯಿದ್ದರೂ ಜ್ಞೇಯವೆಲ್ಲವನ್ನೂ ತಿಳಿಯುವುದಲ್ಲದೆ ಅಲ್ಲಿಂದ ಮುಂದಕ್ಕೆ ತಿಳಿಯಲೇನೂ ಇಲ್ಲವೆಂದು ಹೇಳುವರು :—

ಮಂಟಪವಿರುವವರೆಗೆ ಹಬ್ಬುವುದು ಬಳ್ಳಿ । ಮಂಟಪಮುಗಿಯೆ ನಿಲ್ವಂತೆ ॥
ಉಂಟು ಲೋಕಾಲೋಕವೆರಡರೊಳಗೆ ಜ್ಞೇಯ । ಅಂಟಿತಿಳಿವನಾತ್ಮನದನು ॥೪೭॥

ಉ :—ಕರ್ಮವು ಸುಖದುಃಖ ಕಾರಣವಾದತೂ ಜೀವನು ಕರ್ಮದಿಂದ ಹುಟ್ಟಿದವ ನಲ್ಲ ಎಂಬುದನ್ನು ಗಮನದಲ್ಲಿರಿಸಿಕೊಂಡು ಹೇಳುವರು :—

ಕರ್ಮವೇ ಸುಖದುಃಖ ಕಾರಣವಾದರೂ । ಕರ್ಮದಿಂದಾದವನಲ್ಲ ॥
ನಿರ್ಮಲನಾತ್ಮನೆಂದರಿತು ಭಾವಿಸು ಜೀವ । ಮರ್ಮದಿ ಪರಮಾತ್ಮನನ್ನು ॥೪೮॥

ಉ :—ಆತ್ಮನು ಕರ್ಮದೊಳೊಡಗೂಡಿದ್ದರೂ ಕರ್ಮರೂಪನಾಗುವುದಿಲ್ಲ. ಕರ್ಮವು ಆತ್ಮನೊಳ್ಕೂಡಿದ್ದರೂ ಆತ್ಮನಾಗುವುದಿಲ್ಲ ಎಂದು ಹೇಳುವರು :—

ಕರ್ಮವನಾದಿಯಿಂ ಬದ್ಧವಾಗಿದ್ದರೂ । ನಿರ್ಮಲಾತ್ಮನು ಕರ್ಮವಲ್ಲ ॥
ಕರ್ಮವು ಪರಮಾತ್ಮನಾಗುವುದಿಲ್ಲೆಂದು । ಮರ್ಮವ ತಿಳಿವುದು ಯೋಗಿ ॥೪೯॥

ಉ :—ಹೀಗೆ ತ್ರಿವಿಧಾತ್ಮ ಪ್ರತಿಪಾದಕವಾದ ಪ್ರಥಮ ಮಹಾಧಿಕಾರ ಮಧ್ಯದ ನಿರ್ಮಲ ಜ್ಞಾನಮಯನಾದ ಶುದ್ಧಾತ್ಮನು ವ್ಯಕ್ತರೂಪದಿಂದ ಸಿದ್ಧಾಲಯ ದಲ್ಲೂ, ಶಕ್ತಿರೂಪದಿಂದ–ಶುದ್ಧ ನಿಶ್ಚಯನಯದಿಂದ ದೇಹದಲ್ಲೂ ಇರುತ್ತಾ ನೆಂಬ ವ್ಯಾಖ್ಯಾನದ ಮುಖ್ಯತೆಯ ಐದನೆ ಸ್ಥಲದಲ್ಲಿ ಇಪ್ಪತ್ನಾಲ್ಕು ದೋಹಾ ಸೂತ್ರಗಳನ್ನು ಹೇಳಿ ಮುಂದೆ ಸ್ವದೇಹ ಪ್ರಮಾಣನೆಂಬ ವ್ಯಾಖ್ಯಾನದ ಆರು ದೋಹಾಸೂತ್ರಗಳನ್ನು ಹೇಳುವರು :—

ಪರರು ಜೀವನ ಸರ್ವಗತ ಜಡನೆನ್ನುತ । ನಿರುತವು ಶೂನ್ಯವೆನ್ನುತಲಿ ॥
ಪರಿಪರಿಯಾಗಿ ಪೇಳ್ವರು ಜೀವನಂತಲ್ಲ । ಧರಿಸಿದದೇಹದಷ್ಟಿಹನು ॥೫೦॥

ಉ :—ನಯವಿಭಾಗದಿಂದ ಸರ್ವಗತ, ಜಡ, ದೇಹಪ್ರಮಾಣ, ಶೂನ್ಯರೆಂಬ ನಾಲ್ಕು ಪ್ರಶ್ನೆಗಳಿಗೂ ಸಾಮಂಜಸ್ಯವಾಗುವಂತೆ ಹೇಳುವರು:—

ನಯವಿಭಾಗದಿ ನೋಡಲು ಪರಮಾತ್ಮನು । ವ್ಯಯನಪ್ಪನು ಜಡನಹನು ॥
ನಿಯಮದಿ ಶೂನ್ಯನು ದೇಹಪ್ರಮಾಣನು । ಆಯದಿಂದಲಿ ಸರ್ವಗತನು ॥೫೧॥

ಉ :—ಕರ್ಮರಹಿತನಾದ ಆತ್ಮನು ಕೇವಲ ಜ್ಞಾನದಿಂದ ಲೋಕಾಲೋಕವನ್ನೆಲ್ಲ ವ್ಯಾಪಿಸುವ ಅಪೇಕ್ಷೆಯಿಂದ ಸರ್ವಗತನೆಂದು ಹೇಳುವರು:—

ಕರ್ಮವಿವರ್ಜಿತನಾಗಿಹ ಪರಮಾತ್ಮ । ನಿರ್ಮಲ ಜ್ಞಾನದ ಬಲದಿ ॥
ಓರ್ಮೆಯೆ ಲೋಕಾಲೋಕವ ವ್ಯಾಪಿಪ । ಶರ್ಮನವನು ಸರ್ವಗತನು ॥೫೨॥

ಉ:—ನಿಜಸ್ವಭಾವವನ್ನು ಪಡೆಯುವುದಕ್ಕಾಗಿ ಇಂದ್ರಿಯಗಳನ್ನು ವಶಗೈದು ಪರಮ ಸಮಾಧಿಯಲ್ಲಿ ಲೀನನಾಗಿರುವ ಜೀವನ ಅಪೇಕ್ಷೆಯಿಂದ ಜೀವನನ್ನು ಜಡ ನೆಂದು ಹೇಳುವುದು ತಪ್ಪಲ್ಲವೆಂದು ಹೇಳುವರು:—

ನಿಜಬೋಧದಲಿ ಪ್ರವಿಷ್ಟನಾಗಿಹ ಜೀವ । ತ್ಯಜಿಸುವ ಸಕಲ ಬೋಧವನು ॥
ನಿಜಭಾವದೊಳಿರ್ಪುದರಿಂದ ಜಡನವ । ಭಜಿಸಲೆ ನಯವಿಭಾಗವನು ॥೫೩॥

ಉ :—ಶರೀರ ನಾಮಕರ್ಮದ ಕಾರಣವಿಲ್ಲದ ಜೀವನು ಹೆಚ್ಚದೆ, ತಗ್ಗದೆ ಇರುವ ಕಾರಣದಿಂದ ಮುಕ್ತಾವಸ್ಥೆಯಲ್ಲಿ ಚರಮ ಶರೀರ ಪ್ರಮಾಣನೆಂದು ಹೇಳುವರು:—

ಕಾರಣವಿರಹಿತನಾಗಿಹ ಪರಮಾತ್ಮ । ಸಾರನು ಕ್ಷಯಿಸ ವರ್ಧಿಸನು ॥
ಚರಮ ಶರೀರಪ್ರಮಾಣನಾಗಿಹನೆಂದು । ಪರಮಾತ್ಮಜಿನನು ಪೇಳಿಹನು ॥೫೪॥

ಉ :—ಎಂಟು ಕರ್ಮ, ಹದಿನೆಂಟು ದೋಷ, ಸಮಸ್ತ ವಿಭಾವ, ಇವುಗಳಿಲ್ಲದು ದರಿಂದ ಪರಮಾತ್ಮನನ್ನು ಶೂನ್ಯನೆಂದು ಹೇಳಬಹುದಲ್ಲದೆ ಕೇವಲ ಜ್ಞಾನಾದಿ ಗಳ ಅಪೇಕ್ಷೆಯಿಂದಲ್ಲವೆಂದು ಹೇಳುವರು:—

ಪುದಿದೆಂಟು ಕರ್ಮವು ಹದಿನೆಂಟು ದೋಷವು । ಸದಮಲ ಜೀವನಿಗಿಲ್ಲ ॥
ಇದರಪೇಕ್ಷೆಯೊಳು ಜೀವನು ಶೂನ್ಯನೆಂಬುದು । ಚದುರರಮೆಚ್ಚುಗೆಯಹುದು ॥೫೫॥

ಉ :—ಹೀಗೆ ತ್ರಿವಿಧಾತ್ಮ ಪ್ರತಿಪಾದಕವಾದ ಪ್ರಥಮ ಮಹಾಧಿಕಾರ ಮಧ್ಯದಲ್ಲಿ ವ್ಯವಹಾರನಯದಿಂದ ಜ್ಞಾನದಿಂದ ಲೋಕಾಲೋಕವೆಲ್ಲವನ್ನೂ ವ್ಯಾಪಿಸಿ ಸರ್ವಗತನಾದರೂ ನಿಶ್ಚಯನಯದಿಂದ ಧರಿಸಿದ ದೇಹಪ್ರಮಾಣನೆಂಬ ಕಥನದ ಮುಖ್ಯತೆಯಿಂದ ಆರು ಸೂತ್ರಗಳನ್ನು ಹೇಳಿ ಮುಂದೆ ದ್ರವ್ಯಗುಣ ಪರ್ಯಾಯ ನಿರೂಪಣ ಮುಖ್ಯತೆಯ ಮೂರು ಸೂತ್ರಗಳನ್ನು ಹೇಳುವರು:—

ಕರ್ಮದಿಂದಾತ್ಮನು ಆತ್ಮನಿಂ ಕರ್ಮವು । ಓರ್ಮೆಯು ಜನಿಯಿಸಲಿಲ್ಲ ॥
ವರ್ಮನು ದ್ರವ್ಯಾರ್ಥಿಕದಿಂದ ನಿತ್ಯನು । ಕರ್ಮನು ಪರ್ಯಾಯಾರ್ಥಿಕದಿ ॥೫೬॥

ಉ :—ದ್ರವ್ಯ, ಗುಣ, ಪರ್ಯಾಯಗಳ ಸ್ವರೂಪವನ್ನು ಹೇಳುವರು:—

ಗುಣಪರ್ಯಯ ದ್ರವ್ಯಗಳಿಂದ ಕೂಡಿ । ಅನುಗಾಲವು ನಿತ್ಯರೂಪ ॥
ತನುಮನ ರೂಪಪರ್ಯಾಯದೊಳಿರ್ಪಾಗ । ಜನಿಸುತ ಸಾಯುತಲಿಹನು ॥೫೭॥

ಉ :—ಮುಂದೆ ವಿಶೇಷದಿಂದ ಅದನ್ನೇ ಹೇಳುವರು:—

ಜ್ಞಾನದರ್ಶನಮಯವಾತ್ಮನ ಗುಣಗಳು । ಅನುದಿನ ಬಿಡದಿರುತಿಹುವು ॥
ತನು ಚತುರ್ಗತಿಗಳು ಕರ್ಮಪರ್ಯಾಯವ । ಜನಿಸುತಲಿಹುವೆಂದು ತಿಳಿಯೈ ॥೫೮॥

ಉ:—ಹೀಗೆ ತ್ರಿವಿಧಾತ್ಮ ಕಥನದ ಪ್ರಥಮ ಮಹಾಧಿಕಾರದ ಏಳನೆಯ ಸ್ಥಲದಲ್ಲಿ ದ್ರವ್ಯಗುಣ ಪರ್ಯಾಯಗಳನ್ನು ಹೇಳಿ ಮುಂದೆ ಉಪಾದೇಯ ಭೂತವಾದ ಅನಂತ ಸುಖವು ಅಭಿನ್ನತೆಯಿಂದ ಆತ್ಮನೊಂದಿಗೆ ಶುದ್ಧ ಗುಣಪರ್ಯಾಯ ರೂಪಸಹಿತವಾಗಿರುವುದೆಂಬುದರ ಪ್ರತಿಪಾದನದ ಮುಖ್ಯತೆಯ ಎಂಟು ಸೂತ್ರಗಳನ್ನು ಹೇಳುವರು. ಅದರ ಮೊದಲ ನಾಲ್ಕು ಕರ್ಮದ ಶಕ್ತಿ ಸ್ವರೂಪನ್ನೂ' ದ್ವಿತೀಯದ ನಾಲ್ಕು ಕರ್ಮಫಲವನ್ನೂ ಹೇಳುವರು. ಈಗ ಕರ್ಮವು ಆತ್ಮನಿಗೆ ಅನಾದಿಯಿಂದ ಸಂಬಂಧ ಹೊಂದಿದೆಯೆಂದು ಹೇಳುವರು:—

ಜೀವನು ಕರ್ಮದೊಳಾದಿಯಿಂದಿದ್ದರು । ಜೀವನು ಕರ್ಮವ ಜನಿಸ ॥
ನಾವಾಗಲು ಕರ್ಮವವನ ಜನಿಸದೆಂ । ದವಧರಿಸಿಂತಿದ ಯೋಗಿ ॥೫೯॥

ಉ:—ಜೀವನು ವ್ಯವಹಾರನಯದಿಂದ ಪುಣ್ಯಪಾಪಸ್ವರೂಪನಾಗುತ್ತಾನೆಂದು ಹೇಳುವರು:—

ವ್ಯವಹಾರನಯದಿಂದ ಬಹು ಪುಣ್ಯಪಾಪದ । ಪ್ರವರ ವಿಭಾವದೊಳಿಹನು ॥
ವಿವರದಿ ಕರ್ಮದ ಕಾರಣವನು ಪೊಂದಿ । ಅವತರಿಸುತಲಿಹ ಕೇಳು ॥೬೦॥

ಉ:—ಸಂಸಾರಿ ಜೀವನು ಎಂಟು ಕರ್ಮಗಳಿಂದ ಬಂಧಿತನಾಗಿರುತ್ತಾನೆಂದು ಹೇಳುವರು:—

ಎಂಟು ಕರ್ಮಗಳಿಂದ ಬದ್ಧನಾಗಿಹ ಜೀವ । ಅಂಟಿರುವನು ಭವದಲ್ಲಿ ॥
ಅಂಟನು ಬಿಡಿಸಲು ಎಂಟು ಗುಣಗಳಿಂಪ । ಅಂಟಿರುವನು ಮುಕ್ತಿಯಲ್ಲಿ ॥೬೧॥

ಉ:—ವಿಷಯ ಕಷಾಯವಶದಿಂದ ಜೀವನು ಕರ್ಮಾಣುವಿನೊಂದಿಗೆ ಸಂಬದ್ಧನಾಗಿರುವನು. ಆ ಕರ್ಮಾಣುಗಳನ್ನು ಹೇಳುವರು:—

ವಿಷಯಕಷಾಯರಂಜಿತನಾದ ಜೀವನು । ಅಸಮುಕರ್ಮದೊಳಬ್ಬುವನು ।
ವಿಷಮದ ಮೋಹದ ಜೀವಪ್ರದೇಶವ । ಹಸನಲ್ಲವೆಂದನು ಜಿನನು ॥೬೨॥

ಉ:—ಇಂದ್ರಿಯ, ಮನ, ಸಮಸ್ತವಿಭಾವ, ಚತುರ್ಗತಿ ದುಃಖಸಂತಾಪ ಇವು ಜೀವನಿಗೆ ಕರ್ಮದಿಂದ ಹುಟ್ಟಿರುವುವು. ಇವು ಜೀವನ ಸ್ವಭಾವವಲ್ಲವೆಂಬ ಶುದ್ಧ ನಿಶ್ಚಯನಯದ ಕಥನವನ್ನು ಹೇಳುವರು:—

ಗತಿಗಳು ನಾಲ್ಕಿಂದ್ರಿಯವೈದು ಮನ ಒಂದು । ಸತತವು ಕರ್ಮದಿಂದಹುದು ॥
ಗತಿಯಾದಿಗಳೆಲ್ಲವಾತ್ಮನಿಂಭಿನ್ನವೆಂ । ಬತಿಶಯದಿಂದಲಿ ತಿಳಿಯೈ ॥೬೩॥

ಉ:—ಸಂಸಾರಿಕ ಸಮಸ್ತ ಸುಖದುಃಖಗಳೂ ಶುದ್ಧ ನಿಶ್ಚಯನಯದಿಂದ ಜೀವನಿಗೆ ಕರ್ಮಜನಿತಗಳೆಂದು ಹೇಳುವರು:—

ಶುದ್ಧ ನಿಶ್ಚಯನಯದಿಂದಲಿ ಸುಖದುಃಖ । ಬದ್ಧವಹುದು ಕರ್ಮದಿಂದ ।
ಶುದ್ಧಾತ್ಮನುಪಯೋಗದಿಂದ ನೋಡುವನದು । ಶುದ್ಧಜ್ಞಾನದ ಬಲದಿಂದ ||೬೪||

ಉ :—ನಿಶ್ಚಯನಯದಿಂದ ಕರ್ಮದ ಯೋಗದಿಂದ ಬಂಧವೂ, ವಿಯೋಗದಿಂದ ಮೋಕ್ಷವೂ ಆಗುತ್ತದೆಂದು ಹೇಳುವರು:—

ಕರ್ಮಯೋಗದಿ ಬಂಧ ಬಂಧವಳಿಯೆ ಮೋಕ್ಷ । ಕರ್ಮವು ಕಾರಣವದಕೆ ॥
ಕರ್ಮವ ಜನಿಯಿಸದಿಹನಾತ್ಮನೆಂದು ನೀ । ನಿರ್ಮಲದಿಂದಲಿ ತಿಳಿಯೈ ||೬೫||

ಉ :—ಸ್ಥಲಸಂಖ್ಯೆಯಲ್ಲದ ಪ್ರಕ್ಷೇಪಕವನ್ನು ಹೇಳುವರು:—

ಚತುರಾಶೀತಿಯ ಲಕ್ಷಯೋನಿಗಳಲ್ಲಿ । ಅತಿಶಯ ದುಃಖವನುಣುತ ॥
ನುತಜಿನಮತವನು ನಂಬದೆ ಜೀವನು । ಪತಿತನಾಗಿಹ ಭವದಲ್ಲಿ ||೬೫*೧||

ಉ :—ಜೀವನು ಕುಂಟನಲ್ಲದಿದ್ದರೂ ಕರ್ಮವು ಅವನನ್ನು ಕುಂಟನಂತೆ ತಿರುಗಿಸುವುದು ಎಂದು ಹೇಳುವರು:—

ಕುಂಟನಂತಾತ್ಮನು ಹೋಗುವನಲ್ಲವು । ಅಂಟಿಸಿ ಬರುವವನಲ್ಲ ॥
ಕುಂಟನಂತಲೆದಾಡಿಸುವುದು ಕರ್ಮವೆಂ । ದೀಂಟಿಸಿ ತಿಳಿಯೆಲೆಯೋಗಿ ||೬೬||

ಉ :—ಹೀಗೆ ಕರ್ಮಶಕ್ತಿಯ ಕಥನದ ಸ್ಥಲದ ಎಂಟು ಸೂತ್ರಗಳಾದ ಮೇಲೆ ಭೇದಾಭೇದ ಭಾವನೆಯ ಮುಖ್ಯತೆಯ ಬೇರೆ ಬೇರೆ ಒಂಬತ್ತು ಸೂತ್ರಗಳನ್ನು ಹೇಳುವರು:—

ಪರನಲ್ಲವಾತ್ಮನು ಪರವಾತ್ಮನಲ್ಲವು । ಪರವಾತ್ಮಗಳು ಬೇರೆ ಬೇರೆ ॥
ವರಪ್ರಭಾಕರಯೋಗಿ ಪರಿಕಿಸಿನೋಡೆಲೆ । ನಿರುತವು ಸುಜ್ಞಾನದಿಂದ ||೬೭||

ಉ :—ಆತ್ಮನು ಶುದ್ಧ ನಿಶ್ಚಯನಯದಿಂದ ಜನ್ಮ, ಮರಣ, ಬಂಧ, ಮೋಕ್ಷಾದಿಗಳನ್ನು ಮಾಡದೆ ಇದ್ದಂತೆಯೇ ಇರುತ್ತಾನೆಂದು ಹೇಳುವರು:—

ಬಂಧಮೋಕ್ಷಗಳಿಲ್ಲ ಜನ್ಮ ಮರಣವಿಲ್ಲ । ದಂದುಗವಿಲ್ಲ ಜೀವನಿಗೆ ॥
ಎಂದುಪದೇಶವ ಮಾಡಿದ ಜಿನದೇವ । ನೆಂದು ತಿಳಿದು ನೋಡು ಯೋಗಿ ||೬೮||

ಉ :—ನಿಶ್ಚಯನಯದಿಂದ ಜೀವನಿಗೆ ಜನ್ಮ, ಜರಾ, ಮರಣ, ರೋಗ, ಲಿಂಗ, ವರ್ಣ, ಮತ್ತು ಸಂಜ್ಞೆಗಳಿಲ್ಲವೆಂದು ಹೇಳುವರು:—

ಜನನ ಮರಣರೋಗ ಲಿಂಗವರ್ಣಗಳಿಲ್ಲ । ಚಿನುಮಯ ಸಂಜ್ಞಿಕನಲ್ಲ ॥
ಅನುಪಮ ಜೀವನಿಗಿಲ್ಲವಿವೆಲ್ಲವೆಂ । ದನುಮಾನವಿಲ್ಲದೆ ತಿಳಿಯೈ ||೬೯||

ಉ :—ಹಾಗಾದರೆ, ಜನ್ಮ ಮರಣಾದಿಗಳೆಲ್ಲ ಯಾರಿಗೆ? ಎಂಬ ಪ್ರಶ್ನೆಗೆ ದೇಹಕ್ಕೆ ಎಂದು ಉತ್ತರ ಕೊಡುವರು:—

ದೇಹಕೆ ರೋಗವು ಮರಣ ವರ್ಣಗಳುಂಟು । ದೇಹಕೆ ಲಿಂಗವದುಂಟು ॥
ಊಹಿಸಿಂತಿದನೆಂದು ಯೋಗೀಂದ್ರದೇವರು । ದೇಹದ ಕಥನಮಾಡಿದರು ||೭೦||

ಉ :—ದೇಹಕ್ಕೆ ಬರುವ ಜರಾಮರಣಾದಿಗಳನ್ನು ಕಂಡು ಜೀವನು ಭಯಪಡುವು
ದೇಕೆ ಎಂದು ಕೇಳುವರು:—

ದೊಕ್ಕೆಗುಂಟಾಗುವ ಜನನ ಮರಣವನು । ಚೆಕ್ಕನೆ ಕಂಡಳಬೇಡ ॥
ಅಕ್ಕಟ ದುಃಖವು ಜೀವನಿಗಿಲ್ಲೆಂದು ಚೊಕ್ಕನೆ ತಿಳಿಯೆಲೆಯೋಗಿ ॥೭೧॥

ಉ :—ದೇಹವು ಭಿದ್ಯ, ಛಿದ್ಯ, ಕ್ಷಯಗಳನ್ನು ಹೊಂದಿದರೂ ನೀನು ಭಯಪಡದೆ
ಶುದ್ಧಾತ್ಮನನ್ನು ಧ್ಯಾನಿಸೆಂದು ಹೇಳುವರು:—

ಛಿನ್ನ ಭಿನ್ನವು ಕ್ಷಯವಾದರು ದೇಹವು । ಖಿನ್ನತೆಪಡಬೇಡ ಜೀವ ॥
ತನ್ನ ನಿರ್ಮಲರೂಪದಿಂದಲಾತ್ಮನ ನೋಡೆ । ಭಿನ್ನವಿಲ್ಲದೆ ತೋರ್ಪನಾತ್ಮ ॥೭೨॥

ಉ :—ಕರ್ಮಕೃತವಾದ ಭಾವಗಳೆಲ್ಲ ಅಚೇತನದ್ರವ್ಯವೆಂದೂ ನಿಶ್ಚಯನಯದಿಂದ
ಜೀವನು ಅದಕ್ಕಿಂತ ಭಿನ್ನನೆಂದು ತಿಳಿಯೆಂದು ಹೇಳುವರು:—

ಕರ್ಮದಿಂದಾಗಿಹ ರಾಗಾದಿಗಳೆಲ್ಲ । ಕರ್ಮದಿಂದಾದುದು ದೇಹ ॥
ಮರ್ಮದಿಂದಲಿ ನೋಡೆ ರತ್ನಮೂರರಲಿ । ನಿರ್ಮಲನಾತ್ಮನೆಂದರಿಯೈ ॥೭೩॥

ಉ :—ಜ್ಞಾನಮಯನಾದ ಪರಮಾತ್ಮನು ಪರದ್ರವ್ಯಗಳಿಂದ ಬಿಡಲ್ಪಟ್ಟಿರುವನು.
ಅಂತಹ ಶುದ್ಧಾತ್ಮನನ್ನು ಧ್ಯಾನಿಸೆಂದು ಹೇಳುವರು:—

ಅನ್ಯದ್ರವ್ಯಗಳಿಂದ ಭಿನ್ನನು ಪರಮಾತ್ಮ । ಉನ್ನತ ಚಿದ್ರೂಪನೆಂದು ॥
ಚೆನ್ನಾಗಿ ತಿಳಿದು ನೀ ಪರಭಾವಗಳ ಬಿಟ್ಟು । ನಿನ್ನ ಶುದ್ಧಾತ್ಮನ ನೋಡು ॥೭೪॥

ಉ :—ನಿಶ್ಚಯನಯದಿಂದ ಎಂಟು ಕರ್ಮಗಳಿಲ್ಲದ, ಸಮಸ್ತ ದೋಷಗಳಿಲ್ಲದ,
ರತ್ನತ್ರಯಮಯನೆಂದು ಆತ್ಮನನ್ನು ತಿಳಿಯೆಂದು ಹೇಳುವರು:—

ಎಂಟು ಕರ್ಮಗಳಿಲ್ಲ ಗಂಟು ದೋಷಗಳಿಲ್ಲ । ಎಂಟು ಗುಣಗಳುಂಟು ನೋಡೆ ।
ಅಂಟೆ ದರ್ಶನಜ್ಞಾನ ಚಾರಿತ್ರವಿವು ಮೂರು । ನಂಟಾಗಿರುವುವಾತ್ಮನಿಗೆ ॥೭೫॥

ಉ :—ಹೀಗೆ ತ್ರಿವಿಧಾತ್ಮ ಪ್ರತಿಪಾದಕವಾದ ಪ್ರಥಮ ಮಹಾಧಿಕಾರ ಮಧ್ಯದಲ್ಲಿ
ಪ್ರತ್ಯೇಕ, ಪ್ರತ್ಯೇಕ ಸ್ವತಂತ್ರಗಳಾದ ಭೇದಭಾವನಾಸ್ಥಲದ ಒಂಬತ್ತು ಸೂತ್ರ
ಗಳಾದುವು. ಮುಂದೆ ನಿಶ್ಚಯ ಸಮ್ಯಗ್ದೃಷ್ಟಿಯ ಮುಖ್ಯತೆಯಿಂದ ಒಂದು
ಸ್ವತಂತ್ರ ಸೂತ್ರವನ್ನು ಹೇಳುವರು:—

ತನ್ನನು ತನ್ನಿಂದ ತಿಳಿಯುವ ಜೀವನು । ಸನ್ನುತ ಸದ್ದೃಷ್ಟಿಯವನು ॥
ನನ್ನಿಯಿಂ ಕರ್ಮವ ಲಘುವಾಗಿ ಮಾಳ್ಪ । ನುನ್ನತ ಮಹಿಮನೆಂದರಿಯೈ ॥೭೬॥

ಉ :—ಮಿಥ್ಯಾದೃಷ್ಟಿಯ ಕಥನದ ಮುಖ್ಯತೆಯಿಂದ ಎಂಟು ಸೂತ್ರಗಳನ್ನು
ಹೇಳುವರು:—

ಪರ್ಯಾಯದಲಿ ಮಗ್ನನಾಗಿಹ ಜೀವನು । ಪರಿಪರಿ ಕರ್ಮದೊಳಳ್ದು ॥
ಪರ್ಯಾಯವ ಬಿಡದವ ಮಿಥ್ಯಾದೃಷ್ಟಿಯು । ತಿರುಗುವ ಸಂಸೃತಿಯಲ್ಲಿ ॥೭೭॥

ಉ :—ಮಿಥ್ಯಾತ್ವದಿಂದ ಉಪಾರ್ಜಿಸಿದ ಕರ್ಮದ ಶಕ್ತಿಯನ್ನು ಹೇಳುವರು:—
ಬಲುದೃಢಗುರು ವಜ್ರದಂತಿರ್ಪ ಘನಕರ್ಮ । ಚಲುವ ಜೀವನ ಪಿಡಿದಿಹುದು ॥
ಪಲವು ಜ್ಞಾನಾವರಣೀಯಾದಿ ರೂಪದಿಂ । ಬಲವಾಗಿ ಬಿಗಿದಿಹುದವನ ॥೭೮॥

ಉ :—ಮಿಥ್ಯಾಪರಿಣತಿಯಿಂದ ಜೀವನು ತತ್ವಗಳನ್ನು ವಿಪರೀತವಾಗಿ ತಿಳಿಯುತ್ತಾನೆಂದು ಹೇಳುವರು:—
ಮಿಥ್ಯಾತ್ವ ಪರಿಣತಿಯಿಂದಲಿ ಜೀವನು । ತಥ್ಯವಲ್ಲದ ತತ್ವಗಳನು ।
ಸತ್ಯವೆನ್ನುತ ತಿಳಿಯುವನನ್ಯಭಾವದಿ । ಅತ್ಯಂತ ಕರ್ಮದ ವಶದಿ ॥೭೯॥

ಉ :—ಮೇಲೆ ಹೇಳಿದ ಕರ್ಮಜನಿತ ಭಾವಗಳನ್ನು ಮಿಥ್ಯಾತ್ವ ಪರಿಣತಿಯಿಂದ ಬಹಿರಾತ್ಮನು ತನ್ನವುಗಳೆಂದು ತಿಳಿಯುತ್ತಾನೆ. ಅವು ತನ್ನವಲ್ಲ ಎಂದು ಐದು ಸೂತ್ರಗಳಲ್ಲಿ ಹೇಳುವರು:—
ಗೌರಶ್ಯಾಮನು ನಾನು ಬೇರೆ ವರ್ಣನು ನಾನು । ಪರಿಪರಿ ಕೃಶಸ್ಥೂಲನೆಂಬ ॥
ಪರಿಪರಿ ಮಿಥ್ಯಾತ್ವ ಪರಿಣಾಮಗಳಿಂದ । ಹರುಷದೊಳಿರ್ಪನವ ಮೂಢ ॥೮೦॥

ಉ :—ಪುನಃ ಅದನ್ನೇ ಹೇಳುವರು:—
ವೈಶ್ಯ ಕ್ಷತ್ರಿಯ ಶೂದ್ರ ಬ್ರಾಹ್ಮಣ ನಾನೆಂದು । ಶೇಷಸ್ತ್ರೀಪುನ್ನಪುಂಸಕನೆಂ ॥
ದಾಶೆಯಿಂ ಭಾವಿಸಿ ವರ್ಣವೇದಗಳೆಂದು । ಕ್ಲೇಶವಪಡುತಿಹ ಮೂಢ ॥೮೧॥

ಉ :—ಪುನಃ ಅದನ್ನೇ ಹೇಳುವರು:—
ತರುಣವೃದ್ಧನು ಬಾಲ ರೂಪವಂತನು ನಾನು । ವರಪಂಡಿತ ಶ್ವೇತಪಟನೆಂ ॥
ಬುರುತರ ಶೂರನು ವರದಿಗಂಬರನೆಂದು । ಪರಿಪರಿಯಾಗಿ ತಿಳಿವನು ॥೮೨॥

ಉ :....ಪುನಃ ಅದನ್ನೇ ಹೇಳುವರು:....
ಜನನಿ ಜನಕ ಪುತ್ರ ಮಿತ್ರಭಾವೆಯು ನಾನು । ವಿನುತ ದ್ರವ್ಯವು ಮನೆ ನಾನು ॥
ಜನಪರಿವಾರವು ನಾನೆಂದು ಮೂಢನು । ಕನವರಿಸುತ ಬಾಳುವನು ॥೮೩॥

ಉ :....ಪುನಃ ಅದನ್ನೇ ಹೇಳುವರು;....
ದುಃಖದ ಕಾರಣವಾದ ವಿಷಯುಗಳ । ಸುಖದ ಕಾರಣವೆಂದು ತಿಳಿದು ॥
ಅಖಿಲ ಪಾಪಗಳನು ಮಾಡುತಲಿರುವವ । ಸುಖವ ಪಡೆವನೇನು ಪೇಳು ॥೮೪॥

ಉ:....ಹೀಗೆ ತ್ರಿವಿಧಾತ್ಮ ಕಥನದ ಪ್ರಥಮ ಮಹಾಧಿಕಾರ ಮಧ್ಯದಲ್ಲಿ 'ಜಿ ಉ ಮಿಚ್ಛತ್ತೇ' ಇತ್ಯಾದಿ ಎಂಟು ಸೂತ್ರಗಳಿಂದ ಮಿಥ್ಯಾದೃಷ್ಟಿಯ ಪರಿಣತಿಯ ವ್ಯಾಖ್ಯಾನಸ್ಥಲವನ್ನು ಮುಗಿಸಿದ್ದಾದ ಮೇಲೆ ಮುಂದೆ ಸಮ್ಯಗ್ದೃಷ್ಟಿಯ ಮುಖ್ಯತೆಯ ವ್ಯಾಖ್ಯಾನದ 'ಕಾಲಲಹೇವಿಣು' ಇತ್ಯಾದಿ ಸೂತ್ರಾಷ್ಟಕಗಳನ್ನು ಹೇಳುವರು:....

ಕಾಲಲಬ್ಧಿಯು ಕೂಡಿಬಂದಾಗ ಯೋಗಿಗೆ । ಲೀಲೆಯಿಂ ಕರ್ಮವು ಜರುಗಿ ॥
ಮೂಲಸಮ್ಯಗ್ದೃಷ್ಟಿತನವದು ದೊರೆಕೊಂಡು । ಕಲಿಲವಳಿದು ಸುಖಿಯಹನು ॥೮೫॥

ಉ :—ಮೇಲಿನಂತೆ ಸಮ್ಯಗ್ದೃಷ್ಟಿಯಾಗಿ ಭೇದವಿಜ್ಞಾನದ ಭಾವನೆಯನ್ನು ಮಾಡುವಂತೆ ಆ ಭಾವನೆಯ ಸ್ವರೂಪವನ್ನು ಕ್ರಮದಿಂದ ಏಳು ದೋಹಾಸೂತ್ರಗಳಲ್ಲಿ ಹೇಳುವರು:—

ಆತ್ಮಗೌರನು ಕೃಷ್ಣನೀಲರಕ್ತನು ಅಲ್ಲ । ಆತ್ಮಸೂಕ್ಷ್ಮನು ಸ್ಥೂಲನಲ್ಲ ॥
ಸ್ವಾತ್ಮದಿ ಭಿನ್ನವೆಂದರಿದು ನಿನ್ನೊಳು ನೀನು । ಆತ್ಮನೊಳ್ರತನಾಗು ಯೋಗಿ ॥೮೬॥

ಉ :—ಆತ್ಮನಿಗೆ ಬ್ರಾಹ್ಮಣಾದಿ ವರ್ಣಗಳಿಲ್ಲವೆಂದು ಹೇಳುವರು :—

ಆತ್ಮನು ಬ್ರಹ್ಮ ಕ್ಷತ್ರಿಯು ವೈಶ್ಯನಲ್ಲ । ವಾತ್ಮನು ಶೂದ್ರ ತಾನಲ್ಲ ॥
ಆತ್ಮನು ಸ್ತ್ರೀ ಪುನ್ನಪುಂಸಕನಲ್ಲವೆಂ । ದಾತ್ಮನ ತಿಳಿವವ ಯೋಗಿ ॥೮೭॥

ಉ :—ಆತ್ಮನು ಕ್ಷಪಣಕ, ಗುರು ಮೊದಲಾದವನಲ್ಲವೆಂದು ಹೇಳುವರು:—

ಆತ್ಮನು ವಂದಕ, ಗುರುಕ್ಷಪಣಕನಲ್ಲ । ವಾತ್ಮಶ್ವೇತಾಂಬರನಲ್ಲ ॥
ವಾತ್ಮದಿಗಂಬರ ಲಿಂಗಿಯಾಗಿಲ್ಲವೆಂ । ದಾತ್ಮವೇದಿಯು ತಿಳಿಯುವನು ॥೮೮॥

ಉ :—ಪುನಃ ಅದನ್ನೇ ಹೇಳುವರು:—

ಆತ್ಮನು ಗುರುವಲ್ಲವಾತ್ಮ ಶಿಷ್ಯನು ಅಲ್ಲ । ವಾತ್ಮಭೃತ್ಯನು ಶೂರನಲ್ಲ ॥
ಆತ್ಮನು ಧನಿಯಲ್ಲವಾತ್ಮನೀಚನು ಅಲ್ಲ । ವಾತ್ಮನು ಶುದ್ಧ ತಾನಹುದು ॥೮೯॥

ಉ :—ಪುನಃ ಅದನ್ನೇ ಹೇಳುವರು:—

ಆತ್ಮಮಾನವನಲ್ಲವಾತ್ಮದೇವನು ಅಲ್ಲ । ಆತ್ಮತಿರ್ಯಂಚತಾನಲ್ಲ ॥
ಆತ್ಮನು ನಾರಕಿತಾನಲ್ಲವೆನುತಲಿ । ಸ್ವಾತ್ಮದೊಳರಿವನು ಯೋಗಿ ॥೯೦॥

ಉ:—ಪುನಃ ಅದನ್ನೇ ಹೇಳುವರು:—

ಆತ್ಮಪಂಡಿತ ಮೂರ್ಖ ಈಶ್ವರತಾನಲ್ಲ । ಆತ್ಮವೃದ್ಧನು ಬಾಲನಲ್ಲ ॥
ಆತ್ಮತರುಣನಲ್ಲವೆನುತಭಾವಿಪಯೋಗಿ । ಸ್ವಾತ್ಮದಿ ತಿಳಿಯೆಲೆಯೋಗಿ ॥೯೧॥

ಉ :—ಆತ್ಮನ ಚೇತನತ್ವವನ್ನು ವರ್ಣಿಸುವರು:—

ಚೈತನ್ಯಭಾವದೊಳಿಹ ನಾತ್ಮನಲ್ಲದೆ । ಪೂತದ್ರವ್ಯಗಳೊಳಗಿಲ್ಲ ॥
ಆತನು ಪುಣ್ಯಪಾಪಗಳೊಳಗಿಲ್ಲೆಂದು । ನೀತಿಯಿಂದರಿಯಲೆ ಯೋಗಿ ॥೯೨॥

ಉ :—ಹೀಗೆ ತ್ರಿವಿಧಾತ್ಮ ಪ್ರತಿಪಾದಕವಾದ ಪ್ರಥಮ ಮಹಾಧಿಕಾರ ಮಧ್ಯದಲ್ಲಿ ಮಿಥ್ಯಾದೃಷ್ಟಿಯ ಭಾವನೆಗೆ ವಿಪರೀತವಾದ ಸಮ್ಯಗ್ದೃಷ್ಟಿಯ ಭಾವನೆಯ ಸ್ಥಲದಲ್ಲಿ ಎಂಟು ಸೂತ್ರಗಳು ಮುಗಿದುವು. ಮುಂದೆ ಸಾಮಾನ್ಯ ಭೇದ ಭಾವನೆಯ ಮುಖ್ಯತೆಯ 'ಅಪ್ಪಾಸಂಜಮು' ಇತ್ಯಾದಿ ಸೂತ್ರಗಳಲ್ಲಿ ಪ್ರಕ್ಷೇಪಗಳನ್ನುಳಿದ ಮೂವತ್ತೊಂದು ಸೂತ್ರ ಪರ್ಯಂತ ಉಪಸಂಹಾರರೂಪ ಚೂಲಿಕೆ

ಗಳನ್ನು ಹೇಳುತ್ತ, ಆದರಲ್ಲೂ ಆತ್ಮನು ಪುಣ್ಯ ಪಾಪಸ್ವರೂಪನಲ್ಲವಾದರೆ
ಅವನ ಸ್ವರೂಪವೆಂತಿಹುದೆಂಬ ಪ್ರಶ್ನೆಗೆ ಉತ್ತರ ಹೇಳುವರು:—

ಆತ್ಮಸಂಯಮಶೀಲನಾತ್ಮಗುಣಾನ್ವಿತ । ಆತ್ಮದರ್ಶನ ಜ್ಞಾನಮಯನು ॥
ಆತ್ಮನು ಶಾಶ್ವತ ಮೋಕ್ಷಸುಖಿಯುಯೆಂದು । ಆತ್ಮನ ತಿಳಿಯಲೆ ಯೋಗಿ ॥೯೩॥

ಉ:—ನಿಶ್ಚಯನಯದಿಂದ ಅನ್ಯದರ್ಶನ ಜ್ಞಾನ ಚಾರಿತ್ರಗಳು ಸ್ವಶುದ್ಧಾತ್ಮ
ಸಂಪ್ರಾಪ್ತಿಗೆ ಬಾಧಕಗಳೆಂದು ಹೇಳುವರು:—

ಅನ್ಯದರ್ಶನವಲ್ಲವನ್ಯತಪಗಳಲ್ಲ । ಅನ್ಯಜ್ಞಾನವು ತಾನಲ್ಲ ॥
ಅನ್ಯಚರಿತಭಾವವಾತ್ಮರೂಪಲ್ಲೆಂದು । ಚಿನ್ಮಯ ನವನೆಂದರಿಯೈ ॥೯೪॥

ಉ:—ನಿಶ್ಚಯದಿಂದ ವೀತರಾಗಭಾವಪರಿಣತನಾದ ಸ್ವಶುದ್ಧಾತ್ಮನೇ ನಿಶ್ಚಯ
ತೀರ್ಥ, ನಿಶ್ಚಯಗುರು, ನಿಶ್ಚಯದೇವರೆಂದು ತಿಳಿಯಬೇಕೆಂದು ಹೇಳುವರು:—

ಅನ್ಯತೀರ್ಥಗಳಲ್ಲವನ್ಯಗುರುಗಳಲ್ಲ । ಅನ್ಯಭಾವಗಳಲ್ಲ ನೀನು ॥
ನಿನ್ನಲ್ಲಿ ತೀರ್ಥವು ನಿನ್ನಲ್ಲಿ ಗುರುಹೇವ । ರೆನ್ನುತ ನಿನ್ನಲ್ಲಿ ತಿಳಿಯೈ ॥೯೫॥

ಉ:—ನಿಶ್ಚಯದಿಂದ ಆತ್ಮಸಂವಿತ್ತಿಯೇ ದರ್ಶನವೆಂದು ಹೇಳುವರು:—

ಕೇವಲ ದರ್ಶನಮಯನಾಗಿಹನಾತ್ಮ । ವ್ಯವಹಾರವಳಿದವನವನು ॥
ಪಾವನ ಮೂಲೋಕಸಾರನಾಗಿಹನೆಂದು । ಭಾವದಿಂದಲಿ ನೀನು ತಿಳಿಯೈ ॥೯೬॥

ಉ:—ಅಂತರ್ಮುಹೂರ್ತಮಾತ್ರದ ಧ್ಯಾನದಿಂದ ನಿರ್ಮಲರೂಪದ ಆತ್ಮನನ್ನು
ಧ್ಯಾನಿಸೆಂದು ಹೇಳುವರು:—

ಅಂತರ್ಮುಹೂರ್ತದಿ ಮೋಕ್ಷವನೀಯುವ । ನಂತದ ಧ್ಯಾನವನೀನು ॥
ಅಂತರವಿಲ್ಲದೆ ಧ್ಯಾನಿಸನ್ಯವದೇಕೆ । ಸಂತತ ಸುಖವನು ಪಡೆವೆ ॥೯೭॥

ಉ:—ವೀತರಾಗಮನದ ಧ್ಯಾನವಿಲ್ಲದವನು ಶಾಸ್ತ್ರ ಪುರಾಣಗಳನ್ನು ಪಠಿಸುವ
ನೆಂತು ? ಎಂದು ಕೇಳುವರು:—

ನಿರ್ಮಲವಾದಾತ್ಮ ಧ್ಯಾನವನರಿಯದೆ । ಮರ್ಮದ ಶಾಸ್ತ್ರವನೋದಿ ॥
ಸ್ವರ್ಮಸದಿಂದ ಧರ್ಮವನೆಂತು ಪೇಳುವ । ನಿರ್ಮಲಮನದಿಂದ ತಿಳಿಯೈ ॥೯೮॥

ಉ:—ಆತ್ಮನನ್ನರಿತವನು ಎಲ್ಲವನ್ನೂ ತಿಳಿಯಬಲ್ಲನೆಂದು ಹೇಳುವರು:—

ಆತ್ಮನನರಿವವನರಿವನೆಲ್ಲವನು । ಸ್ವಾತ್ಮದಿ ಮೂರುಲೋಕವನು ॥
ಆತ್ಮನು ಕೇವಲಜ್ಞಾನಿಯಪ್ಪುದರಿಂದ । ಸ್ವಾತ್ಮದೊಳೆಲ್ಲವನರಿವ ॥೯೯॥

ಉ:—ಪುನಃ ಅದನ್ನೇ ಹೇಳುವರು:—

ಆತ್ಮಸ್ವರೂಪದೊಳಿರುತಿರ್ಪಜೀವನು । ಸ್ವಾತ್ಮಾವಲೋಕನದಿಂದ ॥
ಆತ್ಮನೊಳಗೆ ಲೋಕವೆಲ್ಲವು ಲಘುವಾಗಿ । ಆತ್ಮಜ್ಞಾನಿಗೆ ತೋರುವುದು ॥೧೦೦॥

ಉ :—ದೃಷ್ಟಾಂತಗಾಥೆಯು:—

ಅಂಬರದೊಳಗಿರ್ಪ ಸೂರ್ಯನಕಿರಣದಿಂ । ತುಂಬಿ ಲೋಕವು ಕಾಣುವಂತೆ ॥
ಇಂಬಾಗಿ ತನ್ನೊಳಾತ್ಮನ ನೋಡುವವನಿಗೆ । ತುಂಬಿಕಾಣುವುವೆಲ್ಲವಸ್ತು ॥೧೦೧॥

ಉ :—ದೃಷ್ಟಾಂತವು:—

ಅಂಬರದೊಳಗಿರ್ಪ ತಾರಾಗಣಗಳು । ತುಂಬಿದಜಲಧಿ ತೋರ್ಪಂತೆ ॥
ಇಂಬಾಗಿ ನಿರ್ಮಲನಾತ್ಮನನೋಡಲು । ಬಿಂಬಿಸಿತೋರ್ಪುದು ಲೋಕ ॥೧೦೨॥

ಉ :—ಆತ್ಮಜ್ಞಾನದ ಬಲದಿಂದ ಸ್ವಪರಪದಾರ್ಥಗಳನ್ನು ತಿಳಿಯಲಾಗುವುದು ಅಂತಹ ಆತ್ಮನನ್ನು ಧ್ಯಾನಿಸೆಂದು ಹೇಳುವರು:—

ನಿರುಪಮಜ್ಞಾನದ ಬಲದಿಂದ ಪರವಸ್ತು । ಸುರಚಿರವಾಗಿ ತೋರುವುದು ॥
ಪರಮಜ್ಞಾನವನೀನು ಬಿಡದೆ ಭಾವಿಸುಜೀವ । ನಿರುತವು ನಿನ್ನೊಳು ನೀನು ॥೧೦೩॥

ಉ :—ಪ್ರಭಾಕರಭಟ್ಟನು ಜ್ಞಾನದ ಸ್ವರೂಪವನ್ನು ಕೇಳುತ್ತಾನೆ:—

ಜ್ಞಾನವು ತನ್ನೊಳು ಪರಮಪ್ರಕಾಶದಿ । ಸಾನಂದದಿ ಬೆಳಗಿರಲು ॥
ಅನ್ಯಜ್ಞೇಯಗಳೇಕೆ ಬೇಡವು ಗುರುವರ । ಸನ್ನುತ ನಿಜವನು ಪೇಳಿ ॥೧೦೪॥

ಉ :—ಅದಕ್ಕೆ ಉತ್ತರವಾಗಿ ನಾಲ್ಕು ದೋಹಾಸೂತ್ರಗಳಿಂದ ಶ್ರೀಗುರುವು ಜ್ಞಾನದ ಸ್ವರೂಪವನ್ನು ಹೇಳುವರು:—

ವ್ಯವಹಾರನಯದಿಂದ ಗಗನಪ್ರಮಾಣನೆಂ । ದವನು ನಿಶ್ಚಯನಯದಿಂದ ॥
ಅವಧರಿಸಿದದೇಹದಳತೆಯೊಳಿಹನೆಂದು । ಸುವಿಶುದ್ಧಮನದಿಂದ ತಿಳಿಯೈ ॥೧೦೫॥

ಉ :—ಮುಂದೆ ಪರಭಾವದ ನಿಷೇಧಮಾಡುವರು:—

ಪರಭಾವಗಳೆಲ್ಲ ಜಡದ ಸ್ವಭಾವನೆಂ । ದರಿತು ತೊರೆಯುವುದೆಲ್ಲವನು ॥
ನಿರುತವು ನಿನ್ನೊಳು ನಿನ್ನನು ನೋಡುತ । ಪರಮಾತ್ಮನ ಪಡೆಯುವುದು ॥೧೦೬॥

ಉ :—ಆತ್ಮನ ಸ್ವರೂಪವನ್ನು ಹೇಳುವರು:—

ಧರ್ಮಾರ್ಥಕಾಮಗಳಿವು ಮೂರನು ಬಿಟ್ಟು । ನಿರ್ಮಲಜ್ಞಾನದೊಳಿರುವ ॥
ಸ್ವರ್ಮೋಕ್ಷಪತಿ ಪರಮಾತ್ಮನನೆನೆವುದು । ಶರ್ಮ ಪ್ರಭಾಕರಭಟ್ಟ ॥೧೦೭॥

ಉ :—ಅದೇ ಜ್ಞಾನದಿಂದ ಪರಬ್ರಹ್ಮಪ್ರಾಪ್ತಿಯೆಂದು ಹೇಳುವರು:—

ತನ್ನನು ಜ್ಞಾನಸ್ವರೂಪನೆಂದರಿಯದೆ । ಭಿನ್ನಸ್ವರೂಪದಿ ತಿಳಿಯೆ ॥
ಸನ್ನುತ ಪರಬ್ರಹ್ಮಜ್ಞಾನಸ್ವರೂಪದಿ । ನಿನ್ನೊಳು ಕಾಣುವುದೆಂತು ? ॥೧೦೮॥

ಉ :—ನಾಲ್ಕು ದೋಹೆಗಳ ಅಂತರಸ್ಥಲದಲ್ಲಿ ಪರಲೋಕ ಶಬ್ದವ್ಯುತ್ಪತ್ತಿಯಿಂದ ಪರಲೋಕವೆಂಬ ಹೆಸರಿನ ಪರಮಾತ್ಮನ ಸ್ವರೂಪವನ್ನು ಹೇಳುವರು:—

ಪರಮಾತ್ಮನು ತಾನು ಪರಲೋಕನಾಮದಿಂ । ದಿರುತಿಹನದರಿಂದ ನೀನು ॥
ಪರಲೋಕವೆನ್ನುತಲರಿವುದು ಪರಮನ । ಪರಿಶುದ್ಧಮನದಿಂದ ಯೋಗಿ ॥೧೦೯॥

ಉ :—ಅದನ್ನೇ ಹೇಳುವರು:—
ಹರಿಹರಮುನಿವರರೆಲ್ಲರ ಮನದೊಳ । ಗಿರುತಿಹ ಪರಮಾತ್ಮನನ್ನು ॥
ಪರಲೋಕಶಬ್ದದಿಂ ಪರಿಭಾವಿಸು ಜೀವ । ಸರಸದಿ ಚಿನುಮಯನನ್ನು ॥೧೧೦॥

ಉ :—ಅದನ್ನೇ ಹೇಳುವರು:—
ಮನವ ತನ್ನೊಳಗಿಟ್ಟು ಪರಭಾವವಬಿಟ್ಟು । ಸನುಮತದಿಂದ ನಿಲ್ವವನು ॥
ಅನುಗಾಲ ಪರಲೋಕವವನೆಂದು ಜಗವು । ಚಿನುಮಯನನ್ನು ತಿಳಿಯಲಿ ॥೧೧೧॥

ಉ :—ಅದನ್ನೇ ಹೇಳುವರು:—
ಮತಿಯಿಂದ ಗತಿಯಪ್ಪುದದರ ಕಾರಣದಿಂದ । ಚತುರ್ಗತಿಯಲ್ಲಿ ಸುತ್ತುವನು ॥
ಗತಿತನ್ನದಲ್ಲವೆಂದರಿತು ನಿಜಾತ್ಮನ । ಮತಿವಂತ ನೋಡೆಲೆ ಯೋಗಿ ॥೧೧೨॥

ಉ :—ಹೀಗೆ ಸೂತ್ರ ಚತುಷ್ಟಯಗಳ ಅಂತರಸ್ಥಲದಲ್ಲಿ ಪರಲೋಕಶಬ್ದವ್ಯುತ್ಪತ್ತಿಯಿಂದ ಪರಲೋಕಶಬ್ದವಾಚ್ಯ ಪರಮಾತ್ಮನನ್ನು ಹೇಳಿದ್ದಾಯ್ತು. ಮುಂದೆ ಪರದ್ರವ್ಯವೆಂದರೇನು ? ಎಂಬ ಪ್ರಶ್ನೆಗೆ ಉತ್ತರ ಹೇಳುತ್ತಾರೆ:—
ಪರದ್ರವ್ಯವೆಂದರೇನೆಂಬುದನೆನಗೆ । ಅರುಹಿ ರಕ್ಷಿಸು ಗುರುವರನೆ ॥
ಪರಿಪರಿಯಿಂದಿಹ ಪುದ್ಗಲಾದಿಗಳೈದು । ಪರದ್ರವ್ಯವೆಂಪರಿ ಶಿಷ್ಯ ॥೧೧೩॥

ಉ :—ವೀತರಾಗ ನಿರ್ವಿಕಲ್ಪ ಸಮಾಧಿಯೆಂಬ ಬೆಂಕಿಯು ಕರ್ಮವೆಂಬ ಕಟ್ಟಿಗೆಗಳನ್ನು ಸುಡುವುದು. ಆದನ್ನಾರಾಧಿಸೆಂದು ಹೇಳುವರು:—
ನಿಮಿಷವೈವತ್ತರೊಳ್ಪರಮಾತ್ಮರೂಪನು । ಅಮಿತವೇಗದೊಳುನೋಡಿದರೆ ॥
ಅಮಮ ವಿಸ್ಮಯವಾಗಿ ಕರ್ಮವು ಕೆಡುವುದು । ಅಮರ್ದಬೆಂಕಿಯು ಸುಡುವಂತೆ ॥೧೧೪॥

ಉ :—ಸಮಸ್ತ ಚಿಂತಾಜಾಲವನ್ನು ಹರಿದು ನಿರಂತರವೂ ಶುದ್ಧಾತ್ಮನನ್ನು ಧ್ಯಾನಿಸೆಂದು ಹೇಳುವರು;—
ಸಕಲಚಿಂತೆಯ ಬಿಟ್ಟು ನಿಶ್ಚಿಂತ ಮನದಿಂದ । ಅಕಲಂಕ ಶುದ್ಧಾತ್ಮನನ್ನು ॥
ವಿಕಲ ನಿರಂಜನದೇವನ ನೋಡೆಂದು । ಸಕಲವ ಪೇಳ್ದನಾಗುರುವು ॥೧೧೫॥

ಉ :—ಶಿವಶಬ್ದದ ಪರಮಾತ್ಮನನ್ನು ಧ್ಯಾನಿಸಿದರೆ ಹುಟ್ಟುವ ಸುಖವನ್ನು ಮೂರು ದೋಹಾಸೂತ್ರಗಳಿಂದ ಹೇಳುವರು:—
ಶಿವಶಬ್ದದಿಂದ ಶುದ್ಧಾತ್ಮನಧ್ಯಾನಿಸಿಪ । ಅವಲೋಕಿಪ ಕಾರ್ಯದಿಂದ ॥
ಭುವನ ವಿಸ್ಮಯವಾದ ಸುಖವು ದೊರೆವುದೆಂದು । ಸುವಿವೇಕದಿಂದಲಿ ತಿಳಿಯೈ ॥೧೧೬॥

ಉ :—ದೇವಾದಿಗಳಿಗೂ ಆ ಸುಖವು ದುರ್ಲಭವೆಂದು ಹೇಳುವರು:—
ಪರಮ ಮಹಾಮುನಿಯರಿತು ತನ್ನೊಳು ತಾನು । ಪರಮಾತ್ಮನನೋಳ್ಪಾಗ ॥
ಇರುವ ಮಹಾಸುಖವಿಂದ್ರರಿಗಿಲ್ಲವೆಂ । ದರಿತು ಭಾವಿಸುವುದು ಯೋಗಿ ॥೧೧೭॥

ಉ :—ವಿರಾಗಿಯಾದ ಮುನಿಯೇ ಅದನ್ನು ಪಡೆಯುತ್ತಾನೆನ್ನುವರು:—
ವರಮುನಿಯಾಗಿದ್ದ ಕಾಲದಿ ಜಿನದೇವ । ಪರಮಾತ್ಮನ ಧ್ಯಾನದಿಂದ ॥
ಪರಮಪದವನೆಂತು ಪಡೆದನೋ ಆದರಂತೆ । ನಿರುತವು ಧ್ಯಾನಿಸು ನೀನು ॥೧೧೮॥

ಉ :—ಕಾಮಕ್ರೋಧಾದಿಗಳ ಪರಿಹಾರದಿಂದ ಶಿವಶಬ್ದವಾಚ್ಯನಾದ ಪರಮಾತ್ಮನನ್ನು ನೋಡೆಂದು ಹೇಳುವರು:—
ಘನಮೇಘಪಟಲವಿಲ್ಲದ ರವಿತೇಜವು । ಘನವಾದ ಬೆಳಕನೀವಂತೆ ॥
ತನುಕರ್ಮವಿಲ್ಲದ ಶಿವಶಾಂತತೋರ್ಪನೆಂ । ದೆನುತ ನಿನ್ನೊಳು ನಿನ್ನನೋಡು ॥೧೧೯॥

ಉ :—ಕೊಳಕಾದ ಕನ್ನಡಿಯಲ್ಲಿ ರೂಪವು ಕಾಣದಂತೆ ಮಲಿನಚಿತ್ತಕ್ಕೆ ಶುದ್ಧಾತ್ಮನು ಕಾಣುವುದಿಲ್ಲವೆಂದು ಹೇಳುವರು:—
ಕೆಸರಲೇಪನದಿ ಕನ್ನಡಿಯು ತಾಕಾಣದೆ । ಮುಸುಕಾಗಿಕಾಣುವತೆರದಿ ॥
ಮುಸುಕಿದ ರಾಗವಳಿದುನೊಳ್ಪುದಾತ್ಮನ । ನಸನಾಸವಾದ ಚಿತ್ತದಲಿ ॥೧೨೦॥

ಉ :—ವಿಷಯಾಸಕ್ತನಿಗೆ ಪರಮಾತ್ಮನ ದರ್ಶನವಿಲ್ಲವೆಂದು ಹೇಳುವರು:—
ವರೆಯೊಂದರೊಳಗೆ ಮತ್ತೆರಡು ಕತ್ತಿಗಳ । ನ್ನಿರಿಸಲಾಗದ ತೆರದಿಂದ ॥
ಹರಿಣಾಕ್ಷಿಯಧ್ಯಾನ ಪರಮನಧ್ಯಾನ ವಿ । ವೆರಡಿರಲಾತ್ಮತೋರುವನೆ ॥೧೨೧॥

ಉ :—ರಾಗಾದಿಗಳಿಲ್ಲದ ಮನದಲ್ಲಿ ಪರಮಾತ್ಮನ ವಾಸವಿರುವುದೆಂದು ಹೇಳುವರು:—
ಮಾನಸಸರಸಿಯೊಳಾನಂದದಿಹಂಸ । ಲೀನವಾಗಿರುತಿರ್ಪತೆರದಿ ॥
ಏನೊಂದನೆನೆಯದೆ ಪರಮಾತ್ಮಕಲೆಯೊಳು । ಲೀನವಾಗಿರು ಸುಖವಹುದು ॥೧೨೨॥

ಉ :—ಇದೇ ಮಾತನ್ನು ದೃಢಗೊಳಿಸುವರು:—
ಕರ್ಮಾಂಜನವಿಲ್ಲದಿರುತಿಹ ಪರಮಾತ್ಮ । ನಿರ್ಮಲಶಿಲೆಯ ಮೂರ್ತಿಯಲಿ ॥
ನಿರ್ಮಿತ ದೇವಾಲಯಾದಿಗಳಲ್ಲಿಲ್ಲ । ನಿರ್ಮಲನವನಿನ್ನೊಳಿಹನು ॥೧೨೩॥

ಶ್ರೀ ಬ್ರಹ್ಮದೇವರ ವಾಕ್ಯ :—

ಸಮತೆಯಿಂ ಶತ್ರು ಮಿತ್ರರು ಬಂಧುವರ್ಗವು । ಸಮತೆಯಿಂ ಸುಖದುಃಖಗಳನು ॥
ಸಮತೆಯಿಂದಲಿ ನಿಂದೆಗಳನು ಪ್ರಶಂಸೆಯು । ಸುಮನತೆಯಿಂದ ಭಾವಿಪುದು ॥*॥

ಸಮತೆಯಿಂ ಕಾಂಚನ ಕಬ್ಬಿಣಗಳನು । ಸಮನೆಂದು ಭಾವಿಸುತಿಹುದು ॥
ಸಮನೆಂದು ಜೀವಿತ ಮರಣವ ತಿಳಿದು । ಸಮಣನು ಸುಖವಪೊಂದುವನು ॥*॥

ಉ :—ಇಲ್ಲಿಗೆ ಇಪ್ಪತ್ತೊಂದು ಸೂತ್ರಗಳ ಚೂಲಿಕೆಯು ಮುಗಿದುದು. ಮುಂದೆ ಸ್ಥಲಸಂಖ್ಯೆಯಲ್ಲದ ಎರಡು ಪ್ರಕ್ಷೇಪಕ ದೋಹಗಳನ್ನು ಹೇಳುವರು:—
ಮಲಿನವಾಗಿಹ ಮನವನು ಶುದ್ಧಗೊಳಿಸಿ । ಕಲೆಯುತಲಾತ್ಮನೊಳ್ಬೆರೆಸಿ ॥
ಮಲಿನವಿಲ್ಲದ ಪರಮಾತ್ಮನ ಪೂಜಿಸು । ನಲವಿನಿಂ ಪರಮ ಚಿದ್ಘನನ ॥೧೨೩*೨॥

ಉ:—ಇದೇ ಮಾತನ್ನು ದೃಢಗೊಳಿಸುವರು:—
ವಿಷಯಕಷಾಯದಿ ಮುಳುಗಿಹ ಮನವನು । ವಶಗೈದು ಪರಮಾತ್ಮನಲ್ಲಿ ॥
ಅಸದೃಶದಿಂದಲಿ ಬೆರಸಿನೋಡಿದರಾತ್ಮ । ಮಸುಳದೆ ತೋರುವನೊಳಗೆ ॥೧೨೩*೩॥

ಹೀಗೆ ಪರಮಾತ್ಮ ಪ್ರಕಾಶದ ಟೀಕೆಯಲ್ಲಿ ಮೂರು ಕ್ಷೇಪಕಗಳನ್ನು ಬಿಟ್ಟು ಒಂದನೂರಇಪ್ಪತ್ಮೂರು ದೋಹಾಸೂತ್ರಗಳಲ್ಲಿ ಬಹಿರಾತ್ಮಾದಿ ತ್ರಿವಿಧಾತ್ಮರನ್ನು ವರ್ಣಿಸುವ ಪ್ರಥಮ ಮಹಾಧಿಕಾರವು ಮುಗಿದುದು.

ಶಾಂತಿಜಿನೇಶ್ವರ ಶಾಂತಿಚಕ್ರೇಶ್ವರ । ಶಾಂತಿಜಿನನು ಕಾಮದೇವ ॥
ಇಂತು ತ್ರಿವಿಧವಾದ ಪದದೊಳಗಿರ್ದನ । ಶಾಂತಮನದೊಳು ವಂದಿಸುವೆ ॥*॥

ಸಂತತ ಮುಕ್ತಿಯ ಸುಖದೊಳಗಿರ್ಪನ । ಕುಂಥು ಜಿನೇಶನ ನುತಿಸಿ ॥
ಅಂತಕನುಪಟಲವನು ಪರಿಹರಿಸೆಂದು । ಸಂತೋಷದಿಂದ ವಂದಿಸುವೆ ॥*॥

ಅರಜಿನದೇವನೆ ಸುರಪತಿವಂದ್ಯನೆ । ಪರಮಚಿತ್ಪದದೊಳಗಿಹನೆ ॥
ಪರಮಕೃಪೆಯೊಳೆನ್ನ ರಕ್ಷಿಸೆಂದೆನ್ನುತ । ಪರಿಪರಿಯಿಂದ ಪ್ರಾರ್ಥಿಸುವೆ ॥*॥

ಶುದ್ಧಾತ್ಮ ತತ್ವಭಾವವನುರೆ ಕೆಡಿಸುವ- । ಶುದ್ಧಮಿಥ್ಯಾತ್ವವಿಷಯವ ॥
ಬದ್ಧಿಸಿವೀತರಾಗನ ನಿರ್ವಿಕಲ್ಪದ । ಶುದ್ಧಾತ್ಮಜ್ಞಾನವ ಸ್ಮರಿಸಿ ॥*॥

ದೋಷವಿನಾಶನ ತ್ರಿಭುವನ ಖ್ಯಾತನ । ಶ್ರೀಶಯೋಗೀಂದ್ರಾರ್ಯನ ಶ್ರೀ ॥
ಭಾಸುರ ಚರಣಕೆ ದೇಶಭೂಷಣನಾನು । ಮಾಸದ ಮನದಿ ವಂದಿಪೆನು ॥*॥

ಶ್ರೀ ಯೋಗೀಂದ್ರ ದೇವಾಚಾರ್ಯ ವಿರಚಿತವಾದ

ಪರಮಾತ್ಮ ಪ್ರಕಾಶದಲ್ಲಿ

ದ್ವಿತೀಯ ಮಹಾಧಿಕಾರವು

ಶ್ರೀ ದೇಶಭೂಷಣರ ಮಂಗಲಾಚರಣ:-

ರಾಗಾದಿಪರಭಾವವಿಲ್ಲದ ಮನದಿಂದ । ಯೋಗಿಗಳೆಲ್ಲರರ್ಚಿಸುವ ॥
ಶ್ರೀ ಗುರುವೃಷಭಜಿನೇಶನ ನುತಿಸುತ । ರಾಗದಿ ಪೇಳ್ವೆನೀಕೃತಿಯ ॥*॥

ಪರಮಸಮಾಧಿಯ ಯೋಗವಪೇಳುವ । ಪರಮಾತ್ಮನ ಬೆಳಕಿನಲಿ ॥
ಎರಡನೆಯಧಿಕಾರದ ಮಹಿಮೆಯನಾನು । ಬರೆವೆನು ಕನ್ನಡದಿಂದ ॥*॥

ಮಲ್ಲಿಜಿನೇಶನು ಫುಲ್ಲಶರನಗೆಲ್ದು । ಸಲ್ಲೀಲೆಯೊಳಿರುತಿಹನು ॥
ಉಲ್ಲಾಸದಿಂದ ನಾನವನಡಿಗೆರಗುತ । ನಿಲ್ಲದೆ ಸುಖವ ಪೊಂದುವೆನು ॥*॥

ಮುನಿವೃಂದಾರಕ ಪೂಜಿತನಾಗಿಹ । ಮುನಿಸೂವ್ರತ ಜನಪತಿಯ ॥
ಸನುಮತದಿಂದಲಿ ವರವಿತ್ತು ಸಲಹೆಂದು । ನುನವರಿಕೆಯೊಳು ಪ್ರಾರ್ಥಿಸುವೆ ॥*॥

ನಮಿತ ಸುರಾಸುರವಂದಿತಪಾದನ । ನಮಿಜಿನಪತಿಯನು ನಾನು ॥
ನಮಿಸುತಪೇಳುವೆ ಪರಮಾತ್ಮಕಲೆಯನು । ಸಮಭಾವನೆಯಿಂದ ಕೇಳಿ ॥*॥

ದೋಷವಿನಾಶನ ತ್ರಿಭುವನಖ್ಯಾತನ । ಶ್ರೀಶಯೋಗೀಂದ್ರಾರ್ಯನ ಶ್ರೀ ॥
ಭಾಸುರಚರಣಕೆ ದೇಶಭೂಷಣನಾನು । ಮಾಸದಮನದಿ ವಂದಿಪೆನು ॥*॥

ಶ್ರೀ ಬ್ರಹ್ಮದೇವರ ಉತ್ಥಾನಿಕೆ:-

ಮುಂದೆ ಸ್ಥಲಸಂಖ್ಯೆಯುಲ್ಲದ ಪ್ರಕ್ಷೇಪಕಗಳನ್ನು ಬಿಟ್ಟು ಎರಡುನೂರ ಹದಿನಾಲ್ಕು ಶ್ಲೋಕ ಪರಿಮಿತವಾದ ದೋಹಕಸೂತ್ರಗಳಿಂದ ಮೋಕ್ಷ, ಮೋಕ್ಷಫಲ, ಮೋಕ್ಷಮಾರ್ಗ ಪ್ರತಿಪಾದನ ಮುಖ್ಯತೆಯಿಂದ ದ್ವಿತೀಯ ಮಹಾಧಿಕಾರವನ್ನಾರಂಭಿಸುವಾಗ ಮೊದಲು ಹತ್ತು ದೋಹೆಗಳಲ್ಲಿ ಮೋಕ್ಷದ ಮುಖ್ಯತೆಯ ವ್ಯಾಖ್ಯಾನ ಮಾಡುವರು :—

ಸಿರಿಗುರುವೆನಗೆ ಮೋಕ್ಷವ ಮೋಕ್ಷಕಾರಣ । ವರಮೋಕ್ಷದ ಫಲಗಳನು ॥
ಪರಮಕೃಪೆಯೊಳೆನಗರುಹಿರಕ್ಷಿಸುವುದು । ಪರಮಾರ್ಥಸಾರವ ನೀನು ॥೧॥

ಉ :—ಮೋಕ್ಷ, ಮೋಕ್ಷಮಾರ್ಗ, ಮೊಕ್ಷಫಲಗಳನ್ನು ಕ್ರಮವಾಗಿ ಹೇಳುವರು:—
ಮೋಕ್ಷವ ಮೋಕ್ಷದ ಫಲವನು ಮೋಕ್ಷದ । ಸಾಕ್ಷಾತ್ತಾದ ಕಾರಣವ ॥
ಈಕ್ಷಿಸಿ ತಿಳಿಯೆಲೆ ಜಿನದೇವಪೇಳ್ದಂತೆ । ಸಾಕ್ಷಾತ್ತಾಗಿ ಪೇಳುವೆನು ॥೨॥

ಉ :—ಧರ್ಮ, ಅರ್ಥ, ಕಾಮ, ಮೋಕ್ಷಗಳ ಮಧ್ಯದಲ್ಲಿ ಸುಖಕ್ಕೆ ಕಾರಣವಾದುದು ಸರ್ವೋತ್ತಮವಾದುದು ಮೋಕ್ಷವೆಂದು ಹೇಳುವರು:—
ಧರ್ಮಾರ್ಥಕಾಮವೀ ಪುರುಷಾರ್ಥದಂತ್ಯದಿ । ನಿರ್ಮಲ ಮೋಕ್ಷವದಿಹುದು ॥
ಧರ್ಮಾದಿಗಳಿಗಿಂತ ಉತ್ತಮವಹುದದು । ನಿರ್ಮಲಸುಖಕೆ ಕಾರಣವು ॥೩॥

ಉ :—ಧರ್ಮಾದಿಗಳಿಗಿಂತ ಮೋಕ್ಷವು ಉತ್ತಮವಲ್ಲದಿದ್ದರೆ ಇವು ಮೂರನ್ನು ಬಿಟ್ಟು ಜಿನದೇವನು ಅದೇಕೆ ಮೋಕ್ಷಕ್ಕೆ ಹೋಗುತ್ತಿದ್ದನು ? ಎಂದು ಕೇಳುವರು:—
ಧರ್ಮಾದಿಗಳು ಮೂರು ಸುಖವೆಂದಾಗಿದ್ದರೆ । ನಿರ್ಮಲ ಜಿನನವನೇಕೆ ॥
ನರ್ಮದಿಂ ತೊರೆದು ಮೋಕ್ಷವಪೊಂದುತಿದ್ದನು । ನಿರ್ಮಮಬುದ್ಧಿಯಿಂ ನೋಡು ॥೪॥

ಉ :—ಸುಖದಾಯಕವಾದ ಮೋಕ್ಷವನ್ನು ದೃಷ್ಟಾಂತದಿಂದ ಹೇಳುವರು:—
ಉತ್ತಮ ಸುಖವನು ಕೊಡದಿದ್ದರೆ ಮೋಕ್ಷ । ಉತ್ತಮವಲ್ಲದಲಿಹುದ ॥
ಪತ್ತಿಬಂಧನ ಬದ್ಧವಾಗಿಹ ಪಶು ಕೂಡ । ಮತ್ತೆ ಬೇಡವು ಎನಬಹುದು ॥೫॥

ಉ :—ಮೋಕ್ಷದಲ್ಲಿ ಅಧಿಕ ಗುಣಸಮೂಹಗಳಿಲ್ಲದಿದ್ದರೆ, ಅದನ್ನು ಮೂರುಲೋಕವು ತನ್ನ ಮಸ್ತಕದಲ್ಲಿ ಧರಿಸುತ್ತಿದ್ದಿತು? ಎಂದು ಕೇಳುವರು:—
ಜಗಕಿಂತಲಧಿಕಗುಣಗಳಿಲ್ಲದಿದ್ದರೆ । ಜಗದಗ್ರದೊಳದನೇಕೆ ? ॥
ಜಗವು ಧರಿಸುತಿದ್ದಿತು ಭಾವಿಸಿಂತಿದ । ಅಗಣಿತಸುಖದ ಮೋಕ್ಷವನು ॥೬॥
ಅಧಿಕಗುಣಗಳ ಸಮೂಹವಿರ್ಪುದರಿಂದ । ಅದನು ಲೋಕವು ತನ್ನ ಶಿರದಿ ॥
ಮುದದಿಂದಲೇತಕೆ ಧರಿಸಿರ್ಪುದದನು । ಸದಮಲಮೋಕ್ಷವ ಪೇಳು ॥೬*೧॥

ಉ :—ಮೋಕ್ಷವು ಉತ್ತಮಸುಖವನ್ನು ಕೊಡದಿದ್ದರೆ, ಅದನ್ನೇಕೆ ನಿರಂತರವೂ ಸಿದ್ಧರು ಸೇವಿಸುತ್ತಿದ್ದರು ? ಎಂದು ಕೇಳುವರು:—
ಉತ್ತಮ ಸುಖವನು ಕೊಡದಿದ್ದ । ಮೋಕ್ಷವು ಉತ್ತಮವಾಗಲಶಕ್ಯ ॥
ಉತ್ತಮ ಸುಖವನು ಕೊಡುವುದರಿಂದ । ಉತ್ತಮಸಿದ್ಧರಲ್ಲಿಹರು ॥೭॥

ಉ :—ಮಹಾಪುರುಷರೆಲ್ಲ ಮೋಕ್ಷವನ್ನು ಧ್ಯಾನಿಸಬೇಕೆಂದು ಹೇಳುವರು:—
ಹರಿಹರಬ್ರಹ್ಮರು ವರಜಿನಮುನಿಗಳು । ನಿರುತವು ಧ್ಯಾನಿಪರದನು ॥
ಪರಮನಿರಂಜನ ಭಾವದೊಳವರು । ಸರಸಮೋಕ್ಷವ ಧ್ಯಾನಿಪರು ॥೮॥

ಉ :—ಭುವನತ್ರಯಗಳಲ್ಲಿ ಮೋಕ್ಷವನ್ನುಳಿದ ಬೇರಾವುದೂ ಪರಮಸುಖದ ಕಾರಣವಲ್ಲವೆಂದು ಹೇಳುವರು:—

ಮೂರು ಲೋಕದ ಜೀವರೆಲ್ಲರು ಮೋಕ್ಷವ । ವಿೂರಿದ ಸುಖದ ಕಾರಣವೆಂ ॥
ದಾರಾಧಿಪರೇಕೆ ನಿಯಮದಿ ಮೋಕ್ಷವ । ನಾರೈದು ಚಿಂತಿಸಿಂತಿದನು ॥೯॥*

ಉ:—ಮೋಕ್ಷವು ಅತೀಂದ್ರಿಯ ಸುಖದಾಯಕವೆಂದು ಅದನ್ನು ವರ್ಣಿಸುವರು:—
ಕರ್ಮಕಲಂಕ ವಿಮುಕ್ತ ಜೀವರಿಗೆ । ನಿರ್ಮಲ ಪರಮಾತ್ಮಲಾಭ ॥
ಸ್ವರ್ಮನದಿಂ ಸಾಧುಜನಗಳಾಲಾಭವ । ನಿರ್ಮಲ ಮೋಕ್ಷವೆನ್ನುವರು ॥೧೦॥

ಉ :—ಹೀಗೆ ಮೋಕ್ಷಾದಿ ತ್ರಿವಿಧದ ಮುಖ್ಯತೆಯಿರುವ ದ್ವಿತೀಯ ಮಹಾಧಿಕಾರದ ಹತ್ತು ದೋಹೆಗಳಲ್ಲಿ ಮೋಕ್ಷದ ಸ್ವರೂಪವನ್ನು ತೋರಿಸಿ ಮುಂದೆ ಮೋಕ್ಷದ ಫಲವು ಅನಂತ ಚತುಷ್ಟಯಗಳೆಂದು ಹೇಳುವರು:—
ಜ್ಞಾನದರ್ಶನ ಸುಖವೀರ್ಯಗಳಿವು ಮೋಕ್ಷ । ದಾನಂದ ಪದವಿಯೊಳಿಹುದು ॥
ಸಾನಂದದಿಂದನಂತದಕಾಲ ಪರಿಯಂತ । ಅನುಭವಿಪುದೆ ಮೋಕ್ಷಫಲವು ॥೧೧॥

ಉ :—ಹೀಗೆ ದ್ವಿತೀಯ ಮಹಾಧಿಕಾರದಲ್ಲಿ ಮೋಕ್ಷಫಲ ಕಥನರೂಪದ ಒಂದು ದೋಹೆಯನ್ನು ಹೇಳಿ ಮುಂದೆ ಹತ್ತೊಂಬತ್ತು ದೋಹೆಗಳಲ್ಲಿ ನಿಶ್ಚಯ—ವ್ಯವಹಾರ ಮೋಕ್ಷಮಾರ್ಗದ ವ್ಯಾಖ್ಯಾನಮಾಡುವರು:—
ಜೀವನೆ ದರ್ಶನಜ್ಞಾನ ಚಾರಿತ್ರವು । ತೀವಿದ ಮೋಕ್ಷಕಾರಣವೆಂ- ॥
ದಾವಾಗಲು ನಿಶ್ಚಯದಿಂದ ತಿಳಿಯೆಂದು । ದೇವನು ಪೇಳಿಹ ತಿಳಿಯೈ ॥೧೨॥

ಉ :—ನಿಶ್ಚಯ ರತ್ನತ್ರಯ ಪರಿಣತನಾದ ನಿಜಶುದ್ಧಾತ್ಮನೇ ಮೋಕ್ಷಮಾರ್ಗವೆಂದು ಹೇಳುವರು:—
ತನ್ನಿಂದ ತನ್ನನು ನೋಡುತ ತಿಳಿಯುತ । ತನ್ನೊಳಾಚರಣೆಯಲಿರುವ ॥
ಸನ್ನುತ ಜೀವನೆ ರತ್ನತ್ರಯಮಯ । ನುನ್ನತ ಮೋಕ್ಷಕಾರಣನು ॥೧೩॥

ಉ :—ಭೇದರತ್ನತ್ರಯಾತ್ಮಕವಾದ ವ್ಯವಹಾರ ಮೋಕ್ಷಮಾರ್ಗವನ್ನು ಹೇಳುವರು:—
ವ್ಯವಹಾರನಯದಿಂದ ರತ್ನತ್ರಯಗಳನು । ಸುವಿಶುದ್ಧದಿಂದಲಿ ತಿಳಿದು ॥
ಅವಧರಿಪುದೆ ಮೋಕ್ಷಮಾರ್ಗನಾಗಿಹುದೆಂದು । ಸುವಿವೇಕದಿಂದಲಿ ನೋಡು ॥೧೪॥

ಉ:—ಹೀಗೆ ಪೂರ್ವೋಕ್ತ ಹತ್ತೊಂಬತ್ತು ಸೂತ್ರ ಪ್ರಮಿತವಾದ ಮಹಾಸ್ಥಲ ಮಧ್ಯದಲ್ಲಿ ನಿಶ್ಚಯ ವ್ಯವಹಾರ ಮೋಕ್ಷಮಾರ್ಗದ ಪ್ರತಿಪಾದನ ರೂಪವಾದ

---

* ಶ್ರೀ ಮತ್ಕುಂದಕುಂದಾಚಾರ್ಯರು:—
ಅಇಸಯಮಾದಸಮುತ್ಥಂ ವಿಸಯಾತೀದಂ ಅಣೋವಮಮಣಂತಂ ।
ಅವ್ವುಚ್ಛಿಣ್ಣಂ ಚ ಸುಹಂ ಸುದ್ಧುವಓಗಪ್ಪಸಿದ್ಧಾಣಂ ॥*॥ ಎಂದು ಹೇಳಿದ್ದಾರೆ.
ಅತಿಶಯಮಾತ್ಮ ಸಮುತ್ಪನ್ನಸುಖವದು । ನುತವನುಪಮವದನಂತ ॥
ಸತತವು ವಿಷಯಗಳಿಲ್ಲದವ್ಯುಚ್ಛಿನ್ನ । ನುತಶುದ್ಧುಪಯೋಗಸಿದ್ಧ ॥*॥

ಮೂರು ಸೂತ್ರಗಳು ಮುಗಿದುವು. ಮುಂದೆ ಹದಿನಾಲ್ಕು ಸೂತ್ರಗಳಲ್ಲಿ ವ್ಯವಹಾರ ಮೋಕ್ಷಮಾರ್ಗವೆಂಬ ಪ್ರಥಮಾನಯುವ ಭೂತವಾದ ವ್ಯವಹಾರ ಸಮ್ಯಕ್ತ್ವದ ಮುಖ್ಯವೃತ್ತಿಯನ್ನು ಹೇಳುವರು:—

ಪದುಳದಿ ದ್ರವ್ಯಗಳಿರುವ ರೀತಿಯೊಳು । ಅದರ ಸ್ವಭಾವದಿ ತಿಳಿದು ॥
ಚದುರಿಂದ ಶ್ರದ್ಧಾನಮಾಡುವ ಜೀವನು । ಸದಮಲನಾತ್ಮಭಾವುಕನು ॥೧೫॥*

ಉ :—ಸಮ್ಯಕ್ತ್ವದ ಶ್ರದ್ಧಾನ ಕಾರಣದ ಆರು ದ್ರವ್ಯಗಳಲ್ಲಿ ಮೂರು ಲೋಕವಿರುವುದೆಂಬ ಮಾತನ್ನು ಯಥಾರ್ಥವೆಂದು ತಿಳಿ, ಎಂದು ಹೇಳುವರು:—

ಆರು ದ್ರವ್ಯನುರೆ ತಿಳಿಯೆಲೆ ಯೋಗಿಯೆ । ಮೂರು ಲೋಕದೊಳು ತುಂಬಿಹುವು ॥
ಸೇರಿತಾವಾದಿವಿನಾಶವರ್ಜಿತವೆಂದು । ಸಾರಿ ಪೇಳಿದರು ಜ್ಞಾನಿಗಳು ॥೧೬॥

ಉ: —ಆರು ದ್ರವ್ಯಗಳ ಹೆಸರನ್ನು ಹೇಳುವರು:—

ಜೀವಸಚೇತನ ಉಳಿದೈದು ದ್ರವ್ಯವ । ಭಾವಿಸಚೇತನನೆಂದು ॥
ತೀವಿದ ಪುದ್ಗಲ ಧರ್ಮಾಧರ್ಮಗಳನು । ಭಾವಿಸಾಕಾಶಕಾಲಗಳ ॥೧೭॥

ಉ :—ಮುಂದೆ ನಾಲ್ಕು ಸೂತ್ರಗಳಲ್ಲಿ ಪ್ರತ್ಯೇಕ ದ್ರವ್ಯದ ಲಕ್ಷಣವನ್ನು ಕ್ರಮವಾಗಿ ಹೇಳುವರು:—

ಮೂರ್ತಿವಿಹೀನನು ಜ್ಞಾನಸಮಾನನು । ವರ್ತಿಪ ಪರಮಾನಂದದಲಿ ॥
ವರ್ತಿಪ ನಿತ್ಯನಿರಂಜನ ಜೀವನೆಂ । ದರ್ತಿಯಿಂ ನಿಯಮದಿ ತಿಳಿಯೈ ॥೧೮॥

ಉ :—ಪುನಃ ಅದನ್ನೇ ಹೇಳುವರು:—

ಮೂರ್ತವಾಗಿಹ ಪುದ್ಗಲದ್ರವ್ಯವು ತಾನು । ವರ್ತಿಪುದಾರು ಭೇದದಲಿ ॥
ಮೂರ್ತಿಯಿಲ್ಲದ ಧರ್ಮಾಧರ್ಮಗಳವರಂತೆ । ವರ್ತಿಸುವುವುಸ್ಥಿತಿಗತಿಗೆ ॥೧೯॥

ಉ :—ಪುನಃ ಅದನ್ನೇ ಹೇಳುವರು :—

ದ್ರವ್ಯವ ಸಕಲವನುದರದೊಳಿರಿಸಿಕೊಂ । ಡವ್ಯಯನಿಯಮದೊಳಿರುವ ॥
ಸುವ್ಯಕ್ತನಭನೆಂಬ ದ್ರವ್ಯವೆಂದರಿಯೆಂದು । ಸುವ್ಯಕ್ತದಿ ಪೇಳ್ದ ಜಿನನು ॥೨೦॥

ಉ :—ಪುನಃ ಅದನ್ನೇ ಹೇಳುವರು:—

ವರ್ತನ ಲಕ್ಷಣಯುತವಾದ ದ್ರವ್ಯವು । ವರ್ತಿಪುದದು ಕಾಲವೆಂದು ॥
ರತ್ನದರಾಶಿಯು ತೆರದಿಂದ ಭಿನ್ನದಿ । ವರ್ತನೆಯಣುಸಂಜ್ಞೆಯಲಿ ॥೨೧॥

ಉ :—ಜೀವ, ಪುದ್ಗಲ, ಕಾಲಗಳು ಅನೇಕ, ಧರ್ಮ, ಅಧರ್ಮ, ಆಕಾಶದ್ರವ್ಯಗಳು ಏಕವೆಂದು ಹೇಳುವರು:—

---

* ಎಂಟು ಶಂಕೆಗಳನಾಯತನ ಸೇವೆಗಳಾರು । ಎಂಟು ಮದವು ಮೂಢತ್ರಯವು ।
ಅಂಟದ ದೃಗ್ದೋಷವಿಲ್ಲದ ಸಮ್ಯಕ್ತ್ವ । ವಂಟಿನಿಂ ದ್ರವ್ಯವ ತಿಳಿಯೈ ॥*॥
ಪತ್ತಿ ಚಿಂತಾಮಣಿರತ್ನ ಹಸ್ತದೊಳಿರೆ । ಹತ್ತಿರ ಕಾಮಧೇನುವಿರೆ ॥
ಮತ್ತೆ ಧನವು ಸುರದ್ರುಮವಿರೆ ಮನೆಯೊಳು । ಮತ್ತೊಬ್ಬರನು ಬೇಡುವರೆ ? ॥*॥

ಜೀವ, ಪುದ್ಗಲ ಕಾಲದ್ರವ್ಯವು ಖಂಡದಿ । ಶೀವಿಲೋಕದೊಳಿರುತಿಹುವು ॥
ಭಾವಿಸು ಧರ್ಮಾಧರ್ಮವಾಕಾಶವ । ದ್ರವ್ಯವಖಂಡಗಳೆಂದು ॥೨೨॥

ಉ :—ಜೀವಾಜೀವಗಳು ಸಕ್ರಿಯ, ಉಳಿದವು ಅಕ್ರಿಯವೆಂದು ಹೇಳುವರು :—
ಗಮನಾಗಮನವಿಹೀನವಾಗಿರುವುವು । ಧರ್ಮಾದಿ ನಾಲ್ಕು ನಿಷ್ಕ್ರಿಯವು ॥
ಗಮನಾಗಮನದ ಕ್ರಿಯೆಯುಳ್ಳವೆಂದು । ಗಮನಿಸು ಜೀವಪುದ್ಗಲವ ॥೨೩॥

ಉ :—ಅಪ್ರದೇಶಿಯಾದ ಕಾಲದ್ರವ್ಯವನ್ನು ಬಿಟ್ಟು ಸಪ್ರದೇಶಿಗಳಾದ ಪಂಚಾಸ್ತಿಕಾಯವನ್ನು ಹೇಳುವರು:—
ಜೀವನು ಧರ್ಮವಧರ್ಮಾಸ್ತಿಕಾಯುವ । ಭಾವಿಸಿ ತಿಳಿದು ನೋಡಿದರೆ ॥
ಶೀವಿದಸಂಖ್ಯಾತಸಪ್ರದೇಶಿಕವಾಗಿ । ಭಾವದಿ ಭೇದಿಸಿ ತಿಳಿಯೈ ॥೨೪॥
ಗಗನವನಂತಪ್ರದೇಶಿಯಾಗಿರುವುದು । ಅಗಣಿತ ಲೋಕಾಲೋಕದಲಿ ॥
ಬಗೆಯಲು ಪುದ್ಗಲ ಬಹಳ ಪ್ರದೇಶಿಯೆಂ । ದಗಣಿತವುತಿಯಿಂದ ತಿಳಿಯೈ ॥೨೪*೧॥
ಪುದ್ಗಲಪರಮಾಣುವೇಕ ಪ್ರದೇಶಿಯು । ಪುದ್ಗಲಸ್ಕಂಧದ ಪರಿಯು ॥
ಪುದ್ಗಲವೇಕವನೇಕವನಂತವು । ಪುದ್ಗಲವದು ಸಪ್ರದೇಶಿ ॥೨೪*೨॥

ಉ :—ವ್ಯವಹಾರನಯದಿಂದ ಇವೆಲ್ಲವೂ ಏಕಕ್ಷೇತ್ರಾವಗಾಹವೆಂಬಂತೆ ಕಂಡುಬಂದರೂ ನಿಶ್ಚಯನಯದಿಂದ ನೋಡಿದರೆ, ಒಂದೊಂದು ದ್ರವ್ಯವೂ ಬೇರೆ ಬೇರೆಯಾಗಿ ಸ್ವಕ್ಷೇತ್ರಾವಗಾಹದಿಂದಿರುವುವಲ್ಲದೆ ಒಂದು ಮತ್ತೊಂದರ ಸ್ವರೂಪವಾಗುವುದಿಲ್ಲವೆಂದು ಹೇಳುವರು:—
ಲೋಕಾಕಾಶದೊಳೇಕಪ್ರದೇಶದಿ । ಏಕವಾಗಿರ್ಪದ್ರವ್ಯಗಳ ॥
ಏಕವೆಂದರಿಯಬೇಡಲೆ ಜೀವನೋಡಲ- । ನೇಕಪ್ರದೇಶಿಯಾಗಿಹುವು ॥೨೫॥
ಲೋಕಾಲೋಕದೊಳಿರುವ ದ್ರವ್ಯಗಳು । ಏಕಪ್ರದೇಶಿಯಾಗಿಹುವು ॥
ತೂಕದಿ ನಿಶ್ಚಯನಯದಿಂದ ನೋಡಲು । ತಾಕಿಲ್ಲದೆ ತಮ್ಮೊಳಿಹವು ॥೨೫*೧॥

ಉ :—ಜೀವನಿಗೆ ಉಳಿದ ಐದು ದ್ರವ್ಯಗಳು ವ್ಯವಹಾರನಯದಿಂದ ಉಪಕಾರವನ್ನೂ ನಿಶ್ಚಯನಯದಿಂದ ಅಪಕಾರವನ್ನೂ ಮಾಡುತ್ತವೆಂದು ಹೇಳುವರು:—
ಜೀವನು ತನ್ನಯ ಕಾರ್ಯವಮಾಡಲು । ಶೀವಿದಜೀವಾದಿಗಳು ॥
ಆವಾಗಲುಪಕಾರ ಅಪಕಾರಮಾಡುತ । ಸಾವು ಹುಟ್ಟುಗಳ ನೀಡುವುವು ॥೨೬॥

ಉ :—ಎಂದಿಗೂ ಪರದ್ರವ್ಯಸಂಬಂಧದಿಂದ ಸುಖವಿಲ್ಲವೆಂದರಿತು ಜೀವನೇ ನೀನು ಶುದ್ಧಾತ್ಮದ್ರವ್ಯಪ್ರಾಪ್ತಿರೂಪವಾದ ಮೋಕ್ಷಮಾರ್ಗದಲ್ಲಿರು ಎಂದು ಹೇಳುತ್ತಾರೆ:—

ದುಃಖದ ಕಾರಣ ಉಳಿದ ದ್ರವ್ಯಗಳೆಂದು । ಮೋಕ್ಷದ ಕಾರಣವನ್ನು ॥
ಈಕ್ಷಿಸಿ ಭಾವಿಸಿ ನಿನ್ನೊಳು ಪಡೆವುದು । ಅಕ್ಷಯ ಸುಖಪ್ರಾಪ್ತಿಯನ್ನು ॥೨೭॥

ಉ :—ಎಲೈ ಪ್ರಭಾಕರಭಟ್ಟನೆ! ಇದುವರೆಗೆ ಹೇಳಿದ್ದೆಲ್ಲ ವ್ಯವಹಾರರತ್ನತ್ರಯವು, ಮುಂದೆ ನಿಶ್ಚಯ ರತ್ನತ್ರಯವನ್ನು ಹೇಳುವೆವೆನ್ನುವರು:—

ವ್ಯವಹಾರನಯದ ರತ್ನತ್ರಯಗಳನೆಲ್ಲ । ಸುವಿಸ್ತರದಿಂದಲಿ ಪೇಳ್ದೆ ॥
ಪ್ರವಿಮಲ ಪರಮೇಷ್ಠಿ ಪದವನುಪೊಂದುವ । ಪ್ರವರ ರತ್ನಗಳನು ಕೇಳು ॥೨೮॥

ಉ :—ಇಲ್ಲಿಗೆ ಹತ್ತೊಂಬತ್ತು ದೋಹೆಗಳ ಸ್ಥಲದಲ್ಲಿ ನಿಶ್ಚಯ ವ್ಯವಹಾರ ಮೋಕ್ಷ ಮಾರ್ಗ ಪ್ರತಿಪಾದಕವಾದ ಸೂತ್ರತ್ರಯದ ವ್ಯಾಖ್ಯಾನವಾದ ಬಳಿಕ ಹದಿನಾಲ್ಕು ದೋಹೆಗಳ ಸ್ಥಲದಲ್ಲಿ ಷಡ್ದ್ರವ್ಯಧ್ಯೇಯಭೂತವಾದ ಸಮ್ಯಕ್ತ್ವದ ವ್ಯಾಖ್ಯಾನ ವನ್ನು ಮುಗಿಸಿ ಮುಂದೆ ಸಂಶಯ ವಿಮೋಹ ಅನಧ್ಯವಸಾಯಗಳಿಲ್ಲದ ಸಮ್ಯಗ್ಜ್ಞಾನದ ಸ್ವರೂಪವನ್ನು ಪ್ರಕಟಿಸುವರು:—

ದ್ರವ್ಯವನೆಲ್ಲವನದರ ಸ್ವಭಾವದಿ । ಸುವ್ಯಕ್ತವಾಗಿ ತಿಳಿವುದು ॥
ಜೀವಸ್ವಭಾವನ ಜ್ಞಾನದಮಯವೆಂದು । ಭಾವಿಸು ಸಂಶಯವಳಿದು ॥೨೯॥

ಉ :—ಸ್ವಪರದ್ರವ್ಯಗಳ ಸ್ವರೂಪವನ್ನು ತಿಳಿದು ರಾಗಾದಿರೂಪ ಪರದ್ರವ್ಯದ ಸಂಕಲ್ಪ ವಿಕಲ್ಪತ್ಯಾಗದಿಂದ ನಿಜಸ್ವರೂಪದ ನಿಶ್ಚಲತೆಯು ಸಾಧುಗಳಿಗೆ ಸಮ್ಯಕ್ಚಾರಿತ್ರ ವೆಂದು ಹೇಳುವರು:—

ನಿಜಶುದ್ಧಭಾವದ ಜ್ಞಾನಾಚರಣೆಯಿಂ । ತ್ಯಜಿಸುತ ಪರಭಾವಗಳನು ॥
ಅಜರಾಮರ ಪದವಡೆವುದೆ ಚಾರಿತ್ರ । ಭಜಿಸಿಂತಿದ ನೀನು ಯೋಗಿ ॥೩೦॥

ಉ :—ಮೋಕ್ಷ, ಮೋಕ್ಷಮಾರ್ಗ, ಮೋಕ್ಷಫಲ ಪ್ರತಿಪಾದಕವಾದ ದ್ವಿತೀಯ ಮಹಾಧಿಕಾರ ಮಧ್ಯದಲ್ಲಿ ನಿಶ್ಚಯ ವ್ಯವಹಾರ ಮೋಕ್ಷಮಾರ್ಗ ಮುಖ್ಯತ್ವದ ಮೂರು, ಷಡ್ದ್ರವ್ಯ ಶ್ರದ್ಧಾನಲಕ್ಷಣ ವ್ಯವಹಾರ ಸಮ್ಯಕ್ತ್ವಮುಖ್ಯತ್ವದ, ಹದಿನಾಲ್ಕು, ಸಮ್ಯಗ್ಜ್ಞಾನ ಚಾರಿತ್ರ ಮುಖ್ಯತ್ವದ ಎರಡು ಕೂಡಿ ಹತ್ತೊಂಬತ್ತು ಸೂತ್ರಗಳ ವ್ಯಾಖ್ಯಾನವು ಇಲ್ಲಿಗೆ ಮುಗಿಯಿತು.

ಮುಂದೆ ಅಭೇದ ರತ್ನತ್ರಯ ವ್ಯಾಖ್ಯಾನ ಮುಖ್ಯತ್ವದ ಎಂಟು ಸೂತ್ರ ಗಳನ್ನು ಹೇಳುವಾಗ ಮೊದಲು ರತ್ನತ್ರಯಾರಾಧಕರಾದ ಭವ್ಯಜೀವರ ಲಕ್ಷಣವನ್ನು ಹೇಳುತ್ತಾರೆ:—

ರತ್ನತ್ರಯವನಾರಾಧಿಪಜೀವನು । ಯತ್ನದಿ ತನ್ನೊಳುಸಿಂದು ॥
ಆತ್ಮನೊಂದಲ್ಲದೆ ಬೇರಾವುದಿಲ್ಲೆಂದು । ಅತ್ಯಂತದಲಿ ಧ್ಯಾನಿಪನು ॥೩೧॥

ಉ :—ಜ್ಞಾನಿಯು ನಿರ್ಮಲ ರತ್ನತ್ರಯವೇ ಆತ್ಮಸ್ವರೂಪವೆಂದು ಒಪ್ಪಿರುವನು. ಅವನೇ ಮೋಕ್ಷಪದದ ಆರಾಧಕನು, ಅವನೇ ನಿಜಾತ್ಮನ ಆರಾಧಕನು ಎಂದು ಹೇಳುವರು:—

ರಾಗಾದಿದೋಷಗಳಿಲ್ಲದೆ ನಿರ್ಮಲ । ವಾಗಿಹ ರತ್ನತ್ರಯದ ॥
ಯೋಗದಿ ಶಿವಪದದಾರಾಧನೆಯಿಂದ । ತ್ಯಾಗಿಯೆ ಮೋಕ್ಷವ ಪಡೆವ ॥೩೨॥

ಉ:—ರಾಗಾದಿ ದೋಷರಹಿತ, ಅನಂತಗುಣಗೂಪನಾದ ಶುದ್ಧಾತ್ಮನನ್ನಾರಾಧಿಸುವವನೇ ನಿಶ್ಚಯದಿಂದ ಮೋಕ್ಷವನ್ನು ಪಡೆಯುತ್ತಾನೆಂದು ಹೇಳುವರು:—

ಅಗಣಿತಗುಣನಿಧಿಯಾದ ನಿರ್ಮಲನ । ಪ್ರಗುಣಾತ್ಮನ ಚಿನ್ಮಯನ ॥
ಜಗೆಯಲಿ ಭಾವಿಸಿನೋಡು ನಿರಂತರ । ಸುಗುಣ ನಿರ್ವಾಣವ ಪಡೆವೆ ॥೩೩॥

ಉ:—ಸಾಮಾನ್ಯ ಗ್ರಾಹಕವೂ, ನಿರ್ವಿಕಲ್ಪಸತ್ತಾವಲೋಕನರೂಪವೂ ಆದ ದರ್ಶನವನ್ನು ಹೇಳುವರು:—

ಸಕಲವಸ್ತುಗಳನು ಭೇದವರ್ಜಿತವಾಗಿ । ಪ್ರಕಟದಿ ಸಾಮಾನ್ಯದಿಂದ ॥
ಅಕಲಂಕವಾಗಿ ನಿರೀಕ್ಷಿಸಿನೋಳ್ಪುದು । ಸಕಲದರ್ಶನವೆಂದು ತಿಳಿಯೈ ॥೩೪॥

ಉ:—ಛದ್ಮಸ್ಥರಿಗೆ ಮೊದಲು ದರ್ಶನವೂ ಆಮೇಲೆ ಜ್ಞಾನವೂ, ಕೇವಲಿಗೆ ದರ್ಶನಜ್ಞಾನಗಳೆರಡು ಒಟ್ಟಿಗೆಯೂ ಆಗುವುವೆಂದು ಹೇಳುವರು:—

ಜೀವಗೆ ವಿಜ್ಞಾನವದು ನಿಶ್ಚಯದಿಂದ । ತೀವಿದ ದರ್ಶನದಿಂದ ॥
ಆವಾಗಲು ಛದ್ಮಸ್ಥರಿಗಹುದದು । ಕೇವಲಿಗವು ಕೂಡಹುದು ॥೩೫॥

ಉ:—ಪರಮಧ್ಯಾನಾರೂಢನಾದ ಜ್ಞಾನಿಯು ಸಮಭಾವದಿಂದ ಸುಖದುಃಖಗಳನ್ನು ಸಹಿಸಿ ಅಭೇದನಯದಿಂದ ನಿರ್ಜರೆಗೆ ಕಾರಣನಾಗುವನೆಂದು ಹೇಳುವರು:—

ಸಮಭಾವದಿಂ ಸುಖದುಃಖವ ಸಹಿಸುತ್ತ । ಅಮಲಾತ್ಮನನೊಳೊಡವೆರೆಯೆ ॥
ಸಮದಿಂದ ಸಂಗವಿಹೀನದೊಳಾತ್ಮನ । ಸಮರಸಭಾವವ ಪಡೆವ ॥೩೬॥

ಉ:—ಸುಖದಲ್ಲಿ ಹರ್ಷ, ದುಃಖದಲ್ಲಿ ವಿಷಾದಗಳಿಲ್ಲದೆ ಸಮಭಾವದಿಂದಿರುವ ಸಾಧುವು ಸಂವರೆಹೊಂದುವನೆಂದು ಹೇಳುವರು:—

ಪಾಪಪುಣ್ಯಗಳನು ಸಮಭಾವದಿಂದಲಿ । ಲೋಪಿಸಿ ಪರಮಸಂವರದ ॥
ವ್ಯಾಪನೆಯಿಂದ ವಿಭಾವಗಳಳಿದವ । ಪಾಪವೆಲ್ಲವ ಕಳೆಯುವನು ॥೩೭॥

ಉ:—ರಾಗಾದಿ ಪರಿಣಾಮಗಳಲ್ಲಿಲ್ಲದಿರುವಷ್ಟು ಕಾಲ, ಶುದ್ಧಾತ್ಮಸ್ವರೂಪದಲ್ಲಿ ತನ್ಮಯನಾಗಿರುವಷ್ಟು ಕಾಲ, ಸಂವರ ನಿರ್ಜರೆಗಳುಂಟೆಂದು ಹೇಳುವರು:—

ಸಕಲವಿಕಲ್ಪವಿರಹಿತದ ಮನದಿಂದ । ಸಕಲಾತ್ಮನೊಳಗೆ ತಾನಿರಲು ॥
ಪ್ರಕಟದಿ ಸಂವರೆ ನಿರ್ಜರೆಯುಹುದರಿಂ- । ದಕಲಂಕ ಸುಖವದ ಪಡೆಯೈ ॥೩೮॥

ಉ:—ಹೀಗೆ ಮೋಕ್ಷ, ಮೋಕ್ಷಮಾರ್ಗ, ಮೋಕ್ಷದ ಫಲಗಳನ್ನು ಹೇಳುವ ಎರಡನೆ ಮಹಾಧಿಕಾರದಲ್ಲಿ ಎಂಟು ದೋಹಾಸೂತ್ರಗಳಿಂದ ಅಭೇದ ರತ್ನತ್ರಯದ ವ್ಯಾಖ್ಯಾನದ ಮುಖ್ಯತೆಯ ಅಂತರಸ್ಥಲವು ಮುಗಿಯಿತು. ಮುಂದೆ ಹದಿನಾಲ್ಕು ದೋಹೆಗಳಲ್ಲಿ ಪರಮೋಪಶಮಭಾವದ ಮುಖ್ಯತೆಯ ವ್ಯಾಖ್ಯಾನ ಮಾಡುವರು:—

ಪೂರ್ವೋಪಾರ್ಜಿತ ಕರ್ಮವ ಕಳೆಯುತ । ಸರ್ವನವೀನವ ತಡೆದು ॥
ಸರ್ವಪರಿಗ್ರಹಗಳನೆಲ್ಲ ಬಿಡುತಲಿ । ಸರ್ವೋಪಶಮವನು ಪಡೆಯೈ ॥೩೯॥

ಉ :—ಸಮಭಾವದಲ್ಲಿರುವವನಿಗೆ ನಿಶ್ಚಯದಿಂದ ರತ್ನತ್ರಯಗಳ ಪ್ರಾಪ್ತಿಯೆಂದು ಹೇಳುವರು:—

ಜ್ಞಾನದರ್ಶನ ಚಾರಿತ್ರಗಳಿವು ಮೂರ । ಸಾನಂದ ಸಮತೆಯೊಳ್ಕೂಡಿ ।
ಜಿನವರ ಪೇಳ್ದಂತೆ ಭಾವಿಸದಿದ್ದರೆ । ಜ್ಞಾನಾದಿ ರತ್ನಗಳಿಹುವೆ ॥೪೦॥

ಉ :—ಜ್ಞಾನಿಯು ಶಾಂತಭಾವವನ್ನು ಧರಿಸಿದಾಗ ಸಂಯಮಿಯಾಗುವನು. ಕಷಾಯ ವಶನಾದಾಗ ಅಸಂಯಮಿಯಾಗುವನು, ಎಂದು ಹೇಳುತ್ತಾರೆ:—

ಉಪಶಮಯುತನಾಗಿರುವಾಗ ಯೋಗಿಯು । ತಪದಿಂದ ಸಂಯಮಿಯಹನು ॥
ತಪಿಸದೆ ವಿಷಯ ಕಷಾಯದೊಳಿರುವಾಗ । ಉಪಶಮವಳಿದಸಂಯತನು ॥೪೧॥

ಉ :—ಕಷಾಯಗಳನ್ನುಂಟುಮಾಡುವ ಮೋಹಾದಿಗಳ ತ್ಯಾಗವನ್ನು ಹೇಳುವರು:-

ಸಮಭಾವವನುರೆ ಪಡೆಯಬೇಕಾದರೆ । ಮಮತೆಯ ಮೋಹವನುಳಿದು ॥
ಕ್ರಮದಿ ಕಷಾಯಗಳೆಲ್ಲವ ತೊಳೆಯುತ । ಸಮಬೋಧವ ಪೊಂದುವುದು ॥೪೨॥

ಉ :—ಹೇಯೋಪಾದೇಯ ತತ್ವಗಳನ್ನು ತಿಳಿದು, ಪರಮೋಪಶಮವನ್ನು ಪಡೆದು ಜ್ಞಾನಿಗಳು ನಿಜಶುದ್ಧಾತ್ಮನಲ್ಲಿರುತ್ತಾನೆಂದು ಹೇಳುತ್ತಾರೆ:—

ತತ್ವಾತತ್ವಗಳನು ಮನದಿಂದಲಿ । ನಿತ್ಯವು ಸಮಭಾವದಿಂದ ।
ವರ್ತಿಸಿ ತಿಳಿದುಪಶಮದೊಳಗಿಹಜೀವ । ನುತ್ತಮ ಸುಖವಪೊಂದುವನು ॥೪೩॥

ಉ :—ನಿಂದೆಯ ಮೂಲಕವಾಗಿ ಸ್ತುತಿಸುವ ರೂಪದಿಂದ ಸಂಯಮಿಯ ಶಾಂತ ಭಾವದ ಕರ್ತನೆಂದು ಹೇಳುವರು:—

ರಾಗದ್ವೇಷವನುರೆ ತ್ಯಜಿಸುವ ಯೋಗಿಗೆ । ರಾಗಾದಿ ದೋಷಗಳೆರಡು ॥
ಬೇಗದಿ ಬಂಧವಳಿವುದೊಂದು ಜಗವನು । ತೂಗುವುದೊಂದಾಗುವುದು ॥೪೪॥
ಇಂತಿವೆರಡು ದೋಷಗಳಿಂದ ಯೋಗಿಯು । ಸಂತಸದೊಳು ಸುಖವಡೆವ ॥
ಶಾಂತನು ಪರಮ ನಿಭ್ರಾಂತನೆಂದೆನ್ನುತ । ಸಂತತ ಸುಖಿಪುದು ಯೋಗಿ ॥೪೪*೧॥
ನಿಂದಾಸ್ತುತಿರೂಪವಾಗಿಹ ಕಾವ್ಯವು । ದಂದುಗಹರಿಸುವುದೆಂದು ॥
ಮಂದಮತಿಯ ಜನರಾತ್ಮಪ್ರಕಾಶಕೆ । ವಂದ್ಯನಾಗಿಹಗುರು ಪೇಳ್ದ ॥೪೪*೨॥

ಉ :—ಮುಂದೆ ಅದನ್ನೇ ಹೇಳುವರು:—

ಸಮಭಾವವ ಪೊಂದುವ ತಪೋಧನನಿಗೆ । ನಮಿಪುದು ಬೇರೊಂದು ದೋಷ ॥
ಸಮನಿಸಿ ಪರರಿಗೆಸಿಕ್ಕುವ ತನಗೆ । ನಮಿಸುವರೆಲ್ಲ ಶತ್ರುಗಳು ॥೪೫॥
ಮತ್ತೊಂದು ದೋಷವ ಹೊಂದಿಹ ಯೋಗಿಯು । ಪತ್ತಿದ ಸಮಭಾವದಿಂದ ॥
ಶತ್ರುಗಳೆಲ್ಲರು ಮಿತ್ರರಾಗುತ ತಾವು । ಹತ್ತಿರದೊಳಗಿರುತಿಹರು ॥೪೫*೧॥

ಉ :—ಪುನಃ ಅದನ್ನೇ ಹೇಳುವರು:—

ಸಮಭಾವದಿಂದಿಹ ಯೋಗಿಗೆ ಮತ್ತೊಂದು । ಸಮನಿಪದೋಷವ ಕೇಳು ॥
ಮಮತೆಯು ದೇಹಾದಿಗಳೆಲ್ಲವಳಿದು । ಗಮಿಪನು ಲೋಕಶಿಖರಕೆ ॥೪೬॥

ಮತ್ತೊಂದು ದೋಷವ ಹೊಂದುತ ಯೋಗಿಯು । ಅತ್ಯಂತ ಸಮಭಾವದಿಂದ ॥
ಪತ್ತಿದ ದೇಹವು ಕೆಟ್ಟುಪೋಗುತಲವ । ನತ್ಯಂತ ಮೋಕ್ಷವ ಪಡೆವ ॥೪೬*೧॥

ಉ :—ಸ್ಥಲಸಂಖ್ಯೆಯಲ್ಲದ ಪ್ರಕ್ಷೇಪಕವನ್ನು ಹೇಳುವರು:—

ಸಕಲಜೀವರುನಿಶಿಯೊಳಗೆ ನಿದ್ರಿಸುವಾಗ । ಅಕಲಂಕಯೋಗಿಯಚ್ಚರದಿ ॥
ಸಕಲಜೀವರುಗಳೆಚ್ಚರದಿಂದಲಿರ್ಪಾಗ । ಪ್ರಕಟಯೋಗದಿ ನಿದ್ರಿಪನು ॥ಪ್ರಕ್ಷೇ ೪೬*೧॥

ಉ :—ಪರಮಸಮರಸೀ ಭಾವರೂಪವಾದ ಸಮಭಾವದಿಂದ ಯೋಗಿಯು ಬಹಿರ್ವಿಷಯಗಳಿಂದ ಮುಕ್ತನಾಗಿ ಶರೀರಾದಿಗಳಲ್ಲಿ ರಾಗವನ್ನು ಬಿಡುತ್ತಾನೆಂದು ಹೇಳುವರು:—

ನಿಜಪರಭೇದವ ತಿಳಿಯುವ ಜ್ಞಾನಿಯು । ಭಜಿಪನು ಪರವಸ್ತುಗಳನು ॥
ನಿಜಜ್ಞಾನಮಯದಿಂದ ನಿರ್ವಾಣಪದವನು । ಭಜಿಸುತಲಿಹನನವರತ ॥೪೭॥

ಉ :—ಜ್ಞಾನಿಗಳು ಸಮಭಾವದಿಂದಿರುತ್ತ, ಯಾವುದರಲ್ಲೂ ತಲ್ಲೀನರಾಗದೆ, ಯಾರನ್ನೂ ಬೀಳಿಸದೆ, ಪ್ರೇರೇಪಿಸದೆ, ಸ್ತುತಿಸದೆ, ನಿಂದಿಸದೆ ತಮ್ಮಲ್ಲೇ ಇರುತ್ತಾರೆಂದು ಹೇಳುವರು:—

ಜ್ಞಾನಿಯು ಶಿಷ್ಯಾಚರಣೆಯೊಳಿಹನಲ್ಲ । ಜ್ಞಾನಿಯು ಗುರುವುತಾನಲ್ಲ ॥
ಜ್ಞಾನಿಯು ಸ್ತುತಿಸನು ನಿಂದಿಸಪರರನು । ಸಾನಂದ ಭಾವದೊಳಿಹನು ॥೪೮॥

ಉ :—ಬಾಹ್ಯಾಭ್ಯಂತರ ಪರಿಗ್ರಹವನ್ನಾಶಿಸದೆ, ಪಂಚೇಂದ್ರಿಯ ವಿಷಯಗಳ ಭೋಗ ಕಾಂಕ್ಷೆಯಿಲ್ಲದೆ, ದೇಹಮೋಹವನ್ನುಳಿದು ಅವ್ರತಾದಿ ಸಕಲ ದೋಷವನ್ನುಳಿದು, ಸಂಕಲ್ಪ ವಿಕಲ್ಪರಹಿತನಾಗಿ, ನಿಜಶುದ್ಧಾತ್ಮಧ್ಯಾನದಿಂದ ತನ್ನನ್ನು ತಿಳಿದು, ರಾಗದ್ವೇಷವರ್ಜಿತನಾಗಿರುತ್ತಾನೆಂಬ ನಾಲ್ಕು ಸೂತ್ರಗಳನ್ನು ಹೇಳುವರು:—

ಬಾಹ್ಯವಭ್ಯಂತರ ಪರಿಗ್ರಹವಿಲ್ಲದೆ । ಗ್ರಾಹ್ಯದೊಳಾತ್ಮನ ಪಿಡಿದು ।
ಊಹಿಸಿ ತಿಳಿವನು ಪರಮಚಿದಾತ್ಮನ । ರೂಹನೆಲ್ಲವನು ತನ್ನೊಳಗೆ ॥೪೯॥

ಉ :—ಅದನ್ನೇ ಹೇಳುವರು —

ಪರಮಮುನಿಯು ತಾನು ಪರಿಪರಿವಿಷಯದ । ಸುರುಚಿರ ರಾಗದ್ವೇಷವನು ॥
ನಿರುತವು ದೊರೆಯುತಲಾತ್ಮಸ್ವಭಾವದ । ವರವಿಜ್ಞಾನದೊಳಿಹನು ॥೫೦॥

ಉ :—ಅದನ್ನೇ ಹೇಳುವರು:—

ಪರಮಮುನಿಯು ತಾನು ಸುರಚಿರದೇಹದ । ಪರಿಪರಿ ರಾಗದ್ವೇಷವನು ॥
ನಿರುತವು ತೊರೆಯುತಲಾತ್ಮಸ್ವಭಾವದ । ವರವಿಜ್ಞಾನದೊಳಿಹನು ॥೫೧॥

ಉ :—ಪುನಃ ಅದನ್ನೇ ಹೇಳುವರು:—

ಪರಮಮುನಿಯು ತಾನು ವೃತ್ತಿ ಪ್ರವೃತ್ತಿಯ । ಪರಿಪರಿ ರಾಗದ್ವೇಷವನು ॥
ನಿರುತವು ತೊರೆಯುತಲಾತ್ಮಸ್ವಭಾವದ । ವರವಿಜ್ಞಾನದೊಳಿಹನು ॥೫೨॥

ಉ :—ಹೀಗೆ ಮೋಕ್ಷ, ಮೋಕ್ಷಫಲ, ಮೋಕ್ಷಮಾರ್ಗ ಪ್ರತಿಪಾದಕವಾದ ಮಹಾಧಿಕಾರ ಮಧ್ಯದಲ್ಲಿ ಪರಮೋಪಶಮಭಾವ ವ್ಯಾಖ್ಯಾನ ಲಕ್ಷಣದ ೧೪ ಸೂತ್ರಗಳ ಸ್ಥಲವನ್ನು ಮುಗಿಸಿ ಮುಂದೆ ನಿಶ್ಚಯನಯದಿಂದ ಪುಣ್ಯ ಪಾಪಗಳೆರಡೂ ಸಮಾನವೆಂಬ ಉಪಲಕ್ಷಣದಿಂದ ೧೪ ಸೂತ್ರಗಳ ವ್ಯಾಖ್ಯಾನದಲ್ಲಿ ವಿಭಾವ ಸ್ವಭಾವರೂಪ ಪರಿಣಾಮಗಳು ಬಂಧಹೇತು, ಮೋಕ್ಷಹೇತುಗಳೆಂದರಿಯದೆ ಪುಣ್ಯ ಪಾಪಗಳನ್ನು ಮಾಡುತ್ತಾನಲ್ಲದೆ ಬೇರೆಯಲ್ಲವೆಂದು ಹೇಳುವರು:—

ಬಂಧಮೋಕ್ಷಗಳ ಕಾರಣವನು ಮೋಹದ । ಬಂಧನದಿಂದ ತಿಳಿಯದೆ ॥
ಬಂಧನವಹ ಪುಣ್ಯಪಾಪದಿಂದಲಿ ಜೀವ । ಸಂಧಿಸಿಹನು ಭವದಲ್ಲಿ ॥೫೩॥

ಉ :—ರತ್ನತ್ರಯ ಸ್ವರೂಪನಾದ ಆತ್ಮನೇ ಮುಕ್ತಿಗೆ ಕಾರಣನೆಂಬುದನ್ನು ತಿಳಿಯದೆ ಜೀವನು ಪುಣ್ಯಪಾಪಗಳನ್ನು ಮಾಡುತ್ತಾನೆಂದು ಹೇಳುವರು:—

ಜ್ಞಾನಚಾರಿತ್ರದರ್ಶನವಾತ್ಮರೂಪೆಂದು । ಜ್ಞಾನದಿ ತಿಳಿಯದೆಜೀವ ॥
ನಾನಾವಿಧ ಪುಣ್ಯಪಾಪದರೂಪೆಂದು । ಧ್ಯಾನಿಸುವನು ತನ್ನತಾನು ॥೫೪॥

ಉ :—ನಿಶ್ಚಯನಯದಿಂದ ಪುಣ್ಯ ಪಾಪಗಳನ್ನು ಸಮಾನವೆಂದು ತಿಳಿಯದೆ ಜೀವನು ಮೋಹದಿಂದ ಮೋಹಿತನಾಗಿ ಈ ಸಂಸಾರದಲ್ಲಿ ಪರಿಭ್ರಮಿಸುತ್ತಾನೆಂದು ಹೇಳುವರು:—

ಪುಣ್ಯ ಪಾಪಗಳನು ಸಮವೆಂದು ತಿಳಿಯದೆ । ಬಣ್ಣಿತನಾಗಿ ಮೋಹಮೊಳು ॥
ಗಣ್ಯವಲ್ಲದಿಹ ಸಂಸಾರದಿ ಚಿರಕಾಲ । ಸಣ್ಣನಾಗುತ ತಿರುಗುವನು ॥೫೫॥

ಉ :—ಪಾಪದ ಫಲದಿಂದ ದುಃಖವನ್ನುಣ್ಣುತ್ತಿರುವಾಗ ಅದನ್ನು ಸಹಿಸದೆ ಪುಣ್ಯವನ್ನು ಮಾಡುವುದಕ್ಕಾಗಿ ಧರ್ಮದ ಕಡೆಗೆ ತಿರುಗುವ ಜೀವನ ಪಾಪವೂ ಕೂಡ ಪ್ರಶಂಸೆಗೆ ಯೋಗ್ಯವೆಂದು ಹೇಳುವರು:—

ಪಾಪವು ದುಃಖವಸಿತ್ತಾಗ ಜೀವನು । ತಾಪವ ಹರಿಪ ಧರ್ಮವನು ॥
ಲೇಪಿಸಿ ತನ್ನಾತ್ಮನೊಳುರತನಾಗಲಾ । ಪಾಪವು ಕೂಡ ಸುಂದರವು ॥೫೬॥

ಪಾಪದ ಕಾರಣದಿಂದ ದುಃಖದಿಬೆಂದು । ಲೋಪವಗೈದು ಸಂಸೃತಿಯ ॥
ವ್ಯಾಪಿಸಿ ಶುದ್ಧಾತ್ಮರೂಪವ ಪಡೆವನ । ಪಾಪವೆಲ್ಲವು ಹಿತಕರವು ॥೫೬*೧॥

ಉ :—ನಿದಾನಬಂಧದಿಂದಾರ್ಜಿಸಿದ ಪುಣ್ಯವು ಜೀವನಿಗೆ ರಾಜ್ಯಾದಿ ವೈಭವಗಳನ್ನು ಕೊಟ್ಟು ಪುಣ್ಯವು ಮುಗಿಯಲು ನರಕಾದಿ ದುಃಖಗಳನ್ನುಂಟುಮಾಡುವುದರಿಂದ ಅದು ಒಳ್ಳೆಯದಲ್ಲವೆಂದು ಜ್ಞಾನಿಗಳು ತಿಳಿಯುತ್ತಾರೆಂದು ಹೇಳುವರು:—

ಪುಣ್ಯವು ರಾಜ್ಯಾದಿವಿಭವವನುರೆಕೊಟ್ಟು । ಗಣ್ಯವಿಲ್ಲದೆ ತೊಲಗುವುದು
ಪುಣ್ಯವದಳಿಯಲು ನರಕಾದಿದುಃಖವ । ನುಣ್ಣುವುದೇಕೆ ಪೇಳಿದನು ॥೫೭॥

ಉ :—ನಿರ್ಮಲ ಸಮ್ಯಕ್ತ್ವಾಭಿಮುಖನಾದ ಜೀವನ ಮರಣವೂ ಶುಭಕರವು.
ಅದಿಲ್ಲದವನ ಪುಣ್ಯವೂ ಸಮೀಚಿನವಲ್ಲವೆಂದು ಹೇಳುವರು:—

ಜೀವನು ನಿಜದರ್ಶನದಭಿಮುಖವಾಗಿ । ಸಾವನು ಪಡೆದರು ಸುಖವು ॥
ಜೀವನು ನಿಜದರ್ಶನವಿಲ್ಲದವನಾಗಿ । ಜೀವಿಸಿದ್ದರು ಸುಖವಿಲ್ಲ ॥೫೮॥

ಉ :—ಅದನ್ನೇ ಹೇಳುವರು:—

ನಿಜದರ್ಶನದಭಿಮುಖನಾಗಿಹ ಜೀವ । ನಿಜವಪ್ಪನಂತಸುಖವನು ॥
ಭಜಿಸುತ ಪಡೆವನು ಪರಮಪದವತಾನು । ಅಜರಾಮರಪದವನ್ನು ॥೫೯॥

ನಿಜದರ್ಶನದಿ ವಿಮುಖನಾದ ಜೀವನು । ನಿಜಸುಖವನು ತಾನು ಪಡದೆ ॥
ನಿಜದೊಳನಂತ ದುಃಖವನುಂಡು ನರಳುತ । ಭಜಿಪನು ಸಂಸೃತಿಯನ್ನು ॥೫೯*೧॥

ಉ :—ನಿಶ್ಚಯದಿಂದ ಮಿಥ್ಯಾದೃಷ್ಟಿಯ ಪುಣ್ಯವನ್ನು ನಿಷೇಧಿಸುವರು:—

ಪುಣ್ಯದಿ ವಿಭವವು ವಿಭವದಿಂದಲಿ ಮದ । ಪುಣ್ಯದ ಮದದಿಂದ ಮೋಹ ॥
ಗಣ್ಯವಲ್ಲದ ಮೋಹದಿ ಪಾಪವಂತಹ । ಪುಣ್ಯವೆ ಬೇಡವು ನನಗೆ ॥೬೦॥

ಉ :—ದೇವಶಾಸ್ತ್ರ ಗುರುಸೇವೆಯಿಂದ ಪುಣ್ಯವಲ್ಲದೆ ಮೋಕ್ಷವಿಲ್ಲವೆಂದುಹೇಳುವರು-

ದೇವರು ಮುನಿಶಾಸ್ತ್ರದ ಭಕ್ತಿಯಿಂದಲಿ । ಶೀವಿದ ಪುಣ್ಯವುಬಹುದು ॥
ಜೀವನಿಗವು ಕರ್ಮಕ್ಷಯಹೇತುವಲ್ಲೆಂದು । ಭಾವಿಸಿ ಪೇಳಿಹಗುರುವು ॥೬೧॥

ಉ :—ದೇವಗುರುಶಾಸ್ತ್ರಗಳ ನಿಂದೆಯಿಂದ ಪಾಪಬಂಧವೆಂದು ಹೇಳುವರು:—

ದೇವರು ಗುರುಶಾಸ್ತ್ರದ ನಿಂದೆಯಿಂದಲಿ । ಶೀವಿ ಪಾಪವು ಬಂಧವಹುದು ॥
ಭಾವಿಸಿ ಪಡೆದ ಪಾಪದ ಫಲದಿಂದಲಿ । ನೋವನು ಸಂಸೃತಿಯಲ್ಲಿ ॥೬೨॥

ಉ:—ಮೇಲಿನ ಎರಡು ಸೂತ್ರಗಳಲ್ಲಿ ಹೇಳಿದ ಪುಣ್ಯ ಪಾ ಪ ಫ ಲ ವ ನ್ನು
ತೋರಿಸುವರು:—

ಪಾಪದಿ ತಿರ್ಯಂಚನಾರಕಿಯಪ್ಪನು । ಲೇಪಿತ ಪುಣ್ಯದೊಳಮರ ॥
ಲೇಪಿತ ಮಿಶ್ರಣದಿಂದ ಮಾನವನು । ಲೇಪವಳಿಯೆ ಸಿದ್ಧನಹನು ॥೬೩॥

ಉ :—ನಿಶ್ಚಯ ಪ್ರತಿಕ್ರಮಣ ಪ್ರತ್ಯಾಖ್ಯಾನಾಲೋಚನೆಗಳ ಸ್ವರೂಪನಾದ ಜೀವನು
ತ್ರಿಕಾಲಗಳಲ್ಲೂ ವ್ಯವಹಾರ ಪ್ರತಿಕ್ರಮಣಾದಿ ಮೂರನ್ನು ಬಿಡಬೇಕೆಂದು
ಹೇಳುವರು:—

*ಗುರುಗಳೈವರ ವಂದನೆ ಕರ್ಮನಿಂದನೆ । ಸುರಚಿರ ಪ್ರತಿಕ್ರಮಣಗಳ

---

* ಇದನ್ನು ಶುದ್ಧೋಪಯೋಗದ ಕಥನವೆಂದು ತಿಳಿಯಬೇಕು.

ನೆರೆ ಪುಣ್ಯಕರವೆಂದು ತೊರೆದು ತೊರೆಯಿಸುತ|ಪರರುಮೂಳ್ಪುದನೊಪ್ಪದಿಹುದು ||೬೪||
ವಂದನೆ ನಿಂದನೆ ಪ್ರತಿಕ್ರಮಣಾದಿಗ | ಳೆಂದಿಗು ಪುಣ್ಯದಾಯಕವೆಂ
ದಂದದಿ ತಿಳಿದದ ಬಿಟ್ಟು ಬಿಡಿಸುವವ | ನೆಂದಿಗು ಶುದ್ಧೋಪಯೋಗಿ ||೬೪*೧||

ಉ :--ಪುನಃ ಅದನ್ನೇ ಹೇಳುವರು:—
ವಂದನನಿಂದನ ಪ್ರತಿಕ್ರಮಣಗಳಿವು | ಬಂಧಿಸಿರುವುವು ಪುಣ್ಯದಲಿ
ಅಂದದ ಸಂಯಮವಿಲ್ಲವದರೊಳೆಂದು | ಚಂದದಿ ತೊರೆವುದು ಯೋಗಿ ||೬೫||

ಮನದ ಶುದ್ಧಿಗೆ ಕಾರಣವಲ್ಲವಿವುಮೂರು | ಜನಿಸದಿಹುವು ಸಂಯಮವ
ಸನುಮತದಿಂದಲಿ ಭಜಿಪೆಯೇಕೆಲೆಜೀವ | ವಿನುತನಾದಾತ್ಮನ ಬಿಟ್ಟು ||೬೫*೧||

ಉ :—ಪುನಃ ಅದನ್ನೇ ಹೇಳುವರು:—
ವಂದನ ನಿಂದನ ಪ್ರತಿಕ್ರಮಣವು ಮೂರು | ಬಂಧನದಿಂದ ಶುದ್ಧದಲಿ ||
ಸಂಧಿಸಿ ಜೀವನ ಪುಣ್ಯಕಾರಣವವ | ನೆಂದು ತ್ಯಜಿಸು ನೀನು ಯೋಗಿ ||೬೬||

ಉ :—ಹೀಗೆ ಮೋಕ್ಷ, ಮೋಕ್ಷಫಲ, ಮೋಕ್ಷಮಾರ್ಗ ಪ್ರತಿಪಾದಕವಾದ ದ್ವಿತೀಯ ಮಹಾಧಿಕಾರ ಮಧ್ಯದಲ್ಲಿ ನಿಶ್ಚಯನಯದಿಂದ ಪುಣ್ಯಪಾಪಗಳೆರಡೂ ಸಮಾನವೆಂಬ ವ್ಯಾಖ್ಯಾನದ ಮುಖ್ಯತೆಯಿಂದ ೧೪ ಸೂತ್ರಸ್ಥಲವು ಮುಗಿದಮೇಲೆ ಶುದ್ಧೋಪಯೋಗ ಪ್ರತಿಪಾದನೆಯ ಮುಖ್ಯತೆಯನ್ನೂ ೪೧ ದೋಹೆಗಳಲ್ಲಿ ವ್ಯಾಖ್ಯಾನಮಾಡುವರು. ಎಂಟು ದೋಹೆಗಳಲ್ಲಿ ಪರಿಗ್ರಹತ್ಯಾಗ, ಹದಿಮೂರು ದೋಹೆಗಳಲ್ಲಿ ಕೇವಲಜ್ಞಾನಾದಿ ಗುಣಸ್ವರೂಪದ ಅಪೇಕ್ಷೆಯಿಂದ ಸಮಸ್ತ ಜೀವರೂ ಸಮಾನರೆಂಬ ವ್ಯಾಖ್ಯಾನವನ್ನೂ ಮಾಡುವರು :—

ಮೊದಲು ರಾಗಾದಿವಿಕಲ್ಪ ನಿವೃತ್ತಿಸ್ವರೂಪವಾದ ಶುದ್ಧೋಪಯೋಗದಲ್ಲಿ ಸಂಯಮಾದಿ ಸಮಸ್ತಗುಣಗಳೂ ಇರುತ್ತವೆಂದು ಹೇಳುವರು:-

ಶುದ್ಧೋಪಯೋಗದೊಳಗೆ ನೋಡೆ ಸಂಯಮ | ಶುದ್ಧದ ಶೀಲ ತಪಗಳು
ಶುದ್ಧ ದರ್ಶನಜ್ಞಾನವಿಹುದದು ಕರ್ಮವ- | ಶುದ್ಧವ ಕಳೆವುವೆಂದರಿಯೈ ||೬೭||

ಸಂಯಮತಪಶೀಲ ಜ್ಞಾನದರ್ಶನಗಳು | ಸಂಯಮಿಗಹುವು ಶುದ್ಧದಲಿ
ಸಂಯಮಿ ಶುದ್ಧೋಪಯೋಗದ ಬಲದಿಂದ | ಸಂಯುತನಾಗಿರುತಿಹನು ||೬೭*೧||

ಶುದ್ಧೋಪಯೋಗವೆ ಮುನಿಪನಜ್ಞಾನವು | ಶುದ್ಧವೆ ದರ್ಶನಸುಖವು
ಶುದ್ಧತ್ವಕಾರಣವೆಂದರಿಯುುವಯೊೀಗಿ | ಶುದ್ಧರ ನಮಿಸುವೆ ನಾನು ||೬೭*೨||

ಉ :—ನಿಶ್ಚಯದಿಂದ ಸ್ವಕೀಯ ಶುದ್ಧಭಾವವೇ ಧರ್ಮವೆಂದು ಹೇಳುವರು:—
ಭಾವವಿಶುದ್ಧವದಾತ್ಮೀಯ ಧರ್ಮವು | ಭಾವಿಸೆ ಧರ್ಮವೆಂದರಿದು
ಜೀವನ ಧರ್ಮವು ಚತುರ್ಗತಿ ದುಃಖದಿ | ಜೀವನನುದ್ಧರಿಸುವುದು ||೬೮||

ಉ :—ವಿಶುದ್ಧಭಾವವೇ ಮೋಕ್ಷಮಾರ್ಗವೆಂದು ಹೇಳುವರು:—

ಏಕವಿಶುದ್ಧಭಾವದಿ ಮುಕ್ತಿಮಾರ್ಗವ । ಜೋಕೆಯಿಂದಲಿ ಬಿಡದಿರುತ
ವ್ಯಾಕುಲವಿಲ್ಲದೆ ಶುದ್ಧಭಾವನೆಯಿಂದ । ಜೋಕೆಯಿಂ ಮುಕ್ತಿಯ ಪಡೆಯೈ ॥೧೯॥

ಉ:—ಯಾವ ದೇಶಕ್ಕೆ ಹೋದರೂ, ಎಂತಹ ತಪವನ್ನಾಚರಿಸಿದರೂ ಚಿತ್ತಶುದ್ಧಿಯಿಲ್ಲದೆ ಮೋಕ್ಷವಿಲ್ಲವೆಂದು ಹೇಳುವರು:—

ಜೀವನೆ ನೀನಿಚ್ಛೆಬಂದಕಡೆಗೆ ಪೋಗು । ಜೀವನೆ ನಿನಗಿಚ್ಛೆಯಾದ
ತೀವಿದ ಕಾರ್ಯವಮಾಡು ನೀನಾದರೆ । ಜೀವಶುದ್ಧಿಯ ಬಿಡಬೇಡ ॥೨೦॥
ಜೀವಶುದ್ಧಿಗೆ ಮನಶುದ್ಧಿ ಕಾರಣವೆಂದು । ಜೀವನೆ ತಿಳಿಯದಿರಲು
ಆವಾಗಲು ಮೋಕ್ಷಪದವಿಲ್ಲದಿಹುದೆಂದು । ಭಾವಿಸಿ ತಿಳಿಯೆಲೆಯೋಗಿ ॥೨೦*೧॥

ಉ:—ಶುಭ, ಅಶುಭ, ಶುದ್ಧಯೋಗಗಳನ್ನು ಹೇಳುವರು:—

ಶುಭಪರಿಣಾಮದಿ ವ್ಯವಹಾರಧರ್ಮವ-। ಶುಭದೊಳಧರ್ಮದಿ ಪಾಪ
ಉಭಯವಲ್ಲದ ಶುದ್ಧ ಪರಿಣಾಮದಿ ಕರ್ಮ । ವಭವನ ಬಿಟ್ಟೋಡುವುದು ॥೨೧॥

ಉ:—ಹೀಗೆ ೪೧ ಸೂತ್ರ ಪ್ರಮಿತವಾದ ಮಹಾಸ್ಥಲ ಮಧ್ಯದಲ್ಲಿ ೫ ಸೂತ್ರಗಳಿಂದ ಶುದ್ಧೋಪಯೋಗ ವ್ಯಾಖ್ಯಾನ ಮುಖ್ಯತ್ವದ ಪ್ರಥಮಾಂತರ ಸ್ಥಲವು ಮುಗಿದುದು. ಮುಂದೆ ೧೫ ದೋಹೆಗಳಲ್ಲಿ ವೀತರಾಗಸ್ವಸಂವೇದನಜ್ಞಾನದ ಮುಖ್ಯತೆಯ ವ್ಯಾಖ್ಯಾನವನ್ನು ಮಾಡುವರು:—

ದಾನವಮಾಡಲು ನಿಯಮದಿ ಭೋಗವು । ವಿನುತ ತಪದೊಳಿಂದ್ರಪದವು
ಜ್ಞಾನದಿ ಜನ್ಮಮರಣವಿವರ್ಜಿತವೆಂದು । ಸಾನಂದದಿಂದಲಿ ತಿಳಿಯೋಗಿ ॥೨೨॥

ಉ:—ಅದೇ ಅರ್ಥವನ್ನು ವಿಪಕ್ಷದೂಷಣದಿಂದ ಹೇಳುವರು:—

ಭ್ರಾಂತಿಯೆಲ್ಲವಬಿಟ್ಟು ಜ್ಞಾನದಿಮೋಕ್ಷವೆಂ । ದಂತರಂಗದಿ ತಿಳಿಯೆಂದು
ಭ್ರಾಂತಿಯಿಂ ಜೀವನಜ್ಞಾನದ ಬಲದಿಂದ । ಸಂತತದುಃಖವ ನುಣುವ ॥೨೩॥
ಭ್ರಾಂತಿಯು ಜೀವನ ಪರಿಣಾಮವದು ತಾನು । ಅಂತರಿಸದು ಸಂಸೃತಿಯ
ಇಂತು ಪೇಳಿದನು ನಿರಂಜನದೇವನೆಂ । ದಂತರಂಗದಿ ಭಾವಿಪುದು ॥೨೩*೧॥

ಉ:—ಅದನ್ನೇ ದೃಷ್ಟಾಂತ ದಾರ್ಷ್ಟಾಂತಗಳಿಂದ ಹೇಳುವರು:—

ನೀರನು ಕಡೆದೊಡೆ ಬಾರದು ಚಿಕ್ಕಣ । ಸಾರದ ನಿಯಮವೆಂತಂತು
ಸಾರವಾಗಿಹ ಮೋಕ್ಷಪದವಿಯಜ್ಞಾನಿ । ನೇರದಿ ಪಡೆಯಲರಿಯನು ॥೨೪॥

ಉ:—ಆತ್ಮಜ್ಞಾನವಿಲ್ಲದ ಬಾಹ್ಯಪದಾರ್ಥಜ್ಞಾನವು ನಿಶ್ಚಯನಯದ ದೃಷ್ಟಿಯಿಂದ ಪ್ರಯೋಜನಭೂತವಲ್ಲವೆಂದು ಹೇಳುವರು:—

ನಿಜಬೋಧವಲ್ಲದ ಬಹಿರಂಗಜ್ಞಾನವ । ಭಜಿಸಲು ಫಲವಿಲ್ಲ ಜೀವ
ನಿಜವರಿಯದ ಬಾಹ್ಯತಪವದು ಕ್ಷಣದಲಿ ಸೃಜಿಸುವುದಖಿಲದುಃಖಗಳ ॥೨೫॥

ಉ :—ಮಿಥ್ಯಾತ್ವರಾಗಾದಿ ವೃದ್ಧಿದಾಯಕವಾದ ಜ್ಞಾನವು ಆತ್ಮಜ್ಞಾನವಲ್ಲವೆಂದು ಹೇಳುವರು:—

ದಿನಕರಕಿರಣವಿಲ್ಲದೆ ಹಬ್ಬುತಿಹ ರಾತ್ರಿ । ಅನುನಯದಿಂದ ಶೋಭಿಸದು–॥
ಅನುದಿನ ನಿಜಶುದ್ಧಜ್ಞಾನವಿಲ್ಲದಲಿರೆ । ತನುವಿನ ರಾಗವರ್ಧಿಪುದು ॥೭೬॥

ಉ :—ಜ್ಞಾನಿಗೆ ನಿಜಶುದ್ಧಾತ್ಮಜ್ಞಾನವಲ್ಲದೆ ಉಳಿದ ಯಾವುದೂ ಆದರಣೆಗೆ ಪಾತ್ರವಲ್ಲವೆಂದು ಹೇಳುವರು:—

ಆತ್ಮನನುಳಿದನ್ಯವಸ್ತುಗಳೆಲ್ಲವು । ಆತ್ಮಜ್ಞಾನಿಗೆ ಹಿತವಲ್ಲ ॥
ಆತ್ಮನು ಪರಮಾರ್ಥವಿದನೆಂದು ತಿಳಿಯುತ । ಆತ್ಮಬಾಹ್ಯವನು ಭಜಿಸನು ॥೭೭॥

ಉ :—ಅದೇ ಅರ್ಥವನ್ನು ದೃಷ್ಟಾಂತದಿಂದ ಹೇಳುವರು:—

ಮರಕತರತ್ನದ ಪರಿಜ್ಞಾನವಿರುವವ । ನುರೆಗಾಜನು ಪಿಡಿಯುವನೆ ॥
ಸುರುಚಿರವಪ್ಪಾತ್ಮಜ್ಞಾನವನರಿತವ । ಪರದ್ರವ್ಯವ ಬಯಸುವನೆ ॥೭೮॥

ಉ :—ಕರ್ಮದ ಫಲವನ್ನುಣ್ಣುವಾಗ ರಾಗದ್ವೇಷಗಳನ್ನು ಮಾಡುವವನು ಪುನಃ ಕರ್ಮಬಂಧಮಾಡಿಕೊಳ್ಳುವನೆಂದು ಹೇಳುವರು:—

ತನ್ನ ಕರ್ಮದ ಫಲವನು ತಾನುಣುವಾಗ । ಖಿನ್ನನಾಗುತ ಮೋಹದಿಂದ
ಬನ್ನಬಡುತ ಪುಣ್ಯಪಾಪಭಾವಗಳಿಂದ । ತನ್ನಾತ್ಮನನು ವಂಚಿಪನು ॥೭೯॥

ಉ :—ಉದಯಪ್ರಾಪ್ತ ಕರ್ಮಗಳಲ್ಲಿ ರಾಗದ್ವೇಷಗಳನ್ನು ಮಾಡದೆ ಇರುವವನು ಕರ್ಮಗಳನ್ನು ಬಂಧಮಾಡಿಕೊಳ್ಳುವುದಿಲ್ಲವೆಂದು ಹೇಳುವರು:—

ನಿಜಕರ್ಮಫಲವ ಭೋಗಿಸುವಾಗ ಜ್ಞಾನಿಯು । ಸೃಜಿಸನು ರಾಗದ್ವೇಷಗಳ
ತ್ಯಜಿಸುತ ಸಂಚಿತ ಕರ್ಮಗಳೆಲ್ಲವ । ನಿಜವಕಾಣುತ ಸುಖಿಸುವನು ॥೮೦॥

ಉ :—ಅಣುಮಾತ್ರವಾದ ರಾಗವಿದ್ದರೂ ಕರ್ಮಗಳು ಬಿಡುವುದಿಲ್ಲವೆಂದು ಹೇಳುವರು:—

ಅಣುಮಾತ್ರವಾದ ರಾಗವು ಮನದೊಳಗಿರೆ । ಅಣುವು ಪರ್ವತವಾಗುವಂತೆ
ಅಣುಮಾತ್ರವಾದ ರಾಗವಳಿಯುವ ಪರ್ಯಂತ । ಪ್ರಣುತಾತ್ಮಗೆ ಮುಕ್ತಿಯಿಲ್ಲ ॥೮೧॥

ಉ :—ನಿರ್ವಿಕಲ್ಪವಾದ ಆತ್ಮಭಾವನೆಯಿಲ್ಲದವನು ಶಾಸ್ತ್ರವನ್ನೋದಿದರೂ, ತಪವಾಚರಿಸಿದರೂ ಪರಮಾರ್ಥವನ್ನು ತಿಳಿಯುವುದಿಲ್ಲವೆಂದು ಹೇಳುವರು:–

ತಪವಮಾಡಿದೊಡೇನು ಶಾಸ್ತ್ರವೋದಿದೊಡೇನು । ಜಪಿಸದೆ ಪರಮಾರ್ಥವನ್ನು
ತಪದಿ ಶಾಸ್ತ್ರದಿ ಪರಮಾರ್ಥವರಿಯದೊಡೆ । ವಿಪುಲನಾದಾತ್ಮನ ಪಡೆಯ ॥೮೨॥

ಉ:—ಶಾಸ್ತ್ರವನ್ನೋದಿಯೂ ವಿಕಲ್ಪಗಳನ್ನು ಬಿಡದಿದ್ದವನು ನಿಶ್ಚಯದಿಂದ ಶುದ್ಧಾತ್ಮನನ್ನು ತಿಳಿಯದವನು ಮೂರ್ಖನೆಂದು ಹೇಳುವರು;—

ಮೂಢನು ಸಕಲಶಾಸ್ತ್ರವನೋದುತಿದ್ದರು । ಬಿಡನು ವಿಕಲ್ಪಜಾಲವನು
ಮೂಢತನದಿ ತನ್ನ ದೇಹದೊಳಿರುತಿರ್ಪ । ಪ್ರೌಢನಾದಾತ್ಮನನರಿಯ ||೮೩||

ಉ :—ಜ್ಞಾನಲಾಭಕ್ಕಾಗಿ ಓದುವ ಶಾಸ್ತ್ರದಿಂದ ವಿಶುದ್ಧಾತ್ಮ ಪ್ರತೀತಿ ಲಕ್ಷಣವಾದ ಬೋಧವನ್ನೇ ಪಡೆಯದಿರುವವನು ಮೂರ್ಖನೆಂದು ಹೇಳುವರು:—

ಬೋಧನಿಮಿತ್ತದಿ ಶಾಸ್ತ್ರವ ಪಠಿಸುತ । ಬೋಧವನುರೆ ಪಡೆಯದಿರೆ
ಬೋಧದಿಂದಲಿ ಫಲವಿಲ್ಲವು ಮೂರ್ಖಗೆ । ಸಾಧಿಸದಿರುವನಾತ್ಮನನು ||೮೪||

ಉ :—ವೀತರಾಗ ಸ್ವಸಂವೇದನಜ್ಞಾನವಿಲ್ಲದವನು ಮಾಡುವ ತೀರ್ಥಯಾತ್ರೆಯಿಂದ ಮೋಕ್ಷವು ದೊರೆಯುವುದಿಲ್ಲವೆಂದು ಹೇಳುವರು: —

ಜ್ಞಾನವಿವರ್ಜಿತನಾಗಿಹ ಮೂಢನು । ನಾನಾ ತೀರ್ಥಯಾತ್ರೆಯನು
ಸಾನಂದದಿ ಮಾಡುತಿದ್ದರು ಮುನಿಯಲ್ಲ । ಆನಂದ ಮೋಕ್ಷವಿಲ್ಲವಗೆ ||೮೫||

ಉ :—ಜ್ಞಾನಿಯಾದ ಯತಿಗೂ ಅಜ್ಞಾನಿಯಾದ ಯತಿಗೂ ಬಹು ದೊಡ್ಡ ಅಂತರ ವಿರುವುದೆಂದು ಹೇಳುವರು: —

ಜ್ಞಾನವಿಡಿವ ಯೋಗಿಗೂ ಮಿಥ್ಯಾದೃಷ್ಟಿಗು । ಜ್ಞಾನದೊಳಂತರವಿಹುದು
ಜ್ಞಾನಿಯು ಆತ್ಮನ ನನ್ನದೆನ್ನುವ ನ- । ಜ್ಞಾನಿಯು ದೇಹವಪಿಡಿವ ||೮೬||

ಉ :—ಹೀಗೆ ನಲವತ್ತೊಂದು ದೋಹೆಗಳ ಮಹಾಸ್ಥಲದ ಮಧ್ಯದಲ್ಲಿನ ಹದಿನೈದು ದೋಹೆಗಳಲ್ಲಿ ವೀತರಾಗ ಸ್ವಸಂವೇದನಜ್ಞಾನದ ಮುಖ್ಯತೆಯ ಎರಡನೆಯ ಅಂತರಸ್ಥಲವಾಯ್ತು. ಮುಂದೆ ಎಂಟು ದೋಹೆಗಳಲ್ಲಿ ಪರಿಗ್ರಹತ್ಯಾಗದ ವ್ಯಾಖ್ಯಾನಮಾಡುವರು:—

ಜ್ಞಾನಿಯು ಜ್ಞಾನಿಯೋಗಿಗಳ ವಿಶೇಷವ । ಸಾನಂದದಿ ತಿಳಿಯೋಗಿ
ಜ್ಞಾನಿತ್ರೈಭುವನವ ಪರವೆನ್ನುವ ನ- । ಜ್ಞಾನಿಯು ತನ್ನದೆನ್ನುವನು ||೮೭||

ಉ :—ಶಿಷ್ಯರ ಸಂಗ್ರಹ, ಪುಸ್ತಕ ಸಂಗ್ರಹಾದಿ ಕಾರ್ಯಗಳಿಂದ ಅಜ್ಞಾನಿಯೂ, ಇವೆಲ್ಲ ಪರವಸ್ತುಗಳೆಂದು ಜ್ಞಾನಿಯೂ ಭಾವಿಸುತ್ತಾರೆಂದು ಹೇಳುವರು;—

ಪುಸ್ತಕ ಶಿಷ್ಯರ ಸಂಗ್ರಹದಿಂದಲಿ । ಸ್ವಸ್ತಿವಾಚನವ ಮಾಡುವರು
ಮಸ್ತಕದೊಳು ಪರಿಗ್ರಹವನು ಧರಿಸುತ । ಸ್ವಸ್ಥದೊಳಿಹರು ಬಾಹಿರರು ||೮೮||

ಸಕಲ ಪರಿಗ್ರಹಗಳನು ತ್ಯಜಿಸುತ । ಅಕಲಂಕನಾದಾತ್ಮನಲ್ಲಿ
ಪ್ರಕಟವಾಗಿಹ ಶುದ್ಧ ಪರಮಾತ್ಮರತರು । ಪ್ರಕಟದೊಳರಿವರು ನಿಜವ ||೮೮*೧||

ಉ :—ಕಮಂಡಲು, ಪಿಂಛ, ಪುಸ್ತಕಾದ್ಯುಪಕರಣಗಳಲ್ಲಿ ಮುನಿಗೆ ಮೋಹವಿರಬಾರ ದೆಂದು ಹೇಳುವರು:—

ಭ್ರಾಂತನಾಗಿಹ ಮುನಿ ಶಿಷ್ಯಾರ್ಜಿಕೆಯರನ- । ತ್ಯಂತ ಹಿತವೆಂದು ತಿಳಿವ ||
ಭ್ರಾಂತಿಯಳಿದ ಮುನಿ ಶಿಷ್ಯಾದಿಗಳನೆಲ್ಲ ವ । ತ್ಯಂತ ಬಂಧವದೆಂದರಿವ ||೮೯||

ಉ :—ಜಿನದೀಕ್ಷೆ, ಲೋಚುಗಳನ್ನು ಪಡೆದವನು ಸರ್ವಸಂಗ ಪರಿತ್ಯಾಗಮಾಡ ದಿದ್ದರೆ ತನ್ನಾತ್ಮನನ್ನು ವಂಚಿಸುತ್ತಾನೆಂದು ಹೇಳುವರು:—

ಜಿನವರ ಲಿಂಗದಿ ಪಿಂಛವ ಪಿಡಿದರು । ವಿನುತಲೋಚನು ಮಾಡುತಿರಲು ॥
ಅನುದಿನ ಸಕಲಸಂಗವ ಬಿಡದಿದ್ದರೆ । ಚಿನುಮಯಾತ್ಮನ ವಂಚಿಪನು ॥೯೦॥

ಉ :—ಉಕ್ತ ಯೋಗಿಯು ಪರಿಗ್ರಹಗಳಲ್ಲಿದ್ದರೆ ತಾನು ವಾಂತಿಮಾಡಿದುದನ್ನೇ ತಿನ್ನುತ್ತಾನೆಂದು ಹೇಳುವರು:—

ವಮನಮಾಡಿದ ತನ್ನೆಂಜಲನುರೆ ತಾನು । ಭ್ರಮಿಸಿ ತಿನ್ನುವ ಮರುಳಂತೆ ॥
ಅಮಲಾತ್ಮನ ಜಿನಮುದ್ರೆಯ ಧರಿಸಿಯು । ಮಮತೆಯೊಳ್ಪರಿಗ್ರಹದಿಹನು ॥೯೧॥

ಉ :—ಖ್ಯಾತಿ, ಪೂಜೆ, ಲಾಭಗಳ ನಿಮಿತ್ತದಿಂದ ಶುದ್ಧಾತ್ಮನನ್ನು ಬಿಟ್ಟು ಯೋಗಿಯು ಕಬ್ಬಿಣದ ತುಂಡಿಗಾಗಿ ದೇವಾಲಯವನ್ನು ಸುಡುವ ಮೂಢ ನಂತೆ ಆಚರಿಸುತ್ತಾನೆಂದು ಹೇಳುವರು:—

ಕೀಲಿಗೋಸುಗವಾಗಿ ದೇವಾಲಯವ ಸುಟ್ಟು । ಮಲಿನಾತ್ಮನ ತೆರದಿಂದ ॥
ಪಾಲಿಸುತಿದ್ದರು ಮುನಿಪದವನು ತಾನು । ಲಾಲಿತಾತ್ಮನನು ಬಿಡುವನು ॥೯೨॥

ಉ :—ಬಾಹ್ಯಾಭ್ಯಂತರ ಪರಿಗ್ರಹಗಳಿಂದ ತನ್ನನ್ನು ಮಹಂತನೆಂದು ತಿಳಿಯುವವನು ಪರಮಾರ್ಥವನ್ನು ತಿಳಿಯುವುದಿಲ್ಲವೆಂದು ಹೇಳುವರು:—

ಉಭಯ ಪರಿಗ್ರಹದಿಂದ ತನ್ನನು ತಾನು । ಅಭವನು ಗುರುವೆನ್ನುತಲಿ ॥
ಅಭಿಮತ ಪರಮಾರ್ಥವ ಪೊಂದನೆನ್ನುತ- । ಲಭವನು ಜಿನನು ಪೇಳಿಹನು ॥೯೩॥

ಉ :—ಗ್ರಂಥ (ಗಂಟು) ಗಳಿಂದ ಮಹಂತನೆಂದು ತನ್ನನ್ನು ತಿಳಿಯುವವನು ಪರಮಾರ್ಥವನ್ನು ತಿಳಿಯುವುದೆಂತೆಂದು ಹೇಳುವರು:—

ಪರಮಾರ್ಥವನುರೆ ತಿಳಿಯಲಿರುವನು । ಗುರುವಲ್ಲ ಲಘುವು ತಾನಲ್ಲ ॥
ವರಸಮ್ಯಗ್ದೃಷ್ಟಿಗೆ ಜೀವರೆಲ್ಲರು ಸಮ । ಪರಬ್ರಹ್ಮರಂತೆ ಕಾಣುವರು ॥೯೪॥

ಉ :—ಅದನ್ನೇ ಹೇಳುವರು:—

ಜೀವನದಾವಶರೀರದೊಳಿದ್ದರು । ಅವರೆಲ್ಲ ರತ್ನತ್ರಯದ ॥
ಪ್ರವಿಮಲ ಲಕ್ಷಣದಿಂದಲಿ ಸಮವೆಂದು । ಅವಧರಿಸುವನವ ಮುನಿಯು ॥೯೫॥

ಉ :—ಮೂರು ಲೋಕದಲ್ಲಿರುವ ಸಮಸ್ತ ಜೀವರಲ್ಲೂ ಭೇದವನ್ನು ನೋಡುವವನು ಮೂರ್ಖನು. ಬೇರೆ ಬೇರೆ ಬಣ್ಣದ ಸುವರ್ಣ-ಚಿನ್ನದಲ್ಲೆಲ್ಲ ಹದಿನಾರು ಬಣ್ಣದ ಚಿನ್ನವು ಸಮಾನವಾಗಿರುವಂತೆ ಕೇವಲಜ್ಞಾನ ಲಕ್ಷಣತ್ವದಿಂದ ಜೀವರೆಲ್ಲರೂ ಸಮಾನವೆಂದು ಜ್ಞಾನಿಯು ತಿಳಿಯುತ್ತಾನೆಂದು ಹೇಳುವರು:—

ಮೂರು ಲೋಕದೊಳಿಹ ಜೀವರ ಮೂಢನು । ಸಾರಿ ನೋಡುವನು ಭೇದವಲಿ ॥
ತೋರುತ ಕೇವಲಜ್ಞಾನ ಲಕ್ಷಣದಿಂದ । ಪರಮಜ್ಞಾನಿಗೆ ಸಮರೆಲ್ಲ ॥೯೬॥

ಉ:—ಕೇವಲಜ್ಞಾನಾದಿ ಲಕ್ಷಣಗಳಿಂದ ಶುದ್ಧ ಸಂಗ್ರಹನಯದ ಅಪೇಕ್ಷೆಯಿಂದ ಎಲ್ಲ ಜೀವರೂ ಸಮಾನವೆಂದು ಹೇಳುವರು:—

ಸಕಲ ಜೀವರು ತಾವು ಧರಿಸಿದ ದೇಹದೊ । ಳಕಲಂಕ ಸುಜ್ಞಾನಮಯರು ॥
ಸಕಲಜೀವರು ಜನ್ಮಮರಣ ವಿಮುಕ್ತದಿ । ಸಕಲಗುಣವ ಹೊಂದಬಹುದು ॥೯೭॥

ಉ:—ಜೀವನ ಜ್ಞಾನದರ್ಶನ ಲಕ್ಷಣಗಳನ್ನು ಪ್ರತಿಪಾದಿಸುವರು:—

ಜ್ಞಾನಸೂರ್ಯೋದಯವಿರುವುದರಿಂ ನೀನು । ಜ್ಞಾನದರ್ಶನಮಯರೆಂದು ॥
ಜ್ಞಾನದಿ ಸಕಲರು ಸಮನೆಂದು ತಿಳಿಯೆಂದು । ಜನದೇವ ಪೇಳ್ದನೆಂದರಿಯೈ ॥೯೮॥

ಉ:—ಜಾತಿಯರೂಪದ ಅಪೇಕ್ಷೆಯಿಂದ ಜೀವರೆಲ್ಲ ಒಂದೇ ಜಾತಿಯೆಂದು ಶುದ್ಧಾತ್ಮನು ತಿಳಿಯಬೇಕೆಂದು ಹೇಳುವರು:—

ಭುವನದೊಳಿಹ ಜೀವರ ಭೇದಮಾಡದೆ । ಅವಧರಿಸುವ ಯೋಗಿಜನರು ॥
ಸವಿಸ್ತರದಿಂ ಪರಮಾತ್ಮಪ್ರಕಾಶವ । ಸುವಿಮಲದಿಂ ಬೆಳಗುವರು ॥೯೯॥

ಉ:—ಸರ್ವ ಜೀವವಿಷಯದ ಸಮದರ್ಶಿತ್ವವು ಮುಕ್ತಿ ಕಾರಣವೆಂದು ಹೇಳುವರು:—

ರಾಗದ್ವೇಷಗಳೆರಡನು ಪರಿಹರಿಸಿ । ಯೋಗಿಯು ಸಮಭಾವದಿಂದ ॥
ತೂಗುತಲೆಲ್ಲ ಜೀವರನೋಡುವ ಮುನಿ । ಚಾಗಿಯು ನಿರ್ವಾಣಪಡೆವ ॥೧೦೦॥

ಉ:—ಸರ್ವಜೀವರಲ್ಲೂ ಸಾಧಾರಣವಾಗಿರುವ ಕೇವಲ ಜ್ಞಾನದರ್ಶನ ಲಕ್ಷಣ ವನ್ನು ಹೇಳುವರು:—

ಜ್ಞಾನದರ್ಶನಲಕ್ಷಣದಿಂದ ಸರ್ವರು । ಸಾನಂದದಿ ಸಮರಹುದು ॥
ಹೀನವಧಿಕವೆಂದೆಲ್ಲ ಜೀವರನು । ಜ್ಞಾನಿಯು ಪರಿಭಾವಿಸನೆ ॥೧೦೧॥

ಉ:—ಜೀವನನ್ನು ಜೀವಿಸುವವನೆಂದು ಮಾತ್ರ ತಿಳಿದು ಅವನ ಲಕ್ಷಣವನ್ನು ಮೂಢರು ತಿಳಿಯುವುದಿಲ್ಲವೆಂದು ಹೇಳುವರು:—

ದೇಹವಿಭೇದದ ನಾನಾ ವಿಚಿತ್ರದ । ರೂಹನೆಲ್ಲವನು ಭೇದದಲಿ ॥
ಊಹಿಸಿ ಜೀವನ ರತ್ನತ್ರಯವ ಬಿಟ್ಟು । ದೇವನೆನ್ನುವನವ ಮೂಢ ॥೧೦೨॥

ಉ:—ಸೂಕ್ಷ್ಮಬಾದರ ಶರೀರಗಳು ಜೀವನಿಗೆ ಕರ್ಮಸಂಬಂಧದಿಂದಾಗುವುವು. ಆ ಭೇದಗಳೆಲ್ಲ ಜೀವನಲ್ಲ, ಜೀವನು ಚಿದ್ರೂಪನು. ಎಲ್ಲ ಭೇದವಿರಹಿತನು, ಎಂಬುದನ್ನು ತೋರಿಸುವರು:—

ಬಾದರ ಸೂಕ್ಷ್ಮದ ದೇಹವೆಲ್ಲವು ನೋಡೆ । ವಿಧಿವಶದಿಂದಲಾಗುವುದು ॥
ವಿಧಿವಶವಳಿದ ಜೀವನು ಸಾರ್ವಕಾಲದಿ । ಸದಮಲಜೀವಪ್ರದೇಶಿ ॥೧೦೩॥

ಉ:—ಜೀವನನ್ನು ಶತ್ರುಮಿತ್ರಾದಿ ಭೇದಗಳಿಂದ ನೋಡದೆ ನಿಶ್ಚಯನಯದಿಂದ ಜೀವನ ಲಕ್ಷಣವನ್ನು ತಿಳಿಯಬೇಕೆಂದು ಹೇಳುವರು:—

ವ್ಯವಹಾರನಯದಿಂದ ಪರನು ತನ್ನವನೆಂ । ದವಧರಿಸುತರಿಪುಹಿತನೆಂ ॥
ಬವಿವೇಕವಿಲ್ಲದೆ ನಿಶ್ಚಯನಯದಿಂದ । ಪ್ರವರ ಶುದ್ಧಾತ್ಮನ ನೆನೆಯೈ ||೧೦೪||

ಉ:—ಸರ್ವಜೀವರೂ ಸಮಾನವೆಂದು ತಿಳಿಯದವನಲ್ಲಿ ಸಮಭಾವವು ಹುಟ್ಟುವುದಿಲ್ಲವೆಂದು ಹೇಳುವರು:—

ಏಕಸ್ವಭಾವದ ಸಕಲ ಜೀವರನೆಲ್ಲ । ವಿಕಲವಳಿದು ಸಮದಿಂದ ॥
ಪ್ರಕಟದಿನೋಳ್ಪವ ಭವಸಾಗರದಿ ತೇಲ್ವ । ಪ್ರಕಟದ ನಾವೆಯಂತಿಹನು ||೧೦೫||

ಉ:—ಜೀವರಲ್ಲಿ ಕಾಣ್ಬರುವ ಭೇದವೆಲ್ಲವೂ ಕರ್ಮಕೃತವೆಂದು ಹೇಳುವರು:—

ನರನಾರಕಾದಿ ಭೇದವು ಕರ್ಮಕೃತವದು । ಪರಿವ ಭೇದವು ಜೀವನಲ್ಲ ॥
ವರಕಾಲಲಬ್ಧಿಯು ದೊರೆಯಲು ಜೀವನು । ಪರಿಶುದ್ಧಪರಮಾತ್ಮನಹನು ||೧೦೬||

ಉ:—ಜೀವರಲ್ಲಿ ಭೇದವನ್ನೆಣಿಸದೆ ಅವನನ್ನು ಶುದ್ಧಸಂಗ್ರಹನಯದಿಂದ ನೋಡೆಂದು ಹೇಳುವರು:—

ದ್ವಿವಿಧಭಾವದಿ ಜೀವರನೆಲ್ಲ ನೋಡದೆ । ಅವರ ಏಕತ್ವದಿ ನೋಡೆ ॥
ಪ್ರವರಶುದ್ಧಾತ್ಮನ ತ್ರಿಭುವನ ದೇವರಂ । ತವಧರಿಸುವುದೇಕವೆಂದು ||೧೦೭||

ಉ:—ಹೀಗೆ ಹದಿನಾರು ಬಣ್ಣದ ಚಿನ್ನದ ದೃಷ್ಟಾಂತದಿಂದ ಜೀವರೆಲ್ಲರೂ ಕೇವಲ ಜ್ಞಾನಾದಿ ಲಕ್ಷಣದಿಂದ ಸಮಾನರೆಂಬ ವ್ಯಾಖ್ಯಾನದ ಮುಖ್ಯತೆಯಿಂದ ಹದಿಮೂರು ದೋಹಾಸೂತ್ರಗಳನ್ನು ಹೇಳಿದರು. ಹೀಗೆ ಮೋಕ್ಷಮಾರ್ಗ, ಮೋಕ್ಷಫಲ, ಮೋಕ್ಷ ಈ ಮೂರನ್ನು ಹೇಳುವ ಎರಡನೆ ಮಹಾಧಿಕಾರದಲ್ಲಿ ನಾಲ್ಕು ಅಂತರಸ್ಥಲಗಳ ನಲವತ್ತೊಂದು ದೋಹೆಗಳ ಮಹಾಸ್ಥಲವು ಮುಗಿದುದು. ಇದರಲ್ಲಿ ಶುದ್ಧೋಪಯೋಗ ವೀತರಾಗ ಸ್ವಸಂವೇದನಜ್ಞಾನ ಪರಿಗ್ರಹತ್ಯಾಗ, ಸರ್ವಜೀವರ ಸಮಾನತೆ, ಈ ಕಥನವಾಯ್ತು.

ಮುಂದೆ 'ಪರಜಾಣಂತುವಿ' ಇತ್ಯಾದಿ ಒಂದುನೂರೇಳು ದೋಹೆ ಪರಿಯಂತ ಮೂರನೆಯ ಮಹಾಧಿಕಾರವನ್ನು ಹೇಳಿ ಅಲ್ಲಿಗೆ ಗ್ರಂಥವನ್ನು ಮುಗಿಸುವರು:—

ಪರಮಮುನಿಯು ತಾನು ಪರಮನನೋಡುತ । ಪರಸಂಸರ್ಗವ ಬಿಡುತ ॥
ಪರಸಂಸರ್ಗದಿ ಲಕ್ಷ್ಯವು ಚಲಿಪುದೆಂ । ದರಿತು ನೋಡುವ ಪರಮನನು ||೧೦೮

ಉ:—ಪರದ್ರವ್ಯಸಂಸರ್ಗತ್ಯಾಗವನ್ನು ಹೇಳುವರು:—

ಸಮಭಾವದಿಂದಲಿ ಅನ್ಯಸಂಗವಬಿಟ್ಟು । ಸಮತೆಯೊಳಿರದಿರೆ ನೀನು ॥
ಸಮನಲ್ಲದಿಹ ಚಿಂತಾಸಾಗರದೊಳು ಬಿದ್ದು । ಅಮಲಾತ್ಮನ ಸುಡುತಿರುವೆ ||೧೦೯

ಉ:—ಪರಸಂಗದೂಷಣವನ್ನು ದೃಷ್ಟಾಂತದಿಂದ ಹೇಳುವರು:—

ಖಲರಸಂಸರ್ಗದಿ ಭದ್ರಜೀವರು ತಮ್ಮ । ಅಮಲಗುಣವ ತ್ಯಜಿಸುವರು ॥
ಮಿಲಿತವಾಗಿಹ ಬೆಂಕಿ ಲೋಹದ ಸೋಂಕಿನಿಂ। ಕಳೆಗೆಟ್ಟು ಪೆಟ್ಟುತಿನ್ನುವುದು ||೧೧

ಉ :—ಮೋಹಪರಿತ್ಯಾಗವನ್ನು ಹೇಳುವರು:—
ಮೋಹವು ಮಂಗಲವಲ್ಲವೆಂದರಿತು ನೀ । ಮೋಹವನುರೆ ಬಿಡುಯೋಗಿ ॥
ಮೋಹಾಸಕ್ತದಿ ಜಗದ ಜೀವಿಗಳೆಲ್ಲ । ಸಹಿಸುವರಖಿಳದುಃಖವನು ॥೧೧೧॥

ಉ :—ಸ್ಥಲಸಂಖ್ಯೆಯಿಲ್ಲದ ಮೂರು ಪ್ರಕ್ಷೇಪಕ ಸೂತ್ರಗಳಿಂದ ಆಹಾರಮೋಹ ವಿಷಯನಿರಾಕರಣಸಮರ್ಥನದ ಅರ್ಥವನ್ನು ಹೇಳುವರು:—
ಅರೆಬೆಂದ ಹೆಣನರೂಪವ ನಗ್ನರೂಪವ । ಧರಿಸುತ ಭೀಭತ್ಸವಪ್ಪ ॥
ತೊರೆದು ಬಿಜ್ಜೆಯ ಭಿಕ್ಷೆಯೊಳುಂಬ ಯೋಗಿಯು।ಪರಮಾನ್ನವನಾಶಿಪುದೇ॥೧೧೧*೨॥

ಉ : —ಅದನ್ನೇ ಹೇಳುವರು:—
ದ್ವಾದಶವಿಧತಪಃಫಲದ ಮಹತ್ವದಿ । ಸಾಧಿಸು ಪರಮಮುಕ್ತಿಯನು ॥
ಅದಬಿಟ್ಟು ಭೋಜನಗೃದ್ಧಿಯು ನಿನಗೇಕೆ।ತೊರೆಮನವಚನ ಕಾಯದಲಿ ॥೧೧೧*೩॥

ಉ :—ಅದನ್ನೇ ಹೇಳುವರು:—
ಸುರಸಾನ್ನದಿ ರಾಗ ವಿರಸಾನ್ನದಿದ್ವೇಷ । ದಿರವು ನಿನಗೆ ಸರಿಯಲ್ಲ ॥
ಪರಿಪರಿ ಕೂಳಿಗೆ ಬರುವ ಗೃದ್ಧದತೆರ । ದಿರವೇಕೆ ಪೇಳೆಲೆ ಮುನಿಯೆ ॥೧೧೧*೪॥

ಉ :—ಶುದ್ಧಾತ್ಮೋಪಯೋಗಲಬ್ಧಿಯಿಲ್ಲದೆ ಪಂಚೇಂದ್ರಿಯ ವಿಷಯಾಸಕ್ತ ಜೀವರು ವಿನಾಶಹೊಂದುತ್ತಾರೆಂದು ಹೇಳುವರು:—
ರೂಪಿಗೆ ಶಬ್ದಕೆ ಸ್ಪರ್ಶಗಂಧಗಳಿಗೆ । ವ್ಯಾಪಿಸ ರಸದಾಶೆಯಲಿ ॥
ಲೋಪವಾಗುವುವು ಪತಂಗಮೃಗವು ಗಜ । ರೂಪಳಿವುವು ತುಂಬಿ ಮೀನು ॥೧೧೨॥

ಉ :—ಲೋಭಕಷಾಯದ ದೋಷವನ್ನು ಹೇಳುವರು:—
ಲೋಭವು ಮಂಗಲವಲ್ಲವು ಯೋಗಿಯೆ । ಲೋಭವ ತ್ಯಜಿಪುದು ನೀನು ॥
ಲೋಭಾಸಕ್ತರಾಗಿರುತಿಹ ಜಗವೆಲ್ಲ । ಲೋಭದಿ ದುಃಖಪಡೆವರು ॥೧೧೩॥

ಉ :—ಅದನ್ನು ದೃಷ್ಟಾಂತದಿಂದ ಹೇಳುವರು:—
ಅಡಿಗಲ್ಲಮೇಲಿಟ್ಟು ಲೋಹದ ಗುಂಡನು । ಪಿಡಿದಿರ್ಪ ಬೆಂಕಿಯು ತಾನು ॥
ಬಡಿಸಿಕೊಳ್ಳುತಲೇಟಿಗೆ ಸಿಕ್ಕಿ ನರಳುತ । ಪುಡಿಪುಡಿಯಪ್ಪುದ ನೆನೆಯೈ ॥೧೧೪॥

ಉ :—ಸ್ನೇಹ ಪರಿತ್ಯಾಗವನ್ನು ಹೇಳುವರು:—
ಯೋಗಿಯೆ ಸ್ನೇಹವ ಪರಿತ್ಯಜಿಸುವುದು । ರಾಗವು ಸುಖಕರವಲ್ಲ ॥
ರಾಗಾಸಕ್ತರಾಗಿಹ ಜಗವೆಲ್ಲವು । ಭೋಗಿಪರಖಿಳ ದುಃಖವನು ॥೧೧೫॥

ಉ :—ಸ್ನೇಹದ ದೋಷವನ್ನು ದೃಷ್ಟಾಂತದಿಂದ ಹೇಳುವರು:—
ಎಣ್ಣೆಯುಳ್ಳುದರಿಂದ ಎಳ್ಳನು ತುಳಿವರು । ಎಣ್ಣೆಗಾಗಿಯೆ ಕುಟ್ಟುವರು ॥
ಎಣ್ಣೆಯ ಪಡೆಯಲು ಗಾಣದೊಳಳೆವರು । ಬಣ್ಣದ ಸ್ನೇಹವೀತೆರನು ॥೧೧೬॥

ಆದರಂತೆ ಸ್ನೇಹದಿ ಘಾತಿಪಡುವೆ ನೀನು । ಚದುರಿಂದ ಸ್ನೇಹವತೊರೆಯೈ ॥
ಸದನುಲನಾತ್ಮನ ಪೊಂದುತ ಸುಖಿಪುದು । ಸದರವು ನಿನಗೆಲೆ ಯೋಗಿ ॥೧೧೬*೧॥

ಉ:—ಅದನ್ನೇ ಹೇಳುವರು:—
ಜೀವನ ಯೌವ್ವನಕುಂಡದಲದ್ದದೆ ! ಜೀವಿಸುತಿಹ ಸತ್ಪುರುಷರು ॥
ಜೀವಲೋಕದಿ ಯೌವ್ವನಜಲದಲಿ ತೇಲಿ । ಜೀವಸಿದ್ಧಿಯ ಪಡೆಯುವರು ॥೧೧೭॥

ಉ:—ಮೋಕ್ಷದ ಕಾರಣವಾದ ವೈರಾಗ್ಯವನ್ನು ದೃಢಪಡಿಸುವರು:—
ಜಿನದೇವನು ತಾನು ಬಹುವಿಧರಾಜ್ಯವ । ಸನುಮತದಿಂದಲಿ ತ್ಯಜಿಸಿ ॥
ಚಿನುಮಯ ಮೋಕ್ಷವ ಪಡೆದನೆಂದರಿತು ನೀ । ನನುಮಾನದೊಳಿಹುದೇಕೆ ॥೧೧೮॥
ನಿನಗೆ ಭಿಕ್ಷಾನ್ನ ಭೋಜನವಲ್ಲವೆ ನೋಡು । ವಿನುತ ವೈಭವರಾಜ್ಯವಿಲ್ಲ ॥
ಸನುಮತದಿಂದಿದ ಬಿಡದಿರ್ಪುದೇಕೆಲೆ । ಚಿನುಮಯನಾತ್ಮನ ಪಡೆಯೈ ॥೧೧೮*೧॥

ಉ:—ನೀನೂ ಜಿನದೇವನಂತೆ ಅಷ್ಟಕರ್ಮನಿರ್ಮೂಲನಮಾಡಿ ಮೋಕ್ಷವನ್ನು ಪಡೆಯೆಂದು ಹೇಳುವರು:—
ಸಂಸಾರದ ಭ್ರಮಣದಿ ದುಃಖವಪೊಂದಿ । ಹಂಸನಾದಾತ್ಮನ ಬಿಟ್ಟು ॥
ಸಂಸಿದ್ಧಿಸುಖವನು ಪಡೆಯದಲಿರುತಿಹೆ । ಸಂಸಾರವ ಬಿಡುಯೋಗಿ ॥೧೧೯॥

ಉ:—ಸ್ವಲ್ಪ ದುಃಖವನ್ನೂ ಸಹಿಸಲು ಸಮರ್ಥನಲ್ಲದ ನೀನು ಅನಂತಕಾಲದವರೆಗೆ ದುಃಖವನ್ನುಣ್ಣುವ ಕರ್ಮವನ್ನೇಕೆಮಾಡುವೆ? ಎಂದು ಹೇಳುವರು:—
ಅತಿಸ್ವಲ್ಪವಾದ ದುಃಖವ ಸಹಿಸದ ನೀನು । ಚತುರ್ಗತಿಕಾರಣವಪ್ಪ ॥
ಅತಿಕಠಿಣದ ಕರ್ಮವಮಾಡುವುದೇಕೆ । ಮತಿವಂತ ಪೇಳದ ನೀನು ॥೧೨೦॥

ಉ:—ಬಹಿರ್ವ್ಯಾಸಂಗಾಸಕ್ತವಾಗಿರುವ ಲೋಕವು ಕ್ಷಣಮಾತ್ರವಾದರೂ ಆತ್ಮ ಚಿಂತನೆಯನ್ನೇಕೆ ಮಾಡುವುದಿಲ್ಲವೆಂದು ಕೇಳುವರು:—
ಜಗದ ಜಂಜಡದೊಳು ಸಿಲುಕಿಹ ಜನರೆಲ್ಲ । ಅಗಣಿತ ಕರ್ಮಮಾಡುತಲಿ ॥
ಬಗೆಯಲಿ ನೆನೆಯರೇಕಕ್ಷಣ ಮೋಕ್ಷವ । ಪ್ರಗುಣಾತ್ಮಧ್ಯಾನವ ಬಿಟ್ಟು ॥೧೨೧॥

ಉ:—ಅದೇ ಅರ್ಥವನ್ನು ದೃಢಪಡಿಸುವರು:—
ಜ್ಞಾನವಿರಹಿತದಿ ಹೆಂಡತಿ ಮಕ್ಕಳ । ನಾನಾ ಮೋಹದೊಳದ್ದಿ ॥
ನಾನಾ ಲಕ್ಷಯೋನಿಗಳಲ್ಲಿ ತೊಳಲುತ । ನಾನಾ ದುಃಖಹೊಂದುವರು ॥೧೨೨॥

ಉ:—ಜೀವನೆ! ಗೃಹಪರಿಜನಶರೀರಾದಿಗಳಲ್ಲಿ ಮಮತೆಯನ್ನು ಬಿಡು ಎಂದು ಹೇಳುವರು:—
ಮನೆ ಪರಿಜನತನುಇಷ್ಟರಾತ್ಮೀಯರ । ನನುದಿನ ನಿನ್ನವೆನ್ನದಿರು ॥
ಅನುಮಾನವಿಲ್ಲದೆ ಕೃತ್ರಿಮವೆಂದಿವ । ಮುನಿಗಳಾಗಮದಿ ಪೇಳಿಹರು ॥೧೨೩॥

ಉ :—ಗೃಹಪರಿವಾರಾದಿಗಳ ಚಿಂತೆಯಿಂದ ಮೋಕ್ಷವಿಲ್ಲವೆಂದು ಹೇಳುವರು:—
ತಪದಿಂದ ಮಹಿಮೆಯು ಮೋಕ್ಷವಾಗುವುದೆಂದು । ತಪವನಾಚರಿಸಲೆ ಜೀವ ॥
ತಾಪವೀಯುತಲಿಹ ಮನೆ ಪರಿಜನರಿಂದ । ತಾಪವಳಿದ ಮೋಕ್ಷವಿಲ್ಲ ॥೧೨೪॥

ಉ :—ಜೀವಹಿಂಸೆಯ ದೋಷವನ್ನು ಹೇಳುವರು:—
ಪುತ್ರಕಲತ್ರರ ಸುಖಕಾಗಿ ಜೀವನೆ । ಧಾತ್ರಿಯ ಲಕ್ಷಜೀವರನು ॥
ವ್ಯರ್ಥದಿ ಕೊಲ್ಲುವ ಪಾಪವನೊಬ್ಬನೆ । ಸ್ವಾರ್ಥದೊಳನುಭವಿಸುವೆಯ್ಯ ॥೧೨೫॥

ಉ :—ಹಿಂಸೆಯ ದೋಷವನ್ನು ದೃಢಪಡಿಸುವರು:—
ಪರಜೀವರನು ಕೊಲ್ವ ದುಃಖವನೀಯುವ । ಪರಿಪರಿಯಾಗಿ ಕತ್ತರಿಪ ॥
ನಿರುತದ ಕಾರ್ಯದಿ ದುಃಖವನಂತವ । ಪರಮಾವಶ್ಯದೊಳುಣುವೆ ॥೧೨೬॥

ಉ :—ಜೀವವಧೆಯಿಂದ ನರಕಗತಿಯೂ, ಜೀವರಕ್ಷಣೆಯಿಂದ ಸ್ವರ್ಗವೂ ಲಭಿಸುವುದೆಂದು ಹೇಳುವರು:—
ಜೀವವಧೆಯ ಕಾರ್ಯದಿಂದ ನರಕಗತಿ । ಜೀವರಕ್ಷಣೆಯಿಂದ ಸ್ವರ್ಗ ॥
ಜೀವನೀನಿವರೊಳು ರೋಚಕವಪ್ಪುದ । ಭಾವಿಸಿ ಪಿಡಿ ಹಿತವಹುದ ॥೧೨೭॥

ಉ :—ಮೋಕ್ಷಮಾರ್ಗದಲ್ಲಿ ರತಿಮಾಡೆಂದು ಹೇಳುವರು:—
ಸಕಲಕೃತ್ರಿಮಭ್ರಾಂತಿಯಿಂದಲಿ ಮೋಹದ । ವಿಕಲತೆಯಿಂದಲಿ ತುಷವ ॥
ವಿಕಲತೆಯಿಂದ ಕುಟ್ಟಿದೊಡೇನುಫಲವಿಹು।ದಕಲಂಕ ಮೋಕ್ಷವ ಪಡೆಯ್ಯೆ ॥೧೨೮॥

ಉ :—ಪುನಃ ಅಧ್ರುವಾನುಪ್ರೇಕ್ಷೆಯನ್ನು ಹೇಳುವರು:—
ಜೀವನೊಂದಿಗೆ ದೇಹವು ಪೋಗುವುದಿಲ್ಲ । ಭಾವಿಸೆಲ್ಲವು ಕೃತ್ರಿಮವು ॥
ಜೀವನೀಸೀದೃಷ್ಟಾಂತವ ನೋಡುತ । ಸಾವನು ಪೊಂದುವುದೇಕೆ? ॥೧೨೯॥

ಉ :—ಮುನಿಗಳಿಗೆ ಪ್ರತ್ಯಧ್ರುವಾನುಪ್ರೇಕ್ಷೆಯನ್ನು ಹೇಳುವರು:—
ಪರಮಜಿನಾಲಯ ಜಿನಬಿಂಬ ಜಿನಶಾಸ್ತ್ರ । ಪರಮಗುರುವು ತೀರ್ಥಗಳು ॥
ಪರಮಾರ್ಥದಿನೋಡೆ ಕಾಲದವಶದಿಂದ । ವರಮುನಿ ಕೆಡುವುವೆಂದರಿಯ್ಯೆ ॥೧೩೦॥

ಉ :—ಶುದ್ಧಾತ್ಮದ್ರವ್ಯವಲ್ಲದೆ ಉಳಿದೆಲ್ಲವೂ ಅಧ್ರುವವೆಂದು ಹೇಳುವರು:—
ಏಕನ ಪರಬ್ರಹ್ಮನಲ್ಲದ ಪರವಪ್ಪ । ಲೋಕಾದಿಗಳೆಲ್ಲ ನಿನಗೆ ॥
ಏಕಕ್ಷಣದಲಿ ನಾಶವಪ್ಪುವುಗಳೆಂ । ದೇಕಮನದಲಿದ ತಿಳಿಯ್ಯೆ ॥೧೩೧॥

ಉ :—ಈ ಅಧ್ರುವತ್ವವನ್ನು ತಿಳಿದು ಧನಯೌವನಗಳನ್ನು ತೃಣವೆಂದು ತಿಳಿಯೆಂದು ಹೇಳುವರು:—
ರವಿಯುದಯದಿ ತೋರ್ಪವಸ್ತುಗಳೆಲ್ಲವು । ರವಿಯಸ್ತದೊಳಿಲ್ಲದಂತೆ ॥
ಸವಿಯಾಗಿ ತೋರುವಧನಯೌವನಗಳು । ಸವಿಯಲ್ಲದೋಡಿಪೋಗುವುವು ॥೧೩೨॥

ಉ :—ಧರ್ಮತಪಶ್ಚರಣರಹಿತನ ಮನುಷ್ಯಜನ್ಮವು ವ್ಯರ್ಥವೆಂದು ಹೇಳುವರು:—
ಚರ್ಮದ ತೊಗಟೆಯಿಂ ಮುಚ್ಚಿದ ದೇಹವ । ಮರ್ಮದ ವೃಕ್ಷವ ನೀನು ॥
ಧರ್ಮಕೆ ತಪವೆಂಬ ಬಿಸಿಲಿಗೆ ಬಿಡದಿರೆ । ಮರ್ಮದ ಮುಪ್ಪೆಂಬ ಹುಳುವು ॥೧೩೩॥

ತಿನ್ನುತ ನಿನ್ನನು ನರಕಕೂಪದೊಳದ್ದಿ । ನಿನ್ನ ಕೇಡನು ಬಯಸುತಿಹ ।
ತಿನ್ನುವ ಹುಳುಗಳ ತಿನ್ನಲು ಬಿಡದಿರ । ದುನ್ನತ ತಪಕೊಡ್ಡು ಜೀವ ॥೧೩೩*೧॥

ಉ :—ಗುರೂಪದೇಶದಿಂದ ಜಿನರಲ್ಲಿ ಭಕ್ತಿಯನ್ನಿಡು ಎಂದು ಹೇಳುವರು:—
ಜಿನಪದ ಭಕ್ತಿಯೊಳಿರುತ ಸಂಸಾರದ । ತನುವು ಕುಟುಂಬಪುತ್ರರಲಿ ॥
ಘನವೇನು ಪಿತೃವಿನ ಮಮತೆಯ ಬಿಡುತಲಿ । ಜಿನಪದವಿಯ ಪಡೆಯೋಗಿ ॥೧೩೪॥

ಉ :—ಚಿತ್ತಶುದ್ಧಿಯಿಲ್ಲದ ತಪಶ್ಚರಣದಿಂದಲೂ ಫಲವಿಲ್ಲವೆನ್ನುವರು:—
ತಪವನು ಮಾಡದೆ ನಿರ್ಮಲಚಿತ್ತದಿ । ಸುಪವಿತ್ರ ಮನುಜಜನ್ಮದಲಿ ॥
ಅಪವರ್ಗಪದವ ತಪ್ಪಿಸುವಾತ್ಮವಂಚಕ । ವ್ಯಪದೇಶವೇತಕೆ ಜೀವ ॥೧೩೫॥

ಉ :—ಪಂಚೇಂದ್ರಿಯ ವಿಜಯವನ್ನು ಹೇಳುವರು:—
ಪಂಚೇಂದ್ರಿಯವೆಂಬ ಒಂಟೆಯ ಸ್ವೇಚ್ಛೆಯಿಂ । ಸಂಚರಿಸಲು ಬಿಡಬೇಡ ॥
ಸಂಚರಿಸುತಲದು ವಿಷಯವನವ ಹೊಕ್ಕು । ಸಂಚಿನಿಂ ನರಕಕೊಯ್ಯುವುದು ॥೧೩೬॥

ಉ :—ಧ್ಯಾನವೈಷಮ್ಯವನ್ನು ಹೇಳುವರು:—
ಯೋಗಿಯೆ ವಿಷಮವು ಯೋಗದ ಗತಿಯದು । ರಾಗದಿಂದ್ರಿಯ ವಿಷಯದೊಳು ॥
ತೂಗುತ ಮನವನು ಕಪಿಯಂತೆ ತಿರುಗಿಸಿ । ರಾಗರಹಿತದಿ ಸ್ಥಾಪಿಸೆಲೈ ॥೧೩೭॥

ಉ :—ಸ್ಥಲಸಂಖ್ಯೆಯಲ್ಲದ ಪ್ರಕ್ಷೇಪಕಗಾಥೆಯಲ್ಲಿ ಧ್ಯಾನದ ಕಠಿನತೆಯನ್ನು ತೋರಿಸುವರು:—
ಪಂಚೇಂದ್ರಿಯ ಬಾಹ್ಯನಾದ ಪರಾತ್ಮನ । ಸಂಚಿನ ಧ್ಯಾನದೊಳಿರಲು ॥
ಮಿಂಚಿನಂದದಧ್ಯಾನ ರತ್ನತ್ರಯವಕಾಯ್ದು । ಪಂಚಮಗತಿಯನೀಡುವುದು ॥೧೩೭*೧॥

ಉ :—ಪಂಚೇಂದ್ರಿಯ ಸುಖದ ಅನಿತ್ಯತ್ವವನ್ನು ಹೇಳುವರು:—
ಎರಡುದಿವಸವಿದ್ದು ಚಲಿಪ ವಿಷಯಸುಖ । ಗುರುತರ ದುಃಖಕಾರಣವು ॥
ನೆರೆತನ್ನ ಶಿರವ ಕಡಿವ ಕೊಡಲಿಯತೆರ । ಅರಿದು ತ್ಯಜಿಸು ಈ ಸುಖವ ॥೧೩೮॥

ಉ :—ಆತ್ಮಭಾವನೆಗಾಗಿ ಇರುವ ಸುಖವನ್ನು ತ್ಯಜಿಸುವವನನ್ನು ಪ್ರಶಂಸಿಸುತ್ತಾರೆ:-
ವಿಷಫಲದಂತಿಹ ವಿಷಯವ ತ್ಯಜಿಸುತ । ಅಸಮಕೇಶವ ಬಲಿಗೊಟ್ಟ ॥
ಸ್ವಸಮಯದೊಳಗಿಹ ಯೋಗಿಯ ದೇವರು । ಅಸಮಾನರೆಂದು ನುತಿಪರು ॥೧೩೯॥

ಉ :—ಮನೋಜಯದಿಂದ ಇಂದ್ರಿಯ ಜಯವಾಗುವುದೆನ್ನುವರು:—
ಪಂಚೇಂದ್ರಿಯ ನಾಯಕನಾದ ಮನವನು । ಸಂಚಿತಗೊಳಿಸಲಾತ್ಮನಲಿ ॥
ಮಿಂಚಿನ ವೃಕ್ಷದ ಮೂಲವದಳಿಯಲು । ಸಂಚಿನಿಂ ಕೆಳಗೆ ಬೀಳುವುದು ॥೧೪೦॥

ಧರೆಗುರುಳಿದ ವೃಕ್ಷದ ಪರ್ಣಗಳೆಲ್ಲ । ತರಗೆಲೆಯಾಗಿ ಪೋಪಂತೆ ॥
ಇರೆಮನವಾತ್ಮನೊಳಿಂದ್ರಿಯವೆಲ್ಲವು । ಪರಿದೋಡುವುವು ಕಂಡಕಡೆಗೆ ॥೧೪೦*೧॥

ಉ :—ವಿಷಯಗಳಲ್ಲಿ ಅನಂತಕಾಲವನ್ನು ಕಳಿದೆ. ಇನ್ನೆಷ್ಟು ದಿನ ಹೀಗೆ ಕಾಲ ಕಳೆಯುವೆ ? ಎನ್ನುವರು:—

ವಿಷಯಾಸಕ್ತಿಯಿಂದಿನ್ನೆಷ್ಟುಕಾಲವು । ವಿಷಮ ಸಂಸಾರದೊಳಿರುವೆ ।
ಅಸಮದ ಶಿವಸಂಗಮವ ಭಾವಿಸಿ ನಿಜ । ವಶದಿ ಮೋಕ್ಷವನು ಪಡೆಯುವೆ ॥೧೪೧॥

ಉ :—ಪುನಃ ಅದನ್ನೇ ಹೇಳುವರು:—

ಗುರುವರನೀಂ ಶಿವಸಂಗಮವನು ಬಿಟ್ಟು । ಪರದತ್ತ ಪೋಗಲುಬೇಡ ॥
ಪರಶಿವಸಂಗದಿ ಲೀನರಲ್ಲದ ಜನ- । ರುರುತರ ದುಃಖ ಪೊಂದುವರು ॥೧೪೨॥

ಉ :—ಸಮ್ಯಕ್ತ್ವದ ದುರ್ಲಭತ್ವವನ್ನು ಹೇಳುವರು:—

ಕಾಲವನಾದಿಯು ಜೀವನನಾದಿಯು । ಕಲಿಲ ಸಂಸಾರವನಂತ ॥
ಕಾಲದಿಂ ಜೀವನು ಜಿನರನು ಧರ್ಮವ । ಸುಲಲಿತದಲಿ ಪೊಂದಲಿಲ್ಲ ॥೧೪೩॥

ಉ :—ಶುದ್ಧಾತ್ಮಸಂವಿತ್ತಿಸಾಧಕವಾದ ತಪಶ್ಚರಣಕ್ಕೆ ಪ್ರತಿಪಕ್ಷವಾದ ಮನೆಯ ವಾಸವನ್ನು ದೂಷಿಸುವರು:—

ಮನೆಯ ವಾಸವನೀನು ದುಷ್ಕೃತವಾಸವೆಂ । ದೆನ್ನುತಲಿ ತಿಳಿಯೆಲೆ ಜೀವ ॥
ಮನೆಯು ಕೃತಾಂತಪಾಶವನೊಡ್ಡುವುದೆಂದು । ನೆನೆನೀನಿಸ್ಸಂದೇಹದಿಂದ ॥೧೪೪॥

ಉ :—ಮನೆಯ ಮಮತ್ವತ್ಯಾಗವಾದ ಮೇಲೆ ತನುವಿನ ಮಮತ್ವದ ತ್ಯಾಗವನ್ನು ಹೇಳುವರು:—

ದೇಹವಾತ್ಮೀಯವಲ್ಲವು ಸಂಸಾರದಿ । ಊಹಿಸು ಪರವದು ನಿನಗೆ ॥
ದೇಹದಿಂ ಶಿವಸಂಗವ ಬಿಟ್ಟನ್ಯದ । ದೇಹದ ಮಮತೆಯ ತ್ಯಜಿಸು ॥೧೪೫॥

ಉ :—ಅದನ್ನೇ ಪ್ರಕಾರಾಂತರದಿಂದ ಹೇಳುವರು:—

ಶಿವಸಂಗಮದ ಚಿಂತನೆಯನು ಮಾಡುತ । ಅವಿಚಲಸುಖವ ಪೊಂದುವುದು ॥
ಕೇವಲ ಸುಖವದ ಬಿಡುತ ಯೋಗಿಯೆ ದುಃಖ। ಭಾವದಿ ಮೋಕ್ಷವ ಬಿಡುವೆ ॥೧೪೬॥

ಉ :—ಭೇದಾಭೇದ ರತ್ನತ್ರಯಭಾವನೆಯಿಲ್ಲದ ಮಾನವಜನ್ಮವು ನಿಸ್ಸಾರವೆಂದು ಹೇಳುವರು:—

ತಲೆಯನು ಮೇಲೆತ್ತಿನೋಡಲು ಮೋಕ್ಷದ । ಕಲೆಯು ಲೋಕಾಗ್ರದೊಳಿಹುದು ॥
ತಲೆತಗ್ಗಿಸಿ ನೋಡೆ ನರಕಾದಿ ದುಃಖದ । ನೆಲೆಯುರಿಯುದ ಕೂಪವದು ॥೧೪೭॥

ಮಾನವದೇಹವ ಸುಟ್ಟರೆ ಕ್ಷಾರವು । ತನುವದ ಹೂಳಲು ಕೊಳಕು ॥
ಮಾನವತೆಯ ಪೊಂದಿ ಪರವನು ಬಿಟ್ಟು । ಆನಂದಾತ್ಮನ ಪಡೆಯೈ ॥೧೪೭*೧॥

ಉ :—ದೇಹದ ಅನಿತ್ಯತ್ವ, ಅಶುಚಿತ್ವಾದಿಗಳ ಪ್ರತಿಪಾದನರೂಪದ ವ್ಯಾಖ್ಯಾನವನ್ನು ಮಾಡುವರು:—

ಬಡದೇಹವನುರೆ ತೊಳೆಯೆ ತೈಲವಹಚ್ಚಿ । ಬಿಡದೆ ಶೃಂಗಾರವಮಾಡೆ ॥
ಅಡಿಗಡಿಗಮೃತಾನ್ನವನಿತ್ತು ಸಲಹಲು । ಕಡೆಗೆ ನಿರರ್ಥಕವಹುದು ॥೧೪೮॥

ದುರ್ಜನಸೇವೆಯಿಂದಪಕಾರಪಡೆವಂತೆ । ಭಜಿಸಲು ದೇಹವು ತಾನು ॥
ತ್ಯಜಿಸುವ ಮಲಮೂತ್ರವ ಕೊಡುತಿರ್ಪುದು । ತ್ಯಜಿಸುತ ಸುಖವ ಪೊಂದುವುದು ॥೧೪೮*೧॥

ಉ :—ಅದನ್ನೇ ಹೇಳುವರು:—

ನರಕಕೆ ನೂರಾರು ಛಿದ್ರಗಳಿರ್ಪಂತೆ । ನರದೇಹದಿ ಛಿದ್ರವಿಹುವು ॥
ಪರಿಪರಿ ಮಲಮೂತ್ರವದರೊಳು ಸುರಿಯುತ । ಲಿರುವುದರೊಳು ಪ್ರೀತಿಯೇಕೆ ॥೧೪೯॥

ಉ :—ಅದನ್ನೇ ಹೇಳುವರು:—

ಮೂರುಲೋಕದ ಪಾಪದಶುಚಿಯೆಲ್ಲವ ತಂದು । ಸೇರಿಸಿ ಮಾಡಿದ ಬ್ರಹ್ಮ ॥
ಸಾರವಲ್ಲದ ದೇಹವನೆಂದು ನೆನೆಯುತ । ನೇರದಿ ತಿಳಿಯೆಲೆ ಯೋಗಿ ॥೧೫೦॥

ಉ :—ಪುನಃ ಅದನ್ನೇ ಹೇಳುವರು:—

ನಿರ್ಮಲನಾತ್ಮನ ಧರ್ಮದಿ ಪಡೆಯದೆ । ದುರ್ಮನದಿಂದ ದೇಹವನು ॥
ಮರ್ಮವನರಿಯದೆ ಹೇಸಿಕೆಯದನೆಂತು । ಕರ್ಮವ ಸೇವಿಸುತಿರುವೆ ॥೧೫೧॥

ಉ :—ಅದನ್ನೇ ಹೇಳುವರು:—

ಜ್ಞಾನಾದಿಗುಣಗಳ ಆತ್ಮನನೋಡದೆ । ಹೀನದೇಹವೆ ನನ್ನದೆಂದು ॥
ಆನಂದಿಸದಿರು ದೇಹದಿಂ ಭಿನ್ನನೆಂ । ಬಾನಂದದಿ ನೋಡಾತ್ಮನನು ॥೧೫೨॥

ಉ :—ಅದನ್ನೇ ಹೇಳುವರು:—

ದುಃಖಕಾರಣವೆಂದು ಮನದೊಳು ಭಾವಿಸಿ । ಕಕ್ಕುಲಿತೆಯ ದೇಹದೊಳು ॥
ಮಿಕ್ಕುಮಾಡುವ ಮಮತೆಯ ಬಿಟ್ಟು ಆತ್ಮನ । ದಿಕ್ಕಿನೊಳಿರು ಜೀವ ನೀನು ॥೧೫೩॥

ಉ :—ಆತ್ಮಾಯತ್ತಸುಖದಲ್ಲೇ ರತಿಮಾಡೆಂದು ಹೇಳುವರು:—

ಆತ್ಮಾಯತ್ತದ ಸುಖದೊಳಗಿರುತಿರ್ದು । ಸ್ವಾತ್ಮನ ಸಂತೋಷದಿಂದ ॥
ಆತ್ಮಾನುಭವದಿಂದ ಸೇವಿಸಿ ಪರವಳಿ । ದಾತ್ಮನ ಪೊಂದೆಲೆಯೋಗಿ ॥೧೫೪॥

ಉ :—ಆತ್ಮನ ಜ್ಞಾನಸ್ವಭಾವವನ್ನು ಹೇಳುವರು:—

ಪರವಸ್ತುವಿನ ರಾಗವ ಪರಿತ್ಯಜಿಸುತ । ನಿರುತವು ಜ್ಞಾನರೂಪೆಂದು ॥
ಪರಮಾತ್ಮನಿರವನು ನಿಜಭಾವದಿಂದಲಿ । ನಿರುತವು ತಿಳಿಯೆಲೆ ಯೋಗಿ ॥೧೫೫॥

ಉ :—ಸ್ವಾತ್ಮೋಪಲಂಭನಿಮಿತ್ತವಾಗಿ ಚಿತ್ತಸ್ಥಿರೀಕರಣರೂಪದ ಪರಮೋಪದೇಶ
ವನ್ನು ಐದು ಕಲೆಗಳಲ್ಲಿ ಹೇಳುವರು:—

ಮನವೆಂಬ ಜಲಕೆ ವಿಷಯದ ಕಷಾಯದ । ಅನುಪಮವಾಯುವಲ್ಲದಿರೆ ॥
ತನುಜನೆ ಕೇಳಾತ್ಮನ ನಿರ್ಮಲನಪ್ರೊಂದಿ । ಸನುಮತಸುಖವ ಪಡೆವನು ॥೧೫೬॥

ಉ :—ಅದನ್ನೇ ಹೇಳುವರು:—

ಮನವನು ಯತ್ನದಿ ವಶಗೈದು ಯೋಗದಿ । ಅನುಪಮಾತ್ಮನೊಳ್ಸೆರೆಗೆಯ್ದು ॥
ತನುವನು ಮರೆಯುದಲಿಹ ಯೋಗದಿಂದಲಿ । ತನುಜ ಪೇಳದರಿಂದ ಫಲವೆ? ॥೧೫೭॥

ಉ :—ಅದನ್ನೇ ಹೇಳುವರು:—

ಅಜ್ಞಾನವಿಜೃಂಭಿತ ಪರಿಣತಿಯಿಂದ । ಸುಜ್ಞಾನಪ್ರಾಪ್ತಿಯುದೆಂತು ? ॥
ವಿಜ್ಞಾನನಾತ್ಮನನಂತ ಗುಣಾಢ್ಯನ । ಅಜ್ಞತೆಯಿಲ್ಲದೆ ಭಜಿಸು ॥೧೫೮॥

ಉ : —ಅದನ್ನೇ ಹೇಳುವರು:—

ಸಮರಸಭಾವದಿ ಪುಣ್ಯಪಾಪವ ಬಿಟ್ಟು । ಮಮತೆಯಿಲ್ಲದ ಶೂನ್ಯಪದವ ॥
ಅಮಿತಾನಂದವ ಪಡೆಯುತ ಯೋಗದಿ । ಅಮಲಾತ್ಮಗೆ ನಮಿಸುವುದು ॥೧೫೯॥

ಉ :—ಅದನ್ನೇ ಹೇಳುವರು:—

ಹಿಂದೆಂದು ಪಡೆಯದ ಸ್ವಸಂವೇದನದಿಂದ । ಬಂಧಿಸಿ ಮಿಥ್ಯಾತ್ವವನು ॥
ಅಂದಗೆಡಿಪ ಯೋಗಿಜನರನಾಂ ಪೂಜಿಸಿ । ಸಂಧಿಪೆನಾತ್ಮಭಾವನೆಯ ॥೧೬೦॥

ಉ :—ಶಿಷ್ಯನ ಪ್ರಶ್ನೆಯ ಒಂದು ದೋಹೆಗೆ ಆಚಾರ್ಯರು ನಾಲ್ಕು ದೋಹೆಗಳಲ್ಲಿ
ವಿಸ್ತಾರರೂಪದಿಂದ ಉತ್ತರಕೊಡುತ್ತ ನಿರ್ವಿಕಲ್ಪ ಸಮಾಧಿರೂಪವಾದ ಪರ
ಮೋಪದೇಶವನ್ನು ಮಾಡುವರು:—

ಸ್ಥಿರತೆಯಿಂ ಮನವಿದ್ದು ನಿರುತವಾದಾತ್ಮನೊ । ಉರುತರ ಚಲಿಸದತೆರದಿ ॥
ಪರಿಪರಿದೇವರ ಜಪಿಸದಲಾತ್ಮನೊ । ಇರುವತೆರನಪೇಳು ಗುರುವೆ? ॥೧೬೧॥

ಉ :—ಈ ಪ್ರಶ್ನೆಗೆ ಉತ್ತರ ಹೇಳುವರು:—

ನಾಸವಿನಿರ್ಗತಶ್ವಾಸಪಂಬರದೊಳು । ವಾಸಿಸುವಂತೆ ಕಟ್ಟಿದರೆ ॥
ಆಸೆ ಮೋಹಾದಿಗಳಳಿಯುತ ಮನವದು । ಲೇಸಾಗಿ ತನ್ನೊಳಗಿಹುದು ॥೧೬೨॥

ಉ :—ಅದನ್ನೆ ಹೇಳುವರು:—

ಪರಮಸಮಾಧಿಯೊಳಿಹ ಯೋಗಿಜನರಿಗೆ । ವರಮೋಹನವಳಿದಾಗ ಮನವು ॥
ಸುರುಚಿರಾತ್ಮನೊಳಡಗುತಲುಸಿರದುನಿಂತು। ಪರಮ ಕೇವಲಜ್ಞಾನವಹುದು ॥೧೬೩॥

ಉ:—ಅದನ್ನೇ ಹೇಳುವರು:—

ಲೋಕಾಲೋಕ ಪ್ರಮಾಣವ ವ್ಯಾಪಿಸಿ । ಆಕಾಶದಗಲದಿ ಹಬ್ಬಿ ॥
ತೂಕದಯೋಗಿಗೆ ಮೋಹವದಿಲ್ಲವು । ವ್ಯಾಕುಲವಳಿವನು ಮುಂದೆ ॥೧೬೪॥

ಉ :—ಶಿಷ್ಯನ ಅರಿಕೆ:—

ಸ್ವಾಮಿಯೆ ದೇಹದೊಳಿಹ ದೇವನನಾನು । ನಮಿಸದೆ ಭ್ರಾಂತಿಯುಲಿರ್ದೆ ॥
ಸಮರಸದಂಬರದಂತಿರ್ಪ ದೇವನ । ನಮಿಸುತ ಸುಖವ ಪೊಂದುವೆನು ॥೧೬೫॥

ಉ :—ಭಾವಸಹಿತನಾಗಿ ಸಮಸ್ತ ಪರಿಗ್ರಹಗಳ ತ್ಯಾಗದಿಂದ ಸಂಸಾರವಿಚ್ಛೇದವಾಗುವುದೆಂಬ ಪರಮೋಪದೇಶವನ್ನು ಗುರುವು ಎರಡು ದೋಹೆಗಳಲ್ಲಿ ಹೇಳುವರು:—

ಸಕಲಸಂಗದೊಳಿದ್ದು ಸಮಭಾವಪೊಂದದೆ । ಸಕಲ ಮೋಹದೊಳಿಹ ಯೋಗಿ ॥
ಪ್ರಕಟದಿ ಶಿವಮಾರ್ಗವನರಿಯದೆ ತಾನು । ಸಕಲದುಃಖವನೆಂತು ಕಳೆವ ॥೧೬೬॥

ಘೋರ ತಪಶ್ಚರಣವಮಾಡದೆ ತಾನು । ಅರುಚಿಯ ಪುಣ್ಯಪಾಪವನು ॥
ಸಾರವಜಿನವರನುಪದೇಶದಿ ಸಂ । ಸಾರದ ಪುಣ್ಯಪಾಪವನು ॥ ॥೧೬೭॥

ಸಾರಿದ ಪುಣ್ಯಪಾಪಗಳನು ಕೆಡಿಸುತ । ಸೇರಿ ತನ್ನಾತ್ಮರೂಪಿನೊಳು
ಘೋರ ತಪಶ್ಚರಣದಿ ಭಸ್ಮಮಾಡದೆ । ಸಾರಲು ಕೆಡದು ಸಂಸಾರ ॥೧೬೭*೧॥

ಉ :—ದಾನ, ಪೂಜೆ, ಪಂಚಪರಮೇಷ್ಠಿವಂದನೆ ಮೊದಲಾದವು ಪರಂಪರೆಯಾಗಿ ಮುಕ್ತಿಗೆ ಕಾರಣವೆಂದು ಶ್ರಾವಕಧರ್ಮವನ್ನು ಹೇಳುವರು:—

ಮುನಿವರದಾನವು ಜಿನನಾಥಪೂಜೆಯು । ಜಿನುಮುಯರೈವರ ನುತಿಯ ॥
ಮನದರ್ಥಿಯಿಂದಲಿಮಾಡದ ನರನಿಗೆ । ಜಿನುಮುಯಪದಲಾಭವೆಂತು ? ॥೧೬೮॥

ಉ :—ಚಿಂತೆಯಿಲ್ಲದ ಧ್ಯಾನವೇ ನಿಶ್ಚಯದಿಂದ ಮುಕ್ತಿಕಾರಣವೆಂಬ ನಾಲ್ಕು ದೋಹೆಗಳನ್ನು ಹೇಳುವರು:—

ಅರ್ಧೋನ್ಮೀಲಿತಲೋಚನದಿಂದಲಿ । ಸ್ಪರ್ಧೆಯಿಂದಲಿ ಕಣ್ಣುಮುಚ್ಚಿ ॥
ಇರ್ದಯೋಗದಲಿರೆ ಚಿಂತೆಯುಳಿಯದಿರೆ । ಶುದ್ಧದ ಪರಗತಿಯಿಲ್ಲ ॥೧೬೯॥

ಉ :—ಅದನ್ನೇ ಹೇಳುವರು:—

ಚಿಂತೆಯುಬಿಟ್ಟಾಗ ಸಂಸಾರವಳಿವುದು । ಚಿಂತಾಸಕ್ತನಾಗಿರಲು ॥
ಕಂತುವಿಜಯರಿಗು ಛದ್ಮಸ್ಥಕಾಲದಿ । ಚಿಂತಿತಾರ್ಥವು ಸಿಕ್ಕಲಿಲ್ಲ ॥೧೭೦॥

ಉ :—ಅದನ್ನೇ ಹೇಳುವರು:—

ಭವಕಾರಣವಹ ವ್ಯವಹಾರಮತಿಯಿಂದ । ಅವಲಂಬಿತಮಾಯೆಯಿಂದ ॥
ವಿವಿಧ ವಿಕಲ್ಪಜಾಲದ ಮನವನು ಕಟ್ಟಿ । ಅನಘರಿಪುದು ಶುದ್ಧಾತ್ಮನನು ॥೧೭೧॥

ಉ :—ಅದನ್ನೇ ಹೇಳುವರು:—

ರಸಮಾರುರೂಪವೈದರೊಳಗೆ ರಾಗವ । ನಸಮಾನದಿಂದಲಿ ತೊಳೆದು ॥
ಅಸಮನನಂತಗುಣದ ಶುದ್ಧಾತ್ಮನ । ಸ್ವಸಮಯದಿಂದ ಸೇವಿಪುದು ॥೧೭೨॥

ಉ:—ಪರಮಾತ್ಮನನ್ನು ಯಾವ ರೂಪದಿಂದ ಸೇವಿಸಿದರೆ ಅದೇ ರೂಪವನ್ನು ತಾನು ಪಡೆಯುತ್ತಾನೆಂದು ಹೇಳುವರು:—

ಸ್ಫಟಿಕಮಣಿಯು ಬಳಿಯಿರುವ ಬಣ್ಣದ ತೆರ । ಸ್ಫುಟದಿ ಕಾಣುವ ತೆರದಂತೆ ॥
ಸ್ಫುಟದ ಪರಾತ್ಮನನೆಂತು ನೋಡಿದೊಡಂತು । ದಿಟದಿ ಕಾಣುವನೆಂದರಿಯೈ ॥೧೭೩॥

ಉ:—ಚತುಷ್ಪದ ಛಂದದಲ್ಲಿ ಹೇಳುವರು:—

ಇಂತಿಹನಾತ್ಮಪರಾತ್ಮಕರ್ಮದಿ ಸಿಕ್ಕಿ । ಭ್ರಾಂತಿಯಿಂ ಪರದಧೀನದಲಿ ॥
ಸಂತತ ತಿರುಗುವುದನು ತೊರೆದೊಳಗಡೆ । ಚಿಂತಿಸಲಾತ್ಮಗೆ ಸುಖವು ॥೧೭೪॥

ಉ:—ಅದೇ ಅರ್ಥವನ್ನು ಹೇಳುವರು:—

ಜ್ಞಾನಮಯಾತ್ಮನನಂತದೇವನು ನಾನು । ನಾನೇ ಪರಮಾತ್ಮನೆಂದು ॥
ಸಾನಂದದಿಂದ ನಿರ್ಭ್ರಾಂತದಿಂಭಾವಿಸೆ । ಜ್ಞಾನಸ್ವರೂಪನಾಗುವನು ॥೧೭೫॥

ಉ:—ಇದೇ ಅರ್ಥವನ್ನು ದೃಷ್ಟಾಂತ ದಾರ್ಷ್ಟಾಂತಗಳಿಂದ ಹೇಳುವರು:—

ಪರಕೃತಭಾವದಿ ನಿರ್ಮಲಸ್ಫಟಿಕವು । ಪರಿಪರಿ ಭಿನ್ನವರ್ಣದಲಿ ॥
ಮೆರೆವಂತೆ ಪರಮಾತ್ಮ ಕರ್ಮಸ್ವಭಾವದಿ । ಇರುತಿಹ ಸಂಸಾರದಲಿ ॥೧೭೬॥

ಉ:—ದೇಹ, ಆತ್ಮರು ಬೇರೆ ಬೇರೆಯೆಂದು ಹೇಳುವರು:—

ಸ್ಫಟಿಕದ ಮಣಿಯುಸ್ವಭಾವ ನಿರ್ಮಲವಂತು । ಸ್ಫುಟವಾದಾತ್ಮನಿರ್ಮಲನು ॥
ದಿಟದಿನೋಡುತ ಕಾಯಮಲಿನವಾಗಿಹುದಂತು । ಸಟೆಯಿಂದಾತ್ಮನ
ನೋಡಬೇಡ ॥೧೭೭॥

ಉ:—ಪೂರ್ವೋಕ್ತ ಭೇದಭಾವನೆಯನ್ನು ರಕ್ತಾದಿವಸ್ತ್ರ ದೃಷ್ಟಾಂತದಿಂದ ತೋರಿಸುವರು:—

ಕೆಂಪಿನೊಳದ್ದಿದ ವಸ್ತ್ರವ ವಿಬುಧರು । ಕೆಂಪುವಸ್ತ್ರದ ಭಾವವೆಂದು ॥
ಇಂಪಿನಿಂ ತಿಳಿಯದಿಹರು ಅದರಂತೆಯೆ । ಕೆಂಪಿನದೇಹವಲ್ಲಾತ್ಮ ॥೧೭೮॥

ಹರಿದ ವಸ್ತ್ರವನೋಡಿ ಜೀರ್ಣವು ವಸ್ತ್ರದ । ಪರಿಯೆಂದು ಬುಧರು ತಿಳಿಯರು ॥
ಜರುಗುತಲಿಹದೇಹವನೋಡಿ ಆತ್ಮನು । ಜರುಗಿದನೆನ್ನರು ಬುಧರು ॥೧೭೯॥

ಕಳೆದ ವಸ್ತ್ರವನೋಡಿ ವಸ್ತ್ರವು ಕಳೆದೊಡೆ । ಕಳೆಯುದು ದೇಹವೆನ್ನುವರು ॥
ಅಳಿದದೇಹವ ಕಂಡು ಆತ್ಮನಳಿದನೆಂದು । ತಿಳಿಯುವುದಿಲ್ಲ ವಿಬುಧರು ॥೧೮೦॥

ಅದರಂತೆ ವಿಬುಧರು ದೇಹವನಾತ್ಮನೆಂ । ದದನಭೇದದಲಿನೋಡದೆಯೆ ॥
ಅದು ಬೇರೆ ಜೀವಬೇರೆನ್ನುತ ತಿಳಿವರು । ಪದುಳ ಚಿತ್ತದಲಿ ಕೋವಿದರು ॥೧೮೧॥

ಉ:—ದುಃಖವನ್ನುಂಟುಮಾಡುವ ದೇಹವನ್ನು ಶತ್ರುವೆಂದು ತಿಳಿಯದೆ ಅದೇಕೆ ಮಿತ್ರನಂತೆ ತಿಳಿಯುವೆ ಎಂದು ಹೇಳುವರು:—

ಶತ್ರುವಿನಂದದಿ ದುಃಖವನಮಾಡುವ । ಶತ್ರುವ ಮಿತ್ರನಂತೆಣಿಸೆ ॥
ಶತ್ರುವು ಹಿಂಸೆಗಾಕರವದರಂತೆಂದು । ಶತ್ರುವೆಂದರಿಯೈ ದೇಹವನು ॥೧೮೨॥

ಉ:—ಉದಯಕ್ಕೆ ಬಂದ ಪೂರ್ವೋಪಾರ್ಜಿತ ಕರ್ಮವನ್ನು ಧೀರತ್ವದಿಂದ ಸಹಿಸೆಂದು ಹೇಳುವರು:—

ತಪದಿಂದ ಕರ್ಮವನುದಯಕೆತಂದದ । ತಪಿಸುತ ಕಳೆಯಬೇಕಹುದು ॥
ತಪಿಸದೆ ಕರ್ಮೋದಯವಾಗೆ ಕ್ಷಮಿಸುವು । ದಪರಿಮಿತಾನಂದವಲಾ ॥೧೮೩॥

ಉ:—ಒಬ್ಬನು ಕಠೋರವಚನವನ್ನಾಡಲು ಬಂದರೆ ಬದಲಾಗಿ ನಿನ್ನಲ್ಲಿರುವ ಕಷಾಯಭಾವವನ್ನು ತಡೆಗಟ್ಟಲು ಆತ್ಮತತ್ವಭಾವನೆಯಲ್ಲಿದ್ದು ಬೈಗಳನ್ನು ಕೇಳುತ್ತಿರು ಎನ್ನುವರು:—

ನಿಷ್ಠುರ ವಚನವ ಕೇಳಿ ಸಹಿಸದಿರೆ । ಎಷ್ಟುಮಾತ್ರಕು ಶಾಂತಿಯಿಲ್ಲ ॥
ಅಷ್ಟನು ಕೇಳುತಲಾತ್ಮನೊಳ್ರತನಾಗು । ಶ್ರೇಷ್ಠನೆಂದೆನಿಸೆಲೆಯೋಗಿ ॥೧೮೪॥

ಉ:—ಜೀವನು ಕರ್ಮವಶದಿಂದ ಭಿನ್ನಭಿನ್ನ ಜಾತಿಯ ಸ್ವರೂಪನಾಗುತ್ತಾನೆಂದು ಹೇಳುವರು:—

ವಿಲಕ್ಷಣಸಹ ವರ್ಣ ಕರ್ಮದುದಯದಿಂ । ಸಲಕ್ಷಣದಾತ್ಮನಿಗಹುದು ॥
ಸುಲಲಿತವಾತ್ಮರೂಪಿನೊಳಿರೆ ವರ್ಣಗ । ಳಳಿಯುತ ಭವನಾಶವಹುದು ॥೧೮೫॥

ಉ:—ಪರರದೋಷಗ್ರಹಣದಿಂದ ಕೋಪಿಯಾಗದೆ ಕ್ಷಮೆಮಾಡು ಎಂದು ಹೇಳುವರು:—

ನಿನ್ನಯ ದೋಷಗ್ರಹಣೆಯಿಂದಲೊಬ್ಬನು । ತನ್ನೊಳು ಸಂತೋಷಪಡಲು ॥
ಅನ್ನಿಗನಿಗೆ ಸಂತೋಷವಹುದನೇಕೆ । ಖಿನ್ನತೆಯೊಳಗೆ ತಡೆಯುವೆ ॥೧೮೫॥

ಉ:—ಸರ್ವಚಿಂತೆಗಳನ್ನೂ ನಿಷೇಧಿಸುವರು:—

ಯೋಗಿಯೆ ದುಃಖದಿ ಚಿಂತೆಯದೇತಕೆ । ರಾಗವಳಿದಲಿಲ್ಪಶಲ್ಯ ॥
ಬೇಗದೊಳೆಳ್ಳಿನ ಹೊಟ್ಟನಷ್ಟಿದ್ದರು । ವೇಗದಿ ಕಳೆವುದುಸುಖವ ॥೧೮೭॥

ಉ:—ಮೋಕ್ಷದ ಚಿಂತೆಯೂ ಬೇಡ ಎಂದು ಹೇಳುವರು:—

ಚಿಂತಿಸೆ ಮೋಕ್ಷವಾಗದ ಕಾರಣದಿಂದ । ಚಿಂತಿಪಿ ಮೋಕ್ಷವಡೆವೆನೆಂ ॥
ಬಂತರವಿಡಿದು ಚಿಂತೆಯಬಿಡು ಜೀವನೆ । ಚಿಂತೆಯಳಿಯೆ ಮೋಕ್ಷವಹುದು ॥೧೮೮॥

ಉ:—ಇಪ್ಪತ್ತಾಲ್ಕು ಸೂತ್ರಪ್ರಮಿತ ಮಹಾಸ್ಥಲ ಮಧ್ಯದಲ್ಲಿ ಪರಮಸಮಾಧಿ ವ್ಯಾಖ್ಯಾನದ ಮುಖ್ಯತ್ವದ ಆರು ಸೂತ್ರಗಳ ಅಂತರಸ್ಥಲವನ್ನು ಹೇಳುವರು:—

ಪರಮಸಮಾಧಿ ಮಹಾಸರಸಿಯಹೊಕ್ಕು । ಪರಿಪರಿ ಮಜ್ಜನಗೈಯ್ಯೆ ॥
ಪರಭವವಿಲ್ಲದೆ ಭವಮಲವಳಿಯುತ । ಪರಮಾತ್ಮನೊಳಿರುತಿಹನು ॥೧೮೯॥

ಉ :--ಅದನ್ನೇ ಹೇಳುವರು:--

ಸಕಲವಿಕಲ್ಪಗಳೆಲ್ಲವ ಕಳೆಯುತ । ವಿಕಲವಲ್ಲದ ಸಮಾಧಿಯಲಿ ॥
ಸಕಲ ಶುಭಾಶುಭಭಾವವತ್ಯಜಿಸುತ । ಸಕಲಾತ್ಮನ ಪೊಂದುವನು ॥೧೯೦॥

ಉ :—ಅದನ್ನೇ ಹೇಳುವರು:--

ಸಕಲ ವಿಕಲ್ಪವಿಲಯವಾಗೆ ಪರಮನ । ಪ್ರಕಟ ಸಮಾಧಿಯೆನ್ನುವರು ॥
ವಿಕಲ ಶುಭಾಶುಭವೆಲ್ಲವನಳಿಯುತ । ಅಕಲಂಕ ಗುಣದೊಳಿರುವನು ॥೧೯೧॥

ಉ :—ಅದನ್ನೇ ಹೇಳುವರು:--

ವಿಷಯಕಷಾಯವ ಬುಡಮುಟ್ಟೆ ಕಳೆಯದೆ । ಅಸಮಸಮಾಧಿಯಲ್ಲಿಲ್ಲ ॥
ವಶಗೈದು ಚಿತ್ತವನಾತ್ಮಸಮಾಧಿಯೊ । ಳೆಸೆಯುತಲಿರುವುದು ಯೋಗಿ ॥೧೯೨॥

ಉ :—ಅದನ್ನೇ ಹೇಳುವರು:--

ಪರಮಸಮಾಧಿಯ ಧರಿಸಿರ್ದು ಪರಬ್ರಹ್ಮ । ನಿರವನರಿಯದಿರ್ಪಯೋಗಿ ॥
ಪರಿಶುದ್ಧ ಬಹುವಿಧ ಧ್ಯಾನವಪೊಂದದೆ । ನರಕಾದಿ ದುಃಖವನುಣುವ ॥೧೯೩॥

ಉ :—ಅದನ್ನೇ ಹೇಳುವರು:--

ಸಕಲ ಶುಭಾಶುಭ ಭಾವವನಳಿಯದೆ । ವಿಕಲರಾಗಾದಿಯೊಳಿರಲು ॥
ಪ್ರಕಟದ ಪರಮಸಮಾಧಿಯಲ್ಲಿಲ್ಲವೆಂ । ದಕಲಂಕಜಿನನು ಪೇಳಿಹನು ॥೧೯೪॥

ಉ :—ಮುಂದೆ ಮೂರು ದೋಹಗಳಲ್ಲಿ ಅರ್ಹತ್ವದವನ್ನು ; ಅರ್ಹತ್ವದ, ಭಾವಮೋಕ್ಷ, ಜೀವನ್ಮೋಕ್ಷ, ಕೇವಲಜ್ಞಾನೋದಯ ಮೊದಲಾದ ಹೆಸರುಗಳಿಂದ ಕರೆದರೂ ಅವೆಲ್ಲ ಏಕಾರ್ಥವಾಚಿಯಾದ ಶಬ್ದಗಳೆಂಬುದನ್ನು ಹೇಳುವರು:--

ಕರ್ಮಚತುಷ್ಟಯಲಯವಾಗಲಾತ್ಮನು । ನಿರ್ಮಲಶಿವಮಯನಹನು ॥
ಸ್ವರ್ಮೋಕ್ಷಪತಿಯವ ಸಕಲವಿಕಲ್ಪವ । ನಿರ್ಮೂಲಮಾಡುವನವನು ॥೧೯೫॥

ಉ :--ಕೇವಲಜ್ಞಾನದ ಮಹಿಮೆಯನ್ನು ಹೇಳುವರು:--

ಕೇವಲಜ್ಞಾನದೊಳಾವಾಗಲು ದೇವ । ತೀವಿದ ಲೋಕಾಲೋಕಗಳ ॥
ಸುವಿಮಲ ಪರಮಾನಂದಮಯಾತ್ಮನು । ಪ್ರವಿಮಲಾರ್ಹಂತತಾನರಿವ ॥೧೯೬॥

ಉ :—ಅದನ್ನೇ ಹೇಳುವರು:--

ಪರಮಾನಂದಸ್ವಭಾವನು ಜಿನದೇವ । ಪರಮಪರನು ಪರಮಾತ್ಮ ॥
ಪರಮ ಕೇವಲಜ್ಞಾನಮಯನಾದಾತ್ಮನು । ಪರಮಸ್ವಭಾವದೊಳಿಹನು ॥೧೯೭॥

ಉ :—ಹೀಗೆ ಇಪ್ಪತ್ನಾಲ್ಕು ದೋಹೆಗಳ ಮಹಾಸ್ಥಲದಲ್ಲಿ ಅರ್ಹದ್ದೇವನ ಕಥನದ ಮುಖ್ಯತೆಯ ಮೂರು ದೋಹೆಗಳಲ್ಲಿ ಎರಡನೆ ಅಂತರಸ್ಥಲವನ್ನು ಹೇಳಿದರು. ಮುಂದೆ ಪರಮಾತ್ಮಪ್ರಕಾಶ ಶಬ್ದದ ಅರ್ಥದ ಕಥನದ ಮುಖ್ಯತೆಯಿಂದ ಮೂರು ದೋಹೆಗಳನ್ನು ಹೇಳುವರು:--

ಎಂಟು ಕರ್ಮಕೆ ಹದಿನೆಂಟು ದೋಷಗಳಿಗೆ । ಅಂಟದಲಿಹ ಜಿನದೇವ ॥
ಎಂಟುಗುಣದ ಪರಮಾತ್ಮಪ್ರಕಾಶನ । ನೆಂಟನೆಂದರಿವುದು ಯೋಗಿ ॥೧೯೮॥

ಉ :—ಅದನ್ನೇ ಹೇಳುವರು:—

ಕೇವಲಜ್ಞಾನದರ್ಶನ ಸುಖವೀರ್ಯನ । ಭಾವಿಸನಂತಗುಣಗಳ ॥
ಕೇವಲಿಜಿನ ಪರಮಾತ್ಮಪ್ರಕಾಶದೊ । ಳಾವಾಗಲಿರುವನೆಂದರಿಯೈ ॥೧೯೯॥

ಉ :—ಜಿನದೇವನಿಗೆ ಅನೇಕ ಹೆಸರುಗಳಿವೆಯೆಂದು ಹೇಳುವರು:—

ಪರಮಪ್ರಕಾಶನು ಬುದ್ಧ ಮಹಾದೇವ । ಹರಿಬ್ರಹ್ಮರೆನ್ನುತ ಜಿನನ ॥
ಪರಮಾತ್ಮದೇವನ ಪರಿಪರಿ ಪೆಸರಿನಿಂ । ಕರೆವರು ಮುನಿವರರೆಲ್ಲ ॥೨೦೦॥

ಉ :—ಹೀಗೆ ಇಪ್ಪತ್ನಾಲ್ಕು ದೋಹೆಗಳ ಮಹಾಸ್ಥಲದಲ್ಲಿ ಪರಮಾತ್ಮ ಪ್ರಕಾಶಶಬ್ದದ ಅರ್ಥದ ಮುಖ್ಯತೆಯಿಂದ ಮೂರು ದೋಹೆಗಳಲ್ಲಿ ಮೂರನೆಯ ಅಂತರಸ್ಥಲವನ್ನು ಹೇಳಿದರು. ಮುಂದೆ ಸಿದ್ಧಸ್ವರೂಪದ ಕಥನದ ಮುಖ್ಯತೆಯಿಂದ ಮೂರು ದೋಹೆಗಳ ವ್ಯಾಖ್ಯಾನಮಾಡುವರು:—

ಧ್ಯಾನದ ಬಲದಿಂದ ಕರ್ಮಕ್ಷಯವಮಾಡಿ । ಸಾನಂದ ಮೋಕ್ಷವ ಪೊಂದಿ ॥
ಜಿನವರದೇವನನಂತಕಾಲವು ಸಿದ್ಧ । ರನುಪಮಗೋಷ್ಠಿಯೊಳಿಹನು ॥೨೦೧॥

ಉ :—ಅದನ್ನೇ ಹೇಳುವರು:—

ತ್ರಿಭುವನ ಜನರಿಗೆ ಬಂಧುವಾಗಿರುತಿರ್ಪ । ಅಭವನು ಶಾಶ್ವತಸುಖದ ॥
ವಿಭವದಿ ಲಬ್ಧಸ್ವಭಾವದಿಂದೊಡಗೂಡಿ । ಅಭವನು ಸಿದ್ಧನಾಗಿಹನು ॥೨೦೨॥

ಉ :—ಅದನ್ನೇ ಹೇಳುವರು:—

ಜನನಮರಣ ವಿವರ್ಜಿತರು ಚತುರ್ಗತಿ । ಜನಿತ ದುಃಖಗಳಿಲ್ಲದವರು ॥
ಚಿನುಮಯ ಕೇವಲಜ್ಞಾನದರ್ಶನಮಯ । ರನುದಿನ ಮುಕ್ತಿಯೊಳಿಹರು ॥೨೦೩॥

ಉ :—ಹೀಗೆ ಇಪ್ಪತ್ನಾಲ್ಕು ದೋಹೆಗಳ ಮಹಾಸ್ಥಲದಲ್ಲಿ ಸಿದ್ಧಪರಮೇಷ್ಠಿಗಳ ವ್ಯಾಖ್ಯಾನದ ಮುಖ್ಯತೆಯಿಂದ ಮೂರು ದೋಹೆಗಳಲ್ಲಿ ನಾಲ್ಕನೆಯ ಅಂತರಸ್ಥಲವನ್ನು ಹೇಳಿದರು. ಮುಂದೆ ಮೂರು ದೋಹೆಗಳಲ್ಲಿ ಪರಮಾತ್ಮಪ್ರಕಾಶದ ಭಾವನೆಯಲ್ಲಿ ಲೀನರಾದ ಪುರುಷರಿಗೆ ಫಲವನ್ನು ತೋರಿಸುತ್ತ ವ್ಯಾಖ್ಯಾನಮಾಡುವರು:—

ಮುನಿಯುಭಾವಿಸಿ ಪರಮಾತ್ಮಪ್ರಕಾಶದ । ಅನುಪಮಶಾಸ್ತ್ರವ ಜಪಿಸಿ ॥
ಸನುಮತದಿಂದ ಸಕಲ ಮೋಹವಳಿಯುತ । ಚಿನುಮಯ ಪರಮಾರ್ಥವರಿವ ॥೨೦೪॥

ಉ :—ಅದನ್ನೇ ಹೇಳುವರು:—

ಲೋಕಾಲೋಕಪ್ರಕಾಶಕಾಕರವಹ । ತೂಕದ ಪರಮಾತ್ಮನನು ॥
ವ್ಯಾಕುಲವಿಲ್ಲದೆ ಬೆಳಕನುತೋರುವ । ಈ ಕಾವ್ಯವನೋದುವುದು ॥೨೦೫॥

ಜಪಿಸಿತಪದಿ ಪರಮಾತ್ಮಪ್ರಕಾಶವ । ಅಪರಿಮಿತದ ಭಕ್ತಿಭರದಿ ॥
ಉಪಮೆಯಿಲ್ಲದ ಸುಖವನು ಪಡೆಯುತಲಿಹು । ದಪರಿಮಿತಾನಂದದಲಿ ॥೨೦೬॥

ಉ:—ಹೀಗೆ ಇಪ್ಪತ್ನಾಲ್ಕು ದೋಹೆಗಳ ಮಹಾಸ್ಥಲದಲ್ಲಿ ಪರಮಾತ್ಮಪ್ರಕಾಶದ ಭಾವನೆಯ ಫಲದ ಕಥನದ ಮುಖ್ಯತೆಯಿಂದ ಮೂರು ದೋಹೆಗಳಲ್ಲಿ ಐದನೆಯ ಅಂತರಸ್ಥಲವನ್ನು ಹೇಳಿದರು. ಮುಂದೆ ಪರಮಾತ್ಮಪ್ರಕಾಶ ಶಬ್ದದಿಂದ ಹೇಳಲಾದ ಶುದ್ಧಪರಮಾತ್ಮಾರಾಧಕನಾದ ಮಹಾಪುರುಷನ ಲಕ್ಷಣವನ್ನು ತಿಳಿಯುವ ಮೂರು ದೋಹೆಗಳ ವ್ಯಾಖ್ಯಾನಮಾಡುವರು:—

ಭವದುಃಖಭೀತನು ನಿರ್ವಾಣಪದಕಾಂಕ್ಷಿ । ಅವಿಚಲ ಭಕ್ತಿಯೊಳಿಹನು ॥
ಅವನು ಯೋಗ್ಯನು ಪರಮಾತ್ಮಪ್ರಕಾಶದ । ಸುವಿವೇಕವರಿಪನೆಂದರಿಯೈ ॥೨೦೭॥

ಉ:—ಅದನ್ನೇ ಹೇಳುವರು:—

ಪರಮಾತ್ಮಭಕ್ತನು ವಿಷಯವಿರಹಿತನು । ಪರಮಾತ್ಮಬೆಳಕನರಿವನು ॥
ಪರಮಮುನಿಯುತಾನರಿಯಲು ಯೋಗ್ಯನೆಂ।ದರಿವುದು ಮಹಿಮೆಯುಳ್ಳವನ ॥೨೦೮॥

ಉ:—ಅದನ್ನೇ ಹೇಳುವರು:—

ಪರಮವಿಚಕ್ಷಣ ಪರಿಶುದ್ಧಚಿತ್ತನು । ಅರಿವನು ಪರಮನ ಬೆಳಕ ॥
ಪರಮಸ್ವಸ್ವಂವೇದಜ್ಞಾನದೊಳಿರುತಿಹ । ಪರಿಶುದ್ಧನರಿವನೀ ಬೆಳಕ ॥೨೦೯॥

ಉ:—ಹೀಗೆ ಇಪ್ಪತ್ನಾಲ್ಕು ದೋಹೆಗಳ ಮಹಾಸ್ಥಲದಲ್ಲಿ ಆರಾಧಕ ಪುರುಷನ ಲಕ್ಷಣವನ್ನು ಮೂರು ದೋಹೆಗಳಲ್ಲಿ ಹೇಳಿದ ಮೇಲೆ ಆರನೆಯ ಅಂತರಸ್ಥಲವನ್ನು ಮುಗಿಸಿದರು. ಮುಂದೆ ಶಾಸ್ತ್ರದ ಫಲದ ಕಥನದ ಮುಖ್ಯತೆಯ ಒಂದು ದೋಹೆ ಮತ್ತು ಉದ್ಧತಿಯತ್ಯಾಗದ ಮುಖ್ಯತೆಯ ಎರಡು ದೋಹೆ ಹೀಗೆ ಮೂರು ದೋಹೆಗಳನ್ನು ಹೇಳುವರು:—

ಇಂತಿಹ ಪರಮಾತ್ಮಬೆಳಗನು ಭಾವದಿ । ಸಂತೋಷದಿಂದ ಭಾವಿಸಲು ॥
ಚತುರ್ಗತಿ ದುಃಖವಿನಾಶವು ತಪ್ಪದು । ಸತತವು ಛಂದವಿಲ್ಲಿಲ್ಲ ॥೨೧೦॥

ಉ:—ಶ್ರೀ ಯೋಗೀಂದ್ರದೇವರು ಔದ್ಧತ್ಯ ನಿವಾರಣೆಮಾಡಿಕೊಳ್ಳುವರು:—

ಭಟ್ಟಪ್ರಭಾಕರಕಾರಣದಿಂ ಪೇಳ್ದ । ಸ್ಪಷ್ಟದ ಪರಮಾತ್ಮಕಲೆಯೊಳ್ ॥
ದಿಟ್ಟರು ಗುಣದೋಷ ಪುನರುಕ್ತದೋಷವ । ಬಿಟ್ಟುಬಿಡುವುದು ಪಂಡಿತರು ॥೨೧೧॥

ಉ:—ಅದನ್ನೇ ಹೇಳುವರು:—

ಯುಕ್ತಾಯುಕ್ತದ ಶಬ್ದಗಳಿದ್ದರು । ವ್ಯಕ್ತಕೆ ತರದೆ ಪಂಡಿತರು ॥
ಯುಕ್ತಿಯಿಂ ಪರಮಾರ್ಥವರಿಯುತ ನನ್ನನು । ವ್ಯಕ್ತಿಯನುರೆ ಕ್ಷಮಿಯಿಸಿರಿ ॥೨೧೨॥

ಉ:—ಹೀಗೆ ಮೂರು ದೋಹೆಗಳಲ್ಲಿ ಏಳನೆಯ ಅಂತರಸ್ಥಲವನ್ನು ಹೇಳಿದರು. ಇಲ್ಲಿಗೆ ಇಪ್ಪತ್ನಾಲ್ಕು ದೋಹೆಗಳ ಮಹಾಸ್ಥಲವು ಪೂರ್ಣವಾಯ್ತು. ಮುಂದೆ ಒಂದು ಸ್ರಗ್ಧರೆಯ ಛಂದದಲ್ಲಿ ಈ ಗ್ರಂಥಾಧ್ಯಯನದ ಫಲವನ್ನು ಹೇಳುವರು:-

ಮನದೊಳು ಬೆಳಗುತಲಿರುವಾತ್ಮಜ್ಯೋತಿಯು । ಕೊನೆಗೆ ಸಿದ್ಧಿಯನ್ನುಂಟುಮಾಡಿ ॥
ಚಿನುಮಯ ಶುದ್ಧಜ್ಞಾನದ ರೂಪವನಿತ್ತು । ತನಗೆ ಸುಖವನು ಕೊಡುವುದು ॥೨೧೩॥

ಪರಮಮುನೀಶ್ವರರೀತತ್ತ್ವವನು ನಿತ್ಯ । ಪರಮಚಿತ್ತದೊಳು ಧರಿಸುತ ॥
ಪರಮಸಮಾಧಿಯೊಳಿರುತಾತ್ಮಸುಖವನು । ಪರಿಪರಿವಿಧದಿ ಪಡೆವರು ॥೨೧೩*೧॥

ಪರಮಾತ್ಮತತ್ವವು ಭುವನದೊಳಿರುತಿಹ । ಪರಿಪರಿದೇಹದೊಳೆಲ್ಲ ॥
ನಿರುತವು ವಾಸಮಾಡುತಲಿರ್ದುಕಡೆಗೆ । ಪರಿಪರಿದೇಹವಳಿವುದು ॥೨೧೩*೨॥

ಪರಿಪರಿ ದೇಹಗಳೆಲ್ಲವಳಿದಮೇಲೆ । ಪರಮಕೇವಲಜ್ಞಾನಮಯದ ॥
ಪರಮೌದಾರಿಕ ದಿವ್ಯದೇಹವುಬಂದು । ವರನಾಗುವ ಮುಕ್ತಿಸತಿಗೆ ॥೨೧೩*೩॥

ತ್ರಿಭುವನ ವಿಸ್ಮಯಕರವಪ್ಪದೇಹದ । ಲಭವನು ಪರಿರಂಜಿಸುತ ॥
ತ್ರಿಭುವನ ಗುರುವಪ್ಪ ಶಾಂತಜೀವರಿಗೆಲ್ಲ । ಅಭಯದಾಯಕವಾಗಿಹುದು ॥೨೧೩*೩॥

ಉ :—ಮುಂದೆ ಗ್ರಂಥದ ಅಂತ್ಯಮಂಗಲಕ್ಕಾಗಿ ಆಶೀರ್ವಾದರೂಪವಾದ ನಮಸ್ಕಾರ
ವನ್ನು ಮಾಡುವರು:—

ದಿವ್ಯಶರೀರಿಯಾರ್ಹಂತಪದಪ್ರಾಪ್ತ । ದವ್ಯಯಪರಮಾತ್ಮತತ್ವ ॥
ಸುವ್ಯಕ್ತವಾಗಿ ಮುನೀಶ್ವರಹೃದಯದಿ । ಭವ್ಯವಾಗಿಹ ಪರತತ್ವ ॥೨೧೪॥

ಕೇವಲಜ್ಞಾನಸ್ವರೂಪವಾಗಿರುತಿಹ । ಪಾವನ ಪರಮಾತ್ಮತತ್ವ ॥
ಭಾವಿಸೆ ದಿವ್ಯಯೋಗದೊಳದುಹೊಳೆಯುತ।ಜೀವಸಿದ್ಧಿಯನೀಯುವುದು ॥೨೧೪*೧॥

ಮೋಕ್ಷಸಂಪದವಿತ್ತು ಸಲಹುತಲೆಲ್ಲರ್ಗೆ । ಅಕ್ಷಯ ಶಿವಸ್ವರೂಪದೊಳು ॥
ಸಾಕ್ಷಾದಾತ್ಮನ ಬೆಳಕನು ಪ್ರಕಟಿಸಿ । ಈಕ್ಷಿಸುತಿಹುದು ಸಾಕ್ಷಿಯಲಿ ॥೨೧೪*೨॥

ಸರ್ವಸಿದ್ಧಿಯನುಂಟುಮಾಡುತಲಾತತ್ವ । ಸಾರ್ವಕಾಲವು ಲೋಕದಲಿ ॥
ಸರ್ವೋತ್ಕೃಷ್ಟಸಂಪದದಿಂದ ಮೆರೆಯುತ । ಸರ್ವಜೀವರಲಿ ನೆಲಸಲಿ ॥೨೧೪*೩॥

ಸರ್ವವಿಷಯಸುಖವಿರಹಿತವಾಗಿಹ । ಸರ್ವಕಾಲದಿ ಮೆರೆಯುತಿಹ ॥
ಸರ್ವರ್ಗೆ ದುರ್ಲಭವಾದಾತ್ಮತತ್ವಕೆ । ಸಾರ್ವಕಾಲದೊಳೆರಗುವೆನು ॥೨೧೪*೪॥

ಪರಮಪದನಹೊಂದಿ ದಿವ್ಯಕಾಯದೊಳಿರ್ದ । ವರಮುನಿವರರ ಹೃದಯದಿ ॥
ನಿರುತವು ವಾಸಿಸಿ ಧರೆಗೆ ದುರ್ಲಭವಾದ । ಪರಶಿವನಿಗೆ ಮಂಗಲವು ॥೨೧೪*೫॥

ಹೀಗೆ ಪರಮಾತ್ಮಪ್ರಕಾಶ ಗ್ರಂಥದಲ್ಲಿ ಮೊದಲ 'ಜೇಜಾಯ ಝಾಣಗ್ಗಿಯಏ' ಇತ್ಯಾದಿ ಒಂದು ನೂರಿಪ್ಪತ್ಮೂರು ದೋಹ, ಮೂರು ಪ್ರಕ್ಷೇಪಕಗಳು ಸೇರಿ ಒಂದು ನೂರಿಪ್ಪತ್ತಾರು (೧೨೬) ದೋಹೆಗಳಲ್ಲಿ ಪ್ರಥಮಾಧಿಕಾರವು ಮುಗಿಯಿತು.

ಒಂದುನೂರು ಹದಿನಾಲ್ಕು ದೋಹೆ, ಐದು ಪ್ರಕ್ಷೇಪಗಳು ಸೇರಿ ಒಂದುನೂರ ಹತ್ತೊಂಬತ್ತು ದೋಹೆಗಳಲ್ಲಿ (೧೧೯) ಎರಡನೇ ಮಹಾಧಿಕಾರವು ಮುಗಿಯಿತು.

ಮತ್ತು 'ಪರುಜಾಣಂತು ವಿ' ಇತ್ಯಾದಿ ಒಂದುನೂರೇಳು ದೋಹೆ (೧೦೭) ಗಳಲ್ಲಿ ಮೂರನೆಯ ಮಹಾಧಿಕಾರವನ್ನು ಹೇಳಿದರು. ಎರಡು ಛಂದಗಳೊಂದಿಗೆ ಮೂರುನೂರ ನಲವತ್ತೈದು ದೋಹೆಗಳಲ್ಲಿ ಪರಮಾತ್ಮಪ್ರಕಾಶದ ವ್ಯಾಖ್ಯಾನವನ್ನು ಮುಗಿಸಿದ್ದಾಯ್ತು.

ಹೀಗೆ ಇಲ್ಲಿಗೆ ಪರಮಾತ್ಮಪ್ರಕಾಶವು ಮುಗಿದುದು

ಶ್ರೀ ದೇಶಭೂಷಣರ ಅಂತಿಮ ಮಂಗಲ

ಶಿವದೇವೀಸುತನೇಮಿಜಿನೇಶನೆ । ಭವಗಳ ಪರಿಹರಿಸೆಂದು ॥
ಅವಿಚಲಮನದಿಂದ ವಂದಿಸುವೆನು ನಾನು । ಶಿವಪದವಿಯನಿತ್ತು ಸಲಹು ॥*॥

ಕಮಠೋಪಸರ್ಗವ ಜಯಿಸಿದಪಾರ್ಶ್ವೇಶ । ಸುಮನಸವಂದಿತಚರಣ ॥
ನಮಿಸುತ ನಿನ್ನನು ಪೇಳಿದ ಪರಮಾತ್ಮ । ನಮನವಿಲ್ಲಿಗೆ ಪೂರ್ಣವಾಯ್ತು ॥*॥

ಹುಂಡಾವಸರ್ಪಿಣಿಕಾಲನ ಕಡೆಯೊಳು । ಮಂಡಿಸಿ ಜೈನಧರ್ಮವನು ॥
ಮಂಡಲಾಧಿಪರಿಂದಸೇವೆಯ ಪೊಂದಿದ । ಚಂಡ ಮಹಾವೀರ ಪೊರೆಯೈ ॥*॥

ಸಿರಿಭರತೇಶ್ವರ ಹೃದಯಭಾಸ್ಕರನ । ಅರಿಕರ್ಮಗಳ ಸುಟ್ಟವನ ॥
ಸುರುಚಿರಮನದಿಂದ ಪ್ರಥಮಜಿನೇಶನ । ವರಪಾದ್ಮಕೆ ನಮಿಪೆ ॥*॥

ದೋಷವಿನಾಶನ ತ್ರೀಭುವನಖ್ಯಾತನ । ಶ್ರೀಶಯೋಗೀಂದ್ರಾರ್ಯನ ಶ್ರೀ ॥
ಭಾಸುರಚರಣಕೆ ದೇಶಭೂಷಣನಾನು । ಮಾಸದ ಮನದಿ ವಂದಿಪೆನು ॥*॥

ಹೀಗೆ ಇಲ್ಲಿಗೆ ಅಂತಿಮ ಮಂಗಲದೊಂದಿಗೆ ಗ್ರಂಥವು ಸಂಪೂರ್ಣಂ

ಸ್ವಸ್ತಿಶ್ರೀ ೧೦೮ ದೇಶಭೂಷಣ ಮಹಾಮುನಿ ಗ್ರಂಥಮಾಲೆಯ ಮಣಿ ೧೧
(ಕರ್ಣಾಟಕಶಾಖೆ)

ಶ್ರೀ ಯೋಗೀಂದ್ರದೇವಾಚಾರ್ಯ ವಿರಚಿತ

ಯೋಗಸಾರ

(ಆಧ್ಯಾತ್ಮ ಸಾಂಗತ್ಯ) (ಕನ್ನಡ ಅನುವಾದ)

ಶ್ರೀ ದೇಶಭೂಷಣರ ಮಂಗಲಾಚರಣ:—

ಸಿರಿಭರತೇಶ್ವರ ಹೃದಯಭಾಸ್ಕರನಪ್ಪ । ಪುರುಪರಮೇಶನನುತಿಸಿ ॥
ಪರಮಾತ್ಮನ ಬೆಳಗಿಸುವ ಕಾವ್ಯವ ಪೇಳ್ದ । ಸುರುಚಿರ ಮತಿಯಿಂದ ನಾನು ॥೧॥

ಅಜಿತಜಿನೇಶನ ಜಿತಮೋಹಮಲ್ಲನ । ಅಜರಾಮರ ಸುಖಮಯನ ॥
ಭಜಿಸುತ ಯೋಗೀಂದುದೇವರು ರಚಿಸಿದ । ನಿಜಯೋಗಸಾರವನಿನ್ನು ॥೨॥

ಪರಮಾತ್ಮಯೋಗದ ಸಾರವಪೇಳಿದ । ಗುರುಯೋಗೀಂದ್ರರ ಕೃಪೆಯಿಂ ॥
ವರಯೋಗಸಾರವ ಪೇಳುವ ಶಕ್ತಿಯು । ದೊರೆಕೊಳ್ಳಲೆನ್ನುತನಾನು ॥೩॥

ಸರಸ್ವತಿಗಣಧರದೇವರಿಗೆರಗುತ । ಪರಿಪರಿಭಕ್ತಿಯ ಭರದಿ ॥
ವರೆವೆನು ಕನ್ನಡನುಡಿಯ ಸಂಗತಿಯಿಂದ । ಪರಮಭಕ್ತಿಯೊಳಿದ ಕೇಳಿ ॥೪॥

ಪಂಚಪರಾವರ್ತನರೂಪಸಂಸಾರ । ದಂಚನೊಂದಿನಿಸಿಲ್ಲದಂತೆ ॥
ಸಂಚಿತಸಮ್ಯಕ್ತ್ವದುದಯವಾಗಲುಬೇಕು । ಮಿಂಚಿನಂತಿಹ ಯೋಗಸಾರ ॥೫॥

ಯೋಗಸಾರವನು ಗೃಹಸ್ಥರು ಭಾವಿಸಿ । ಯೋಗಸಾರವ ಪೂಜಿಪುದು ॥
ತ್ಯಾಗಿಗಳೆಲ್ಲರು ರಾಗವಳಿಯುತಾತ್ಮ । ಯೋಗವಸಾಧಿಸಿರೆನುತ ॥೬॥

ಪರಮರಹಸ್ಯದ ಕಾವ್ಯವಿದನು ನಾನು । ಸರಸದ ಮಾತಿನ ನಯದಿ ॥
ನಿರಪಿಸಿ ಪೇಳಿಹೆನಿದನು ಭಾವಿಸುತಲಿ । ಪರಮಾತ್ಮಯೋಗದೊಳಿಹುದು ॥೭॥

ದೋಷವಿನಾಶನ ತ್ರಿಭುವನಖ್ಯಾತನ । ಶ್ರೀಶಯೋಗೀಂದ್ರಾರ್ಯನ ಶ್ರೀ ॥
ಭಾಸುರಚರಣಕೆ ದೇಶಭೂಷಣನಾನು । ಮಾಸದ ಮನದಿ ವಂದಿಪೆನು ॥೮॥

ಸ್ವಸ್ತಿಶ್ರೀ ೧೦ಲ ದೇಶಭೂಷಣ ಮಹಾಮುನಿ ಗ್ರಂಥಮಾಲೆಯ ಮಣಿ ೧೧
(ಕರ್ಣಾಟಕಶಾಖೆ)

ಶ್ರೀ ಯೋಗೀಂದ್ರದೇವಾಚಾರ್ಯ ವಿರಚಿತ

ಯೋಗಸಾರ

(ಅಧ್ಯಾತ್ಮ ಸಾಂಗತ್ಯ) (ಕನ್ನಡ ಅನುವಾದ)

ಶ್ರೀ ಯೋಗೀಂದ್ರದೇವಾಚಾರ್ಯರ ಮಂಗಲಾಚರಣ:—

ನಿರ್ಮಲಧ್ಯಾನಪ್ರತಿಷ್ಠೆಯಿಂಮೆರೆಯುತ । ಕರ್ಮಕಲಂಕವ ದಹಿಸಿ ॥
ಸ್ವರ್ಮೋಕ್ಷಪದವಹೊಂದಿದ ಪರಮಾತ್ಮನ । ನಿರ್ಮಲಮನದಿ ವಂದಿಸುವೆ ॥೧॥

ಘಾತಿಚತುಷ್ಟಯಕರ್ಮವಕೆಡಿಸುತ । ಅತಿಶಯ ನಾಲ್ಕು ಗುಣಗಳ ॥
ಖ್ಯಾತಿಯಿಂ ಪೊಂದಿದ ಜಿನನಪಾದವನಾನು । ಪ್ರೀತಿಯಿಂದಲಿ ನಮಿಸುವೆನು ॥೨॥

ಸಂಸಾರಭಯಭೀತರಾಗಿಹ ಜೀವರ । ಸಂಸಿದ್ಧಿಮೋಕ್ಷಲಾಲಸರ ॥
ಸಂಸಾರಹರಣಕಾರಣವಾದ ಬೋಧವ । ಸಂಸೃಜಿಸಿಹೆನು ದೋಹೆಯಲಿ ॥೩॥

ಕಾಲವನಾದಿಯು ಜೀವನನಾದಿಯು । ಮಲಿನ ಸಂಸಾರವನಂತ ॥
ಕಲಿಲಮಿಥ್ಯಾದರ್ಶನಮೋಹಿತಜೀವ । ನಲೆಯುವ ದುಃಖವಪಡುತ ॥೪॥

ಚತುರ್ಗತಿಭ್ರಮಣೆಯೊಳತಿಭೀತಿಯಿರ್ದೊಡೆ । ಚತುರನೆ ಪರಭಾವವಳಿದು ॥
ಸತತದೊಳಾತ್ಮನ ಧ್ಯಾನವನಿರ್ಮಲ । ಮತಿಯಿಂದ ಮಾಳ್ಪುದು ಹಿತವು ॥೫॥

ತ್ರಿವಿಧಾತ್ಮರನರಿದವರೊಳಂತರವಪ್ಪ । ಸುವಿಶುದ್ಧನಿನ್ನಾತ್ಮನಿಂದ ॥
ಪ್ರವರಾತ್ಮಧ್ಯಾನದೊಳಿರಲು ಭ್ರಾಂತಿಲ್ಲದೆ । ಅವಿವೇಕವು ಕೆಡುತಿಹುದು ॥೬॥

ಮಿಥ್ಯಾದರ್ಶನ ಮೋಹಿತಮತಿಯಾಗಿ । ತಥ್ಯವರಿಯದೆ ಬಾಹಿರನು ॥
ಅರ್ಥಿಯಿಂ ಸಂಸಾರದಿ ತಿರುಗುವನೆಂ । ಬರ್ಥವ ಪೇಳಿಹ ಜಿನನು ॥೭॥

ಪರಭಾವನಳಿಯುತ ಪರಮಾತ್ಮನನು ತಾ । ನರಿಯುತಲಿಹನಂತರಾತ್ಮ ॥
ಪರಿಶುದ್ಧ ಪಂಡಿತನವನು ಸಂಸಾರದ । ಪರದದುಃಖವನಳಿಯುವನು ॥೮॥

ನಿರ್ಮಲ ನಿಷ್ಕಲ ಬುದ್ಧಶುದ್ಧನು ವಿಷ್ಣು । ಸ್ವರ್ಮೋಕ್ಷಪತಿಶಿವನೆಂದು ॥
ಸ್ವರ್ಮನದೊಳು ಪರಮಾತ್ಮರಿರುವರೆಂದು । ನಿರ್ಮಮಜಿನನು ಪೇಳಿಹನು ॥೯॥

ದೇಹಾದಿಪರವಸ್ತುವೆಲ್ಲವನಾತ್ಮನೆಂ । ದೂಹಿಸುವವ ಬಹಿರಾತ್ಮ ॥
ರೂಹಿಸೋಳ್ಪರಮನನರಿಯದೆ ಸಂಸೃತಿ । ಗೇಹದೊಳ್ಸುಳುಗಿರುತಿಹನು ॥೧೦॥

ದೇಹಾದಿ ಪರವಸ್ತುಗಳಾತ್ಮನಲ್ಲವೆಂ । ದೂಹಿಸಿ ತೊರೆವುದವುಗಳನು ॥
ದೇಹಾದಿಗಳ ಮಮತೆಯ ಬಿಟ್ಟಿಲೆಜೀವ । ದೇಹದೊಳ್ನೋಡಾತ್ಮನನು ॥೧೧॥

ಆತ್ಮನ ಆತ್ಮನೆಂದರಿತೊಡೆಜೀವನೆ । ಸ್ವಾತ್ಮಗೆ ನಿರ್ವಾಣವಹುದು ॥
ಆತ್ಮನಲ್ಲದ ಪರವನ್ನಾತ್ಮನೆಂದೊಡೆ । ಆತ್ಮಸಂಸಾರಿಯಾಗಿರ್ಪ ॥೧೨॥

ಇಚ್ಛೆಗಳಿಲ್ಲದ ತಪವಮಾಳ್ಪುದರಿಂದ । ಸ್ವಚ್ಛಮನದೊಳಾತ್ಮನನು ॥
ಅಚ್ಯೋತ್ತಿದಂತೆ ನೋಡಲು ಸಂಸೃತಿಕೆಟ್ಟು । ಸ್ವಚ್ಛದ ಪರಮಾತ್ಮನಪ್ಪೆ ॥೧೩॥

ಪರಿಣಾಮದಿಂದಲೆ ಜೀವಗೆ ಬಂಧವು । ಪರಿಣಾಮದಿಂದಲೆ ಮೋಕ್ಷ ॥
ಪರಿಣಾಮದಿಂದ ಸಕಲವನು ಭಾವಿಸಿ । ಪರಿಣಾಮಶುದ್ಧನಾಗಿರೆಲೈ ॥೧೪॥

ಪರಮಾತ್ಮನನೀನುರೆ ಪೊಂದದಿರ್ದೊಡೆ । ಸುರುಚಿರ ಪುಣ್ಯಾದಿಗಳಿಂ ॥
ನೆರೆಸುಖಪೊಂದುವೆನೆಂದು ಭಾವಿಸಿದೊಡೆ । ಉರುತರ ಸಂಸಾರವಹುದು ॥೧೫॥

ಮೋಕ್ಷಕೆ ಕಾರಣವಾತ್ಮದರ್ಶನವೆಂದು । ಸಾಕ್ಷಾತ್ತಾಗಿ ನಿಶ್ಚಯಿಸಿ ॥
ಅಕ್ಷಯ ಮೋಕ್ಷವ ಚಿಂತಿಸದನ್ಯರ । ಪಕ್ಷವ ತೊರೆವುದು ಹಿತವೈ ॥೧೬॥

ಗುಣಮಾರ್ಗಣಸ್ಥಾನಗಳೆಲ್ಲ ವ್ಯವಹಾರ । ಗುಣಮಣಿ ಶುದ್ಧಾತ್ಮನೆಂದು ॥
ಪ್ರಣುತದಿತಿಳಿವುದು ನಿಶ್ಚಯಮದು ನೀನು । ಗುಣಮಣಿ ನಿರ್ವಾಣವನ್ನು ॥೧೭॥

ವ್ಯವಹಾರ ಧರ್ಮದೊಳಿರುತಿರ್ದರು ನೀನು । ಸುವಿಚಾರದಿಂ ಜಿನನನ್ನು ॥
ಸುವಿಧಾನದಿಂದ ಧ್ಯಾನಿಸುತಿರೆ ನಿರ್ವಾಣ । ದವಿಚಲ ಪದತಪ್ಪದಹುದು ॥೧೮॥

ಶುದ್ಧಮನದಿ ಜಿನದೇವನನೆನೆದೊಡೆ । ಬದ್ಧ ಸಂಸಾರವು ಕೆಟ್ಟು ॥
ಶುದ್ಧಪರಮಪದವಪ್ಪುದುಕ್ಷಣದಲಿ । ಸಿದ್ಧವಿದೆಂದರಿಯೋಗೀ ॥೧೯॥

ಆತ್ಮನು ಬೇರಲ್ಲ ಜಿನನು ಬೇರಲ್ಲವೆಂ । ದಾತ್ಮನ ಬೇರ್ಪಡಿಸದಲೆ ॥
ಸ್ವಾತ್ಮನೋಳ್ನೋಡಲು ಮೋಕ್ಷಪದವಿಯೆಂ । ದಾತ್ಮನ ನಿಶ್ಚಯಿಸುವುದು ॥೨೦॥

ಜಿನಭಗವಂತನೆ ಪರಮಾತ್ಮನೆಂಬುದು । ಸನುಮತ ಸಿದ್ಧಾಂತಸಾರ ॥
ಅನುಮಾನವಿಲ್ಲದೆ ಮಾಯಾಚಾರವಬಿಟ್ಟು । ಚಿನುಮಯಾತ್ಮನ ನೆನೆಯೋಗೀ ॥೨೧॥

ಪರಮಾತ್ಮನೆ ನಾನು ನಾನೆ ಪರಮನೆಂ । ದರಿತು ನಿನ್ನೊಳು ನಿನ್ನನೋಡು ॥
ನೆರೆದ ಕತ್ತಲೆಗೆಟ್ಟು ಪರಮಪ್ರಕಾಶದ । ಪರಮಾತ್ಮತೋರುವನೊಳಗೆ ॥೨೨॥

ಲೋಕಾಕಾಶದಷ್ಟಿರುವನೆಂದಾತ್ಮನ । ವ್ಯಾಕುಲವಳಿದು ನೋಡಿದರೆ ॥
ತೂಕದಿ ಪರಮಾತ್ಮಕಾಣುವನೆಂದು ನಿ । ರಾಕುಲದೊಳು ನಿನ್ನನೋಡು ॥೨೩॥

ಅಕಲಂಕನಾದಾತ್ಮನ ನಿಶ್ಚಯದಿಂದ । ಲೋಕಪ್ರಮಾಣನೆಂದರಿದು ॥
ವಿಕಲನಯದಿನೋಡೆ ದೇಹಪ್ರಮಾಣನೆಂ । ದಕಲಂಕಾತ್ಮನ ನೋಡು ॥೨೪॥

ಜೀವನನಾದ್ಯನಂತದಕಾಲವನು ತಾನು । ಶೀವಿದೆಂಭತ್ನಾಲ್ಕುಲಕ್ಷ ॥
ಆವಾವಯೋನಿಯೊಳ್ಪುಟ್ಟುವಸಾವನು । ತೀವಿ ಸಮ್ಯಕ್ತ್ವವಿಲ್ಲದಲೆ ॥೨೫॥

ಶುದ್ಧ ಚಿದ್ರೂಪವ ಪಡೆಯಬೇಕಾದರೆ । ಬುದ್ಧನು ಜಿನನು ಚೇತನನು ॥
ಸಿದ್ಧನೆಂದಾತ್ಮನಭಾವಿಸಿ ನೋಡೆಲೆ । ಶುದ್ಧಮೋಕ್ಷವನೀನು ಪಡೆವೆ ॥೨೬॥

ನಿರ್ಮಲವಾದಾತ್ಮನ ಧ್ಯಾನವಿಲ್ಲದೆ । ನಿರ್ಮಲ ಮೋಕ್ಷವದಿಲ್ಲ ॥
ಸ್ವರ್ಮೋಕ್ಷವು ಬೇಕೋ ಬೇಡವೊ ಪೇಳು । ನಿರ್ಮಲಮನದಿಂದ ನೀನು ॥೨೭॥

ಮೂರುಲೋಕದಧ್ಯೇಯ ಜಿನಭಗ । ವಂತನುಸಾರಿ ನಿನ್ನೊಳಗಿರುತಿಹನು ॥
ಸಾರನು ನಿಶ್ಚಯನಯಗನ್ಯನೆನ್ನುತ । ಸಾರವಿ ತಿಳಿಯೆಲೆ ಯೋಗಿ ॥೨೮॥

ನಿಜಪರಮಾತ್ಮನ ಅರಿಯದ ಮೂಢನು । ಭಜಿಸಿದ ಶೀಲ ಸಂಯಮವು ॥
ಅಜಗಳಸ್ತನದಂತೆ ವ್ಯರ್ಥವಾಗಿಯು ತಾನು । ತ್ಯಜಿಸುವ ಸಕಲಸುಖಗಳ ॥೨೯॥

ನಿರ್ಮಲಸಂಯಮಶೀಲವ್ರತಗಳಿಂದ । ನಿರ್ಮಲನಾತ್ಮನೊಳಿರ್ದು ॥
ಅಮಲನಿಜಾತ್ಮನ ಸಿದ್ಧರೂಪವಹೊಂದಿ । ವಿಮಲಾನಂದದೊಳಿಹನು ॥೩೦॥

ಪರಮವಿಶುದ್ಧವಿಜ್ಞಾನವಿಲ್ಲದವಗೆ । ಪರಿಪರಿಯಪ್ಪ ವ್ರತಗಳು ॥
ಸುರುಚಿರವಾಗದೆ ವಿಫಲವಾಗುವುದೆಂದು । ಪರಮಾತ್ಮರು ಪೇಳಿಹರು ॥೩೧॥

ಪುಣ್ಯದಿ ಜೀವನು ಸ್ವರ್ಗದಲಿರ್ಪನು । ಪುಣ್ಯವಿಲ್ಲದೊಡೆ ನಾರಕಿಯು ॥
ಪುಣ್ಯಪಾಪವಬಿಟ್ಟು ತನ್ನೊಳಗಿರುವವ । ಗಣ್ಯದಿ ಮೋಕ್ಷವ ಪಡೆವ ॥೩೨॥

ವ್ರತಶೀಲ ಸಂಯಮತಪದಾನವೆಲ್ಲವಾ । ಶ್ರಿತ ವ್ಯವಹಾರವೆಂದೆಂಬ ॥
ನುತಸಾರವೊಂದದು ಮೋಕ್ಷಕೆ ಕಾರಣಾ । ದ್ಭುತವದು ಮೂಲೋಕದಲ್ಲಿ ॥೩೩॥

ತನ್ನಿಂದಲರಿದು ತನ್ನಾತ್ಮನ ಕಲೆಯನು । ಅನ್ಯಭಾವಗಳಿಲ್ಲದವನು ॥
ಸನ್ನುತ ಶಿವಸುಖವನು ಪಡೆದವನೆಂದು । ಜಿನನಾಥನು ಸಾರಿಹನು ॥೩೪॥

ಜಿನನು ಪೇಳಿದ ಷಡ್ದ್ರವ್ಯ ಪದಾರ್ಥವು । ಅನ್ಯವ್ಯವಹಾರವೆಂದು ॥
ಪ್ರಣುತಾತ್ಮನ ರೂಪವರಿದು ಧ್ಯಾನಿಸುಯೋಗಿ । ವಿನುತಾತ್ಮನನು ನೀ ಪಡೆವೆ ॥೩೫॥

ಆತ್ಮನು ಚೇತನವುಳಿದುವಚೇತನ । ಆತ್ಮನು ಸಾರಸರ್ವಸ್ವ ॥
ಆತ್ಮನ ಧ್ಯಾನಿಸಿ ಬೇಗಸಂಸಾರದಿಂ । ದಾತ್ಮನ ದಾಟಿಸು ಜೀವ ॥೩೬॥

ವ್ಯವಹಾರವನುರೆ ತ್ಯಜಿಸುತ ನಿರ್ಮಲ । ಸುವಿಶುದ್ಧ ಪರಮಾತ್ಮನನು ॥
ಅವಧರಿಸೆಲೆ ಜೀವ ಎಂದು ಜಿನೇಂದ್ರನು । ಸುವಿದಿತದಿಂದ ಪೇಳಿಹನು ॥೩೭॥

ಜೀವಾಜೀವವ ಭೇದದಿಂ ತಿಳಿಯುತ್ತ । ಆವಾಗಲು ನೋಡುವವನು ॥
ಸಾವದ್ಯವಳಿದು ಪರಮನನು ತಿಳಿವನು । ಜೀವನೆ ಪರಮಾತ್ಮನಪ್ಪ ॥೩೮॥

ಪರಮಪದವನುರೆ ಪಡೆಯಬೇಕಾದರೆ । ಪರಮನ ತಿಳಿಯುತಬಹುದು ॥
ಪರಮಾತ್ಮ ಕೇವಲಜ್ಞಾನಸ್ವಭಾವನೆಂ । ದರಿತು ಯೋಗಿಯು ಪೇಳಿಹನು ||೩೯||

ಪರಮಸಮಾಧಿಯೊಳಿರೆ ಪೂಜೆಯೊಳಿರೆ । ಪರಮಮೈತ್ರಿಯ ಪೊಂದುತಲಿ ||
ಪರಿಪರಿ ಯೋಗಾದಿ ಕಾರ್ಯಮಾಳ್ಪರಿಗೆಲ್ಲ । ಸುರುಚಿರಾತ್ಮನು ಕಾಣುವನು ||೪೦||

ಗುರುವಿನವರದಿಂದ ಆತ್ಮನಪಡೆಯದೆ । ನೆರೆದು ಕುತೀರ್ಥಯಾತ್ರೆಯಲಿ ||
ಪರಿಪರಿಯಲಿ ಭ್ರಮಣೆಯಿಂತಿರುಗುತಲಿದ್ದರೆ । ಪರಮಾತ್ಮನ ಕಾಣಲರಿದು ||೪೧||

ತೀರ್ಥಕ್ಷೇತ್ರದ ದೇವಾಲಯಗಳಲಿ । ತೀರ್ಥಂಕರ ದೇವನಿಲ್ಲ ||
ಸ್ವಾರ್ಥವತ್ಯಜಿಸಿ ನಿನ್ನೊಳು ನಿನ್ನ ನೋಡಲು । ಸಾರ್ಥಕನಾತ್ಮತೋರುವನು ||೪೨||

ಜಿನದೇವನು ದೇಹದೇವಾಲಯದೊಳು । ಅನುದಿನವಿಹನದಬಿಟ್ಟು ||
ಅನುವಿಂದ ಕಲ್ಲಿನಾಲಯದೊಳಗಿರಿಸಿ । ನೆನೆವನು ಭಿಕ್ಷುಕನಂತೆ ||೪೩||

ದೇವಾಲಯದೊಳಿಲ್ಲವು ಜಿನದೇವನೆಂ । ದಾವಾಗಲು ನೆನೆ ಮೂಢ ||
ಆವಾಗಲು ಚಿತ್ರದೊಳು ಕಲ್ಲಿನೊಳಿಲ್ಲ । ಜೀವನೆ ನಿನ್ನೊಳಗಿಹನು ||೪೪||

ತಿಳಿವರೆಲ್ಲರು ತೀರ್ಥದೊಳು ದೇವಾಲಯ । ದಳಿವಿನೊಳಿಹ ಜಿನನೆಂದು ||
ಅಳಿಮನಸನುಬಿಟ್ಟು ಪಂಡಿತಜನರು । ತಿಳಿವರು ತಮ್ಮ ದೇಹದೊಳು ||೪೫||

ಮರಣಭೀತಿಯು ನಿನಗಿರ್ದೊಡೆ ಜೀವನೆ । ಪರಮಧರ್ಮವನುರೆಮಾಡು ||
ಪರಮರಸಾಯನವಾದ ಧರ್ಮವದು । ಪೊರೆವುದು ನಿನ್ನನು ಯೋಗೀ ||೪೬||

ಕೇಶಲೋಚಿನೊಳು ಮಠದೊಳು ಪುಸ್ತಕದೊಳು । ಪಾಶದೊಳ್ವರಧರ್ಮವಿಲ್ಲ ||
ಕೇಶವಳಿದೊಡಿಲ್ಲ ಪಿಂಛದೊಡಲೊಳಿಲ್ಲ । ಆಶೆಯೊಳಿಲ್ಲ ಧರ್ಮವದು ||೪೭||

ರಾಗರೋಷವನೆಲ್ಲವಬಿಟ್ಟು ಮನದೊಳು । ಸಾಗರದಂತಿರ್ಪ ಧರ್ಮ ||
ರಾಗದಿ ಹೃದಯದೊಳಿಹುದೆಂದು ಜಿನನು । ರಾಗದಿ ಪೇಳಿರುತಿಹನು ||೪೮||

ಬಲವಾಯುಗಳಿತವಾಗಿಯು ಮನಸಳಿಯದು । ಬಲವಾಗಿ ಹೆಚ್ಚುವುದಾಶೆ ||
ಚಲುವ ಪರಾತ್ಮನ ಸ್ಫೂರ್ತಿಯಾಗದೆ ಮತ್ತೆ । ಬಲವಾಗಿ ಭವದೊಳಿರುವನು ||೪೯||

ನಿರುತವು ವಿಷಯದೊಳ್ರತನಾಗಿರುವಂತೆ । ಸುರುಚಿರಾತ್ಮನೊಳ್ರತನಾಗು ||
ನಿರುತವು ಸುಖವನುಪಡೆಯುವೆ ನೀನೆಂದು । ವರಯೋಗಿಂದ್ರ ಪೇಳಿಹನು ||೫೦||

ನರಕದ ಬಿಲವು ನೂರಾರು ಛಿದ್ರಗಳಿಂದ । ಬಿರುಕುಬಿಟ್ಟಿರುವ ತೆರದೊಳು ||
ನರದೇಹವು ರಂಧ್ರಮಯವೆಂದದಬಿಟ್ಟು । ಪರಮಾತ್ಮನ ತಿಳಿ ಯೋಗೀ ||೫೧||

ಸಂಸಾರ ವ್ಯವಹಾರದೊಳಳ್ದು ಜೀವರು । ಹಂಸನ ನೆನಹ ಬಿಟ್ಟಿಹರು ||
ಸಂಸಿದ್ಧಿಯ ನೆರೆಹೊಂದದಲವರು । ಸಂಸಾರದೊಳೆ ಬಾಳುವರು ||೫೨||

ಪರಿಸಿಶಾಸ್ತ್ರವನು ತನ್ನಾತ್ಮನತಿಳಿಯದೆ । ಕಠಿನ ಹೃದಯದಿಂದ ಜಡನು ॥
ದಿಟವಾಗಿ ಆತ್ಮನ ಅರಿಯದ ಕಾರಣ । ಸ್ಫುಟದಿ ನಿರ್ವಾಣವಿಲ್ಲವಗೆ ॥೫೩॥

ಮನವನಿಂದ್ರಿಯದಿಂದ ತಿರುಗಿಸಿ ತನ್ನಯ । ತನುವಿನೊಳಾತ್ಮನ ನೋಡೆ ॥
ಅನುದಿನ ರಾಗಪ್ರವಾಹವೆಲ್ಲವು ತಗ್ಗಿ । ವಿನುತಾತ್ಮ ತೋರುವನೊಳಗೆ ॥೫೪॥

ಜೀವನಿಂ ಭಿನ್ನವು ಪುದ್ಗಲವೆನ್ನುತ । ವ್ಯವಹಾರವದು ಭಿನ್ನವೆಂದು ॥
ವ್ಯವಹಾರವಳಿದು ಜೀವನ ನೆರೆಗ್ರಹಿಸಲು । ಸುವಿಶುದ್ಧಪದವು ತಾನಹುದು ॥೫೫॥

ಸ್ಫುಟವಾಗಿ ತನ್ನ ತಾನರಿಯದೆ ಆತ್ಮನ । ದಿಟವಾಗಿ ಸಂಸೃತಿಯೊಳಗೆ ॥
ಗಿಟಗಿರ್ರಗತಿನಾಲ್ಕರೊಳಿರುತಿಹನೆಂದು । ಸ್ಫುಟವಾಗಿ ಜಿನನು ಪೇಳಿಹನು ॥೫೬॥

ಹಾಲು ಮೊಸರು ತುಪ್ಪ ರತ್ನದೀವಿಗೆಗಳು । ಉಳಿರವಿ ಚಿನ್ನ ಪಾಷಾಣ ॥
ಕಲಿಚೆಂಕಿಸ್ಫಟಿಕದಮಣಿಗಳಿವೊಂಬತ್ತು । ಪಲವು ದೃಷ್ಟಾಂತಗಳಿಹುವು ॥೫೭॥

ಬಯಲಾಗಿರ್ಪುದದಾಕಾಶವದರಂತೆ । ಬಯಲಾಗಿ ದೇಹದೊಳಿರುವ ॥
ಬಯಲಾದ ಆತ್ಮನ ಶೀಘ್ರದೊಳರಿದೇಹ । ವಲಯದಿ ಪರಮಾತ್ಮನನು ॥೫೮॥

ಜಡವಹುದಾಕಾಶವಾತ್ಮ ಚೈತನ್ಯನು । ಜಡಕು ಜೀವಗು ಭೇದವಿಷ್ಟೆ ॥
ಜಡವಾದಾಕಾಶವು ಶುದ್ಧವಾಗಿರುವಂತೆ । ಜಡವಲ್ಲದಾತ್ಮ ನಿರ್ಮಲನು ॥೫೯॥

ನಾಸಿಕದಗ್ರದ ದೃಷ್ಟಿಯಿಂದೊಳಹೊಕ್ಕು । ವಾಸನೆಗಳನೆಲ್ಲ ತ್ಯಜಿಸಿ ॥
ಮಾಸದಮನದಿಂದ ಧ್ಯಾನಿಸಲಾತ್ಮನು । ಮಾಸಿದ ದೇಹವ ಬಿಡುವ ॥೬೦॥

ಸುಂದರವಾದಾತ್ಮನೆ ದೇಹವೆಂದರಿ । ಅಂದವಲ್ಲದ ದೇಹವನು ॥
ಸುಂದರವಲ್ಲವೆಂದರಿತು ತ್ಯಜಿಸಿ ನೀನು । ಚಂದದೊಳಾತ್ಮನ ಪಡೆಯೈ ॥೬೧॥

ಆತ್ಮನ ಆತ್ಮನೆಂದರಿತು ಧ್ಯಾನಿಸಿದರೆ । ಸ್ವಾತ್ಮನ ಸುಖವೆಲ್ಲವಹುದು ॥
ಆತ್ಮಗೆ ಕೇವಲಜ್ಞಾನೋದಯವಾಗಿ । ಆತ್ಮನು ತನ್ನ ತಾ ಪಡೆವ ॥೬೨॥

ಪರಭಾವವಬಿಟ್ಟು ತನ್ನೊಳು ತಾನಿರೆ । ಪರಮಮುಕ್ತಿಯು ಲಭಿಸುವುದು ॥
ಪರಿಪರಿ ಭವದಭ್ರಮಣಗಳೆಲ್ಲವು ಕೆಟ್ಟು । ಸಿರುತ ಶಾಶ್ವತಪದವಹುದು ॥೬೩॥

ಪರಭಾವವಳಿದು ಪರಾತ್ಮನ ಧ್ಯಾನಿಪ । ವರಭವ್ಯ ಭಗವಂತನವನು ॥
ವರಲೋಕಾಲೋಕವನರಿದು ತನ್ನೊಳು ತಾನು । ಸುರುಚಿರ ಜ್ಯೋತಿಯೊಲಿಹನು ॥೬೪॥

ಭೋಗಿಯಾಗಲಿ ಯೋಗಿ ಜೋಗಿಯಾಗಲಿತಾನು । ಯೋಗದೊಳಾತ್ಮನೊಳಿರಲು ॥
ನೀಗಿ ಸಂಸೃತಿಯನಮಳಸಿದ್ಧಿವಡೆವನೆಂ । ದಾಗುಣಿ ಜಿನನು ಪೇಳಿಹನು ॥೬೫॥

ವಿರಳದಿ ತತ್ವವ ತಿಳಿವರು ಕೇಳ್ವರು । ವಿರಳದಿ ಧ್ಯಾನಿಸುತಿಹರು ॥
ವಿರಳದಿ ತತ್ವವನುರೆ ಭಾವಿಸುವರು । ಸರಸ ಪಂಡಿತರೆಂದರಿಯೈ ॥೬೬॥

ಪರಿಜನ ಪುರಜನನನ್ನವರಲ್ಲವೆಂ । ದುರೆ ಪರವೆಂದರಿವವರು ॥
ತ್ವರಿತದಿ ಬೇಗನೆ ಪರಿದು ಸಂಸಾರವ । ಉರುತರ ಸುಖವ ಪೊಂದುವರು ॥೬೭॥

ಇಂದ್ರಫಣೀಂದ್ರರು ಶರಣಲ್ಲವಾತ್ಮನಿ । ಗೆಂದುರೆ ಗುಣವಭಾವಿಸುವ ॥
ಇಂದ್ರವಂದಿತನಾದ ಮುನಿಯುತಾಸುಖಿಸುತ । ಸುಂದರಸುಖವ ಪೊಂದುವನು ॥೬೮॥

ಓರ್ವನೆ ಹುಟ್ಟುತ ಓರ್ವನೆ ಸಾಯುತ । ಓರ್ವನೆ ದುಃಖ ಹೊಂದುವನು ॥
ಓರ್ವನೆ ನರಕದಿ ಜನಿಸುತಿಹನು ಮತ್ತೆ । ಓರ್ವನೆ ಮೋಕ್ಷಹೊಂದುವನು ॥೬೯॥

ಕೇಳುಜೀವನೆ ನೀನೋರ್ವನೆ ಪರಭಾವ । ವಳಿದು ಸಂಸೃತಿಯನು ನೀಗಿ ॥
ತಿಳಿದು ಮೋಕ್ಷವನುರೆ ಭಾವಿಸುತಿರ್ದೊಡೆ । ಅಳವಿಲ್ಲದ ಸುಖವಡೆವೆ ॥೭೦॥

ಪಾಪವ ಪಾಪವೆಂದೆಲ್ಲರು ತಿಳಿವರು । ಪಾಪ ಪುಣ್ಯಗಳೆರಡನ್ನು ॥
ವ್ಯಾಪಿಸಿ ಪಾಪವೆಂದರಿವವರಲ್ಪವು । ಲೇಪವಳಿದ ಪಂಡಿತರು ॥೭೧॥

ಪಂಡಿತ ಜನರೆ ಲೋಹದಬೇಡಿಯನುರೆ । ಪಿಂಡದ ಸ್ವರ್ಣಬೇಡಿಯನು ॥
ಬೇಡಿಯೆನ್ನುವ ತೆರದಿಂದ ಶುಭಾಶುಭ । ಪಿಂಡವ ತೊರೆಯಿರಿ ನೀವು ॥೭೨॥

ಮನವು ನಿರ್ಗ್ರಂಥವಾಗಿದ್ದರೆ ನಿಮ್ಮಯ । ತನುವು ನಿರ್ಗ್ರಂಥವಾಗುವುದು ॥
ತನುವು ತಾ ನಿರ್ಗ್ರಂಥವಾದಬಳಿಕ ಯೋಗಿ । ಅನುಭವಿಸುವ ಮೋಕ್ಷಪದವ ॥೭೩॥

ವಟವೃಕ್ಷದಿ ಬೀಜವಿರುವಂತೆ ಬೀಜದಿ । ವಟವೃಕ್ಷವಿರುವಂತೆ ನಿಮ್ಮ ।
ಸ್ಫುಟದೇಹದಿ ದೇವನಿರುವನೆಂದರಿವುದು । ದಿಟದಿಂದ ಲೋಕದಿ ಮುಖ್ಯ ॥೭೪॥

ಜಿನದೇವನೆ ನಾನು ನಾನೆ ಪರಮನೆಂ । ದನುದಿನ ತನ್ನೊಳು ನೋಡೆ ॥
ಅನ್ಯಮಂತ್ರಗಳ ತಂತ್ರಗಳ ಹಂಗಿಲ್ಲದೆ । ಸನ್ನುತ ಮೋಕ್ಷವ ಪಡೆವೆ ॥೭೫॥

ಎರಡು ಮೂರ್ನಾಲ್ಕೈದು ನೆರದೊಂಬತ್ತೇಳು । ಸುರುಚಿರವಾರೈದು ನಾಲ್ಕು ॥
ಪರಮನ ಲಕ್ಷಣವೆನ್ನುತ ತಿಳಿಯೋಗಿ । ಪರಮರಹಸ್ಯವನಿದನು ॥೭೬॥

ರಾಗದ್ವೇಷಗಳೆಂಬೆರಡನು ತ್ಯಜಿಸಿನೀ । ರಾಗದಿ ಜ್ಞಾನದರ್ಶನವ ॥
ರಾಗದೊಳ್ತಿಳಿವವ ಪರಮಾತ್ಮನಪ್ಪನೆಂ । ದಾಗಮದೊಳು ಪೇಳ್ದ ಜಿನನು ॥೭೭॥

ರಾಗಮೋಹದ್ವೇಷಮೂರಬಿಟ್ಟಿರುವವ । ರಾಗದಿ ರತ್ನತ್ರಯಗಳ ॥
ಭೋಗಿಸುವವನಾಗಿ ಶಾಶ್ವತಸುಖವನು । ಬೇಗ ಪಡೆವನೆಂದ ಜಿನನು ॥೭೮॥

ತಿಳಿವು ದರ್ಶನವೀರ್ಯಸುಖಗಳನೆಲ್ಲವ । ಅಳಿದು ಕಷಾಯ ಸಂಜ್ಞೆಗಳ ॥
ಅಳವಾದ ಪರಮಾತ್ಮಪದವಿಯ ಪಡೆವುದು । ತಿಳಿವಿನ ಫಲವೆಂದರಿಯೈ ॥೭೯॥

ಎರಡೈದನುರೆಬಿಟ್ಟು ವರಹತ್ತನುಹೊಂದಿ । ಪರಮಾತ್ಮಗುಣವ ಪೊಂದುವುದು ॥
ನಿರುತವು ಮೋಕ್ಷದ ಪದವಿಯೆಂದರಿದದ । ನುರುತರವಾಗಿ ಭಾವಿಪುದು ॥೮೦॥

ಆತ್ಮನೆ ದರ್ಶನ ಜ್ಞಾನಸ್ವರೂಪನು । ಆತ್ಮನೆ ಸಂಯಮತಪವು ।
ಆತ್ಮನೆ ಪ್ರತ್ಯಾಖ್ಯಾನಶೀಲನುಯೆಂದು । ಸ್ವಾತ್ಮದಿ ತಿಳಿಯೆಲೆ ಯೋಗೀ ॥೮೧॥

ನಿಜಪರವೆರಡನು ತಿಳಿದಿಹ ಜೀವನು । ನಿಜವ ಪಡೆದು ಪರವನ್ನು ।
ತ್ಯಜಿಸುತ ಪರಮನ ಪದವಪಡೆವನೆಂದು । ಭಜಿಸುತ ತಿಳಿಯೆಲೆ ಯೋಗೀ ॥೮೨॥

ರತ್ನತ್ರಯಯುಕ್ತಜೀವನುತ್ತಮತೀರ್ಥ । ನೂತ್ನ ಪರಮಸುಖಮಯನು ।
ಯತ್ನದಿ ಮಂತ್ರತಂತ್ರಗಳೆಲ್ಲವಬಿಟ್ಟು । ನೂತ್ನಪದವ ನೀ ಪಡೆಯೈ ॥೮೩॥

ನೋಳ್ಪುದೆ ದರ್ಶನ ತಿಳಿವುದೆ ಜ್ಞಾನವು । ತಿಳಿವು ದರ್ಶನಗಳೊಳಿರಲು ।
ಅಳವಲ್ಲದ ಚಾರಿತ್ರವೆಂದರಿತು ನೀ । ನಳಿಯದ ಸುಖವ ಪೊಂದುವುದು ॥೮೪॥

ಸಕಲಗುಣಗಳೆಲ್ಲ ಪರಮಾತ್ಮನೆಯೆಂದು । ಅಕಲಂಕ ಜಿನನು ಪೇಳಿಹನು ।
ಸಕಲ ಯೋಗಿಗಳು ಭಾವಿಸುತಿರ್ಪ ಆತ್ಮನ । ವಿಕಲವಳಿದು ನೆನೆ ಯೋಗೀ ॥೮೫॥

ಏಕಾಕಿಯಾಗಿ ಇಂದ್ರಿಯವಿರಹಿತನಾಗಿ । ತ್ರಿಕರಣಶುದ್ಧಿ ಪೂರ್ವಕದಿ ।
ಅಕಳಂಕ ಪರಮನ ಧ್ಯಾನಿಸಿದರೆ ನೀನು । ಪ್ರಕಟದಿ ಮೋಕ್ಷವ ಪಡೆವೆ ॥೮೬॥

ಬದ್ಧನ ಮುಕ್ತನೆಂದರಿತು ಚಿಂತಿಸುತಿರೆ । ಬದ್ಧ ಸಂಸಾರಿಯಾಗುವನು ।
ಶುದ್ಧನು ನಿರ್ಮಲನಾತ್ಮನೆಂದರಿದೊಡೆ । ಬದ್ಧವಳಿದು ಮುಕ್ತನಹನು ॥೮೭॥

ಸದ್ದೃಷ್ಟಿಜೀವನು ನರಕವಹೊಂದನು । ಹೊಂದಿಯು ದೋಷಿತಾನಲ್ಲ ।
ಹೊಂದಿದ ಕರ್ಮವ ನಿರ್ಮೂಲಮಾಡಿತಾ । ವಂದಿಸಿ ಸಿದ್ಧಿಯ ಪಡೆವ ॥೮೮॥

ತೊರೆದೆಲ್ಲ ವ್ಯವಹಾರವ ತನ್ನಾತ್ಮನೊ । ಳಿರುತಿಹಭವ್ಯಾತ್ಮನವನು ।
ಭರದಿ ಸಂಸಾರದ ಜಲಧಿಯದಾಂಟಿ ತಾ । ಪರಮಾತ್ಮಪದವಿಯ ಪಡೆವ ॥೮೯॥

ವರದೃಷ್ಟಿಯಿಂ ಶ್ರೇಷ್ಠತೆ ಪೊಂದಿದ ಜೀವ । ಸರಸನು ಪಂಡಿತನವನು ।
ಸುರುಚಿರ ನಿರ್ಮಲಪದವ ಪಡೆದು ತಾ । ಸ್ಥಿರವಾದ ಮೋಕ್ಷದೊಳಿಹನು ॥೯೦॥

ಅಜರಾಮರ ಗುಣಗಳಿಗಾಗರನಾದ । ಸುಜನ ಪೂಜಿತನಾದವನು ।
ಸೃಜಿಸನು ಕರ್ಮವ ಪೂರ್ವಸಂಚಿತವನು । ನಿಜದೊಳು ಕಳೆಯುತಬಹನು ॥೯೧॥

ತಾವರೆಯಲೆಯು ಜಲವ ಮುಟ್ಟದಿರ್ಪಂತೆ । ಜೀವನು ತನ್ನೊಳು ನಿಲಲು ।
ಭಾವದೊಳಾತ್ಮನ ನೋಡುತಲಿರಲು । ಶೀವಿದ ಕರ್ಮವಳಿವುವು ॥೯೨॥

ಶಮದೊಳು ಸುಖದೊಳು ಲೀನರಾಗಿರುವರು । ಮಮತೆಯನಳಿದವರಾಗಿ ।
ಸುಮನದೊಳಾತ್ಮನ ನೋಡುತಲಿರ್ಪರ್ಗ। ಕ್ರಮದಿ ಕರ್ಮಗಳು ಪೋಗುವುವು ॥೯೩॥

ಪುರುಷಾಕಾರನಾದಾತ್ಮನು ಸುಪವಿತ್ರ । ಪರಮಗುಣಗಳ ಸಾಗರನು ।
ಸುರುಚಿರ ನಿರ್ಮಲತೇಜವ ಪೊಂದಿಹ । ನುರುತರ ಶೋಭೆಯೊಳಿಹನು ॥೯೪॥

ಆಶುಚಿ ಶರೀರದೊಳಿರುತಿರ್ಪ ಪರಮಾತ್ಮ । ಆಶುಚಿಯನಳಿದವನಾಗಿ ।
ವಶವಾಗಿ ಸುಖದೊಳಗಿರುತಿರ್ಪನೆಂದು । ಅಶರೀರಿಯ ನೆರೆ ತಿಳಿಯೈ ॥೯೫॥

ವರಪರಮಾತ್ಮನ ನೆರೆತಿಳಿಯದೆ ನೀನು । ಪರಭಾವಗಳನೆಲ್ಲ ಬಿಡದೆ ।
ಪರಮರಹಸ್ಯದ ಶಾಸ್ತ್ರವನೋದಲು । ವರಮೋಕ್ಷಪದವನು ಪಡೆವ ॥೯೬॥

ಸಕಲ ವಿಕಲ್ಪರಹಿತನಾಗಿ ತನ್ನೊಳು । ವಿಕಲತೆಯಿಲ್ಲದ ಮನದಿಂ ।
ಪ್ರಕಟದಿ ಪರಮಸಮಾಧಿಯೊಳಿರುತಿರ್ಪ । ನಕಲಂಕಮೋಕ್ಷವ ಪಡೆವ ॥೯೭॥

ಜಿನಭಗವಂತನು ಪೇಳಿದ ಪಿಂಡಸ್ಥ । ದನುಪಮ ರೂಪಪದಸ್ಥ ।
ಸನುಮತರೂಪಾತೀತಧ್ಯಾನಗಳಿಂದ । ಜಿನರೂಪ ಪಡೆಯೆಲೆ ಯೋಗೀ ॥೯೮॥

ವರಜೀವದ್ರವ್ಯವೆಲ್ಲವು ಜ್ಞಾನಮಯವೆಂದು । ಪರಮಸಮಾನದೊಳವನು ।
ನಿರುತವು ತಿಳಿಯಬೇಕೆಂದಾ ಜಿನದೇವ । ವರದಿವ್ಯಧ್ವನಿಯಿಂದ ಪೇಳ್ದ ॥೯೯॥

ರಾಗದ್ವೇಷಗಳಿಲ್ಲದೆ ಸಮಭಾವದಿಂ । ನೀಗಿ ಸಮಸ್ತ ಕರ್ಮಗಳ ।
ರಾಗವಳಿದು ಸಾಮಾಯಿಕಿಯಾಗೆಂದು । ಬೇಗದಿಂ ಪೇಳಿದ ಜಿನನು ॥೧೦೦॥

ತ್ಯಜಿಸಿ ಪಾಪಗಳೆಲ್ಲವಾತ್ಮನೊಳ್ನಿಲ್ಪುದು । ನಿಜವಾದ ಚಾರಿತ್ರವೆಂದು ।
ನಿಜವಾಗಿ ತಿಳಿದು ತಾತನ್ನೊಳಾಚರಿಸಲು । ಅಜರಾಮರ ಪದವಹುದು ॥೧೦೧॥

ಪರವಳಿದಾದಮೇಲಾಗುವ ಶುದ್ಧಿಯು । ಪರಿಹಾರಶುದ್ಧಿಯೆಂದರಿದು ।
ಪರಿಪರಿಯಿಂದ ಭಾವಿಸಿ ನಿನ್ನೊಳು ನಿಂದು । ಪರಮಾತ್ಮಸಿದ್ಧಿಯ ಪಡೆಯೈ ॥೧೦೨॥

ಸೂಕ್ಷ್ಮಲೋಭದನಾಶವ ಹೊಂದಿದಮೇಲೆ । ಸೂಕ್ಷ್ಮವಾದವಶೇಷದಿಂದ ।
ಸೂಕ್ಷ್ಮಚಾರಿತ್ರವೆ ಮೋಕ್ಷಕಾರಣವೆಂದು । ಈಕ್ಷಿಸಿದರೆ ಮೋಕ್ಷವಹುದು ॥೧೦೩॥

ಆತ್ಮನೆ ಜಿನದೇವನಾತ್ಮನೆ ಸಿದ್ಧನು । ಆತ್ಮನೆ ಮುನಿನಾಯಕನೆಂ ।
ದಾತ್ಮನೊಳೀಕ್ಷಿಸಿ ನೋಡಿದರಾದೊಡೆ । ಸ್ವಾತ್ಮದೊಳೆಲ್ಲ ಕಾಣುವರು ॥೧೦೪॥

ಸಿದ್ಧನು ಈಶ್ವರ ಹರಿಬ್ರಹ್ಮ ಶಂಕರ । ಬುದ್ಧಾತ್ಮನೆಂದರು ನೀನೇ ।
ಶುದ್ಧಬ್ರಹ್ಮವು ನೀನೆ ಯೋಗಿಯು ನೀನೆ । ಸಿದ್ಧನನಂತನು ನೀನೇ ॥೧೦೫॥

ಲಕ್ಷಣಲಕ್ಷಿತ ನಿರ್ಮಲದೇವನು । ಸಾಕ್ಷಾತ್ತಾಗಿ ದೇಹದೊಳು ।
ಈಕ್ಷಿಸಿ ನೋಡಲು ಭಿನ್ನವಾಗದೆ ತಾನು । ಮೋಕ್ಷಸ್ವರೂಪದೊಳಿಹನು ॥೧೦೬॥

ಹಿಂದಾದ ಸಿದ್ಧರು ಮುಂದಪ್ಪಸಿದ್ಧರು । ಇಂದಿನ ಸಿದ್ಧರೆಲ್ಲವರು ।
ಚಂದದಿ ತಮ್ಮಾತ್ಮದರ್ಶನದಿಂದಲಿ । ಹೊಂದಿದರನುಪಮಪದವ ॥೧೦೭॥

ಮಿಗಿಲಾದ ಭವದೊಳು ಭಯಭೀತಜೀವರ್ಗೆ । ಪ್ರಗುಣಾತ್ಮ ಸಂಬಂಧದಿಂದ ।
ಯೋಗೀಂದ್ರಮುನಿಗಳು ವಿರಚಿಸಿ ಕಲಿಯುನು । ಸುಗುಣದಿ ಪೇಳಿದರವರು ॥೧೦೮॥

ಯೋಗೀಂದು ದೇವರು ಸರಸದಿರಚಿಸಿದ । ಯೋಗಸಾರವನು ಕನ್ನಡದ ॥
ರಾಗಸಾಂಗತ್ಯದಿ ಪೇಳಿಹೆನಿದನನು । ರಾಗದಿಂದಲಿ ಕೇಳುವುದು ||*||

ಮಂಗಲಂ ಯೋಗೀಂದುದೇವರ ಚರಣಕೆ । ಮಂಗಲಂ ಯೋಗಸಾಗರಕೆ ।
ಮಂಗಲಂ ನಿರ್ಮಲಧ್ಯಾನದರತರಿಗೆ । ಮಂಗಲಮಸ್ತು ಈ ಕೃತಿಗೆ ||*||

ಹೀಗೆ ಇಲ್ಲಿಗೆ ಯೋಗಸಾರವು ಮುಗಿದುದು

ಉಪಸಂಹಾರ

ಸುರುಚಿರ ಪರಮಾತ್ಮಕಲೆಯನು ಸಾಂಗತ್ಯ । ವರರಾಗದಿ ಪೇಳ್ದಿನಾನು ।
ಗುರುತರವಪ್ಪ ತಪ್ಪುಗಳೆಲ್ಲವಿದ್ದರು । ಮರೆತು ಪರಮನ ಭಾವಿಪುದು ||೧||

ಮಂದರಧೀರಯೋಗೀಂದ್ರದೇವರು ಪೇಳಿದ । ಸುಂದರ ಪರಮಾತ್ಮಕಲೆಯ ॥
ಅಂದಚಂದದೊಳು ಪೇಳುವಶಕ್ತಿ ನನಗಿಲ್ಲ । ಪೆಂದರಿತಿಹೆನಾದರೆಯು ||೨||

ಕನ್ನಡಭಾಷೆಯೊಳಿಲ್ಲದ ಕಾರಣ । ಕನ್ನಡದಿಂದಲಿ ಬರೆದ ।
ಸನ್ನುತ ಕಾವ್ಯವನೋದುವರೆಲ್ಲರ್ಗೆ । ಉನ್ನತ ಸುಖಸಿದ್ಧಿಯಹುದು ||೩||

ಚಾರಿತ್ರ ಚಕ್ರೇಶ್ವರರೆಂಬ ಪೆಸರಿನಿಂ । ಧಾರಿಣಿಯೊಳು ಕೀರ್ತಿವಡೆದ ॥
ವರಶಾಂತಿಸಾಗರಗುರುಗಳಿಗೆರಗಿ ನಾ । ನಿರದೆ ವಂದಿಪೆ ಶಿಷ್ಯಗಣವ ||೪||

ವರಶಾಂತಿಸಾಗರರಿಂದ ದೀಕ್ಷೆಯಪೊಂದಿ । ಪರಮನಭಜಿಸುತಲಿಹರ ॥
ವರವಾದಿ ವೃಂದಾರಕವಂದಿತನಾದ । ವರಪಾಯಸಾಗರರ್ಗೆರಗಿ ||೫||

ಅವರಿಂದ ದೀಕ್ಷೆವಡೆದು ಪರಮಾತ್ಮನ । ಸುವಿವೇಕದಿಂದ ಭಾವಿಸುತ ॥
ಪ್ರವರಸಮ್ಮೇದದಿ ದೇಹವತ್ಯಜಿಸಿದ । ಸುವಿವೇಕಿ ಜಯಕೀರ್ತಿಗುರುವು ||೬||

ಆವರಿಂದ ದೀಕ್ಷೆವಡೆದು ಜಿನರೂಪಿನಿಂ । ದವರು ಪೇಳಿದ ತೆರದಿಂದ ॥
ಅವಗತ ವಿದ್ಯೆಯು ಕಲಿತೆನಾದುದರಿಂದ । ಅವರಡಿಗಳನು ವಂದಿಪೆನು ||೭||

ವರಶಾಂತಿಸಾಗರ ವರಪಾಯಸಾಗರ । ಗುರು ಜಯಕೀರ್ತಿಗಳ್ಗೆರಗಿ ॥
ವರದೇಶಭೂಷಣಗುರುವು ಪೇಳಿದೆನೀ । ಪರಮಾತ್ಮನ ಕಲೆಯನ್ನು ||೮||

ಮಂಗಲಂತ್ರಿಜಗದ್ವಲ್ಲಭಜಿನರಾಜಗೆ । ಮಂಗಲಂ ಗಣಧರರಡಿಗೆ ॥
ಮಂಗಲಂ ಯೋಗೀಂದ್ರದೇವಾಚಾರ್ಯರ್ಗೆ । ಮಂಗಲಮಸ್ತು ಈ ಕೃತಿಗೆ ||೯||

— ಸಂಪೂರ್ಣಂ —

ಪರಿಶಿಷ್ಟ

ಪಟ್ಟಣಕುಡಿಯ ಭವ್ಯರು ಪೂಜಿಸುತ್ತಿಹ | ಪುಟ್ಟ ಶ್ರೀಪಾರಿಶ್ವ ಜಿನನ ||
ಅಷ್ಟಕರ್ಮವಗೆಲ್ದದೇವನಬಿಂಬವ | ಅಷ್ಟಾಂಗದೊಳು ವಂದಿಪೆನು ||೧||

ವರಗಣಧರರ್ಗೆವಂದಿಸಿ ನಾನು ಮತ್ತೆ | ಸರಸ್ವತಿದೇವಿಗೆ ನಮಿಸಿ |
ಸಿರಿದೇಶಭೂಷಣಾರ್ಯನಿಗೆ ವಂದಿಸಿ ನಾನು | ಪರಮಾತ್ಮಬೆಳಕಿಗೆ ನಮಿಪೆ ||೨||

ಯೋಗೀಂದ್ರದೇವರು ರಚಿಸಿದ ಪರಮಾತ್ಮ | ಯೋಗದ ಬೆಳಕನು ಹೊಂದಿ ||
ತ್ಯಾಗಿಯಾಗಿಹ ದೇಶಭೂಷಣಗುರುವಿದ | ಸಾಂಗತ್ಯದಿಂಡ ಪೇಳಿದನು ||೩||

ಪರಮುಮುದ್ಗುರುವಾದ ವರದೇಶಭೂಷಣ | ರಿರುವಗುಹೆಗೆ ಬಂದು ನಾನು ||
ವರಚಾತುರ್ಮಾಸದ ಯೋಗದೊಳಿರುತಿರ್ದ | ಗುರುವಿನ ಚರಣಕ್ಕೆರಗಿ ||೪||

ಧವಲಸಿದ್ಧಾಂತದ ಎರಡು ಖಂಡಗಳನು | ಸುವಿಮಲಕರ್ಣಾಟಕದಿ ||
ಸುವಿದಿತಮಪ್ಪಂತೆ ಭಾಷಾಂತರಿಸಿದೆನು | ಅವಧರಿಸೆಂದೆರಗಿದೆನು ||೫||

ಪರಮಗುರುವು ನೆರೆಹರುಷವಹೊಂದಿ | ಸರಸತಿಗೆರಗಿ ಮತ್ತೆನಗೆ ||
ಪರಮನಲಾಭವ ಪಡೆಯೆಂದು ಹರಸಲು | ಹರುಷದಿನಲಿದೆನು ಮನದಿ ||೬||

ಅರಿತು ಶ್ರೀಗುರುವು ಪೇಳಿದನು ನೀನಿಲ್ಲಿರು | ಪರಮಾತ್ಮ ಬೆಳಕನು ನಾನು ||
ನಿರವಿಸಿ ಪೇಳುವೆ ವರಸಾಂಗತ್ಯದಿ | ಬರೆದುಕೊಳ್ಳೆಲೆ ಭವ್ಯಎನಲು ||೭||

ಕನಸಿನೊಳ್ಕಂಡುದುನೆನಸಾಗಿ ಬಂದಂತೆ | ಮನದೊಳು ಸಂತೋಷಹೊಂದಿ ||
ಅನುವಿನಿಂ ಪೇಳ್ವುದು ಗುರುವೆ ನಾನದನು | ಸನುಮತದಿಂದಲಿ ಬರೆವೆ ||೮||

ಎಂದು ನಾಂ ಪರಿಪರಿಯಿಂದ ಪ್ರಾರ್ಥಿಸಿ ಮತ್ತೆ | ವಂದಿಸಿ ಕುಳ್ಳಿರೆ ಗುರುವು ||
ಮಂದಹಾಸದೊಳು ಪೇಳಿದ ಕೃತಿಯನುನಾ | ನಿಂದು ಪೇಳುವೆನಾಲಿಪುದು ||೯||

ಸಿರಿಭರತೇಶ್ವರ ಹೃದಯಭಾಸ್ಕರನ | ಅರಿಕರ್ಮಗಳ ಸುಟ್ಟವನ ||
ಸುರುಚಿರ ಮನದಿಂದ ಪ್ರಥಮ ಜಿನೇಶನ | ನೆರೆನುತಿಸುವ ಕೃತಿಯಿಂದ ||೧೦||

ಪರಶಿವನಿಗೆ ಮಂಗಲವೆಂಬ ವರೆಗಿನ | ಸರಸಕಾವ್ಯವಿದೆಲ್ಲವನು ||
ನಿರವಿಸಿ ಪೇಳಿದ ದೇಶಭೂಷಣನಿಗೆ | ಪರಮಾತ್ಮಸಿದ್ಧಿಯದರಿದೆ ||೧೧||

ವರಸಾಂಗತ್ಯವು ಪರಿಪರಿಜನರಿಗೆ | ಸುರುಚಿರದರ್ಥವನೀಡಿ ||
ಸರಸದಿ ಬೋಧಿಪುದೆಂದು ಭಾವಿಸಿಗುರು | ವರೆದನು ಸಾಂಗತ್ಯದಿಂದ ||೧೨||

ಯೋಗಿಂದ್ರದೇವರ ಕೃತಿಗಳನೆಲ್ಲವ | ಯೋಗಿಗಳೆಲ್ಲ ಕನ್ನಡದ ||
ರಾಗದಿಂದಲಿಪೇಳಿ ಪರಿತೃಪ್ತರಾಗಿದ್ದ | ರೀಗಿಲ್ಲವಾಕಾವ್ಯಗಳು ||೧೩||

ಕೆಲವು ಕ್ರಿಮಿಗಳಿಂದ ಕೆಲವಲಕ್ಷ್ಯಗಳಿಂದ । ಕೆಲವು ವಿಧರ್ಮಿಗಳಿಂದ ॥
ನೆಲೆಗೆಟ್ಟುಕಾಲಗರ್ಭದೊಳಡಗಿದುದರಿಂ । ಸಲೆ ವಿವೇಕದಿಪೇಳ್ದ ಗುರುವು ॥೧೪॥

ಎರಡುಕೋಟಿಯ ಜನರಾಡುತಲಿರುವರು । ಸರಸ ಕನ್ನಡದ ನುಡಿಯನು ॥
ವರಪೂಜ್ಯಪಾದಾಚಾರ್ಯರ ಕಾಲದಿಂ । ಪರಿಪರಿಶೋಭೆಯಲಿಹುದು ॥೧೫॥

ಅದನೆಲ್ಲ ಕನ್ನಡಜನತೆಗೋಸುಗವಾಗಿ । ಚದುರನು ದೇಶಭೂಷಣನು ॥
ಸದಮಲಾನುಗ್ರಹದಿಂದ ಪೇಳಿದನದ । ನೊದಗಿದ ಭಕ್ತಿಯಿಂ ಬರೆವೆ ॥೧೬॥

ಉತ್ತರಕರ್ಣಾಟಕದ ಭಾಗದೊಳು । ಬಿತ್ತರಿಸುವ ಕನ್ನಡವು ॥
ಪತ್ತಿಮರಾಠಿಯ ಒತ್ತಡದಿಂದಲಿ । ತತ್ತರಿಸುತ ಬಾಳುತಿದೆ ॥೧೭॥

ದಕ್ಷಿಣಕನ್ನಡ ಜಿಲ್ಲೆಯ ತುಳುವಿಗೆ । ಅಕ್ಷುಣ್ಣ ಲಿಪಿಯಿಲ್ಲದಂತೆ ॥
ದಾಕ್ಷಿಣ್ಯವಿಲ್ಲದೆ ಕನ್ನಡಲಿಪಿಯನು । ಶಿಕ್ಷಿಸಿ ಬಾಳಬಂಧುವಿದೆ ॥೧೮॥

ಭರತೇಶವೈಭವನೊದಲಾದುವೆಲ್ಲವು । ವರತನ್ನ ರೂಪವಬಿಟ್ಟು ॥
ನೆರೆದು ಮರಾಠಿಯ ಲಿಪಿಯಿಂದ ಕಳೆಗೆಟ್ಟು । ತರಿಮಿಂಡಿಯಂತಿರುತಿಹುವು ॥೧೯॥

ಉತ್ತರಕನ್ನಡದೊಳಗಿಹ ಭವ್ಯರು । ಚಿತ್ತಶುದ್ಧದೊಳಿದ ನೋಡೆ ॥
ತತ್ತರಿಸುವ ಕರ್ಮವು ನೆಲೆಗೆಟ್ಟೋಡಿ । ಪತ್ತುವರಾತ್ಮಕಲೆಯನು ॥೨೦॥

ಧರ್ಮದಿಂಸಕಲಸಂಪದಗಳಾಗುವುವು । ಧರ್ಮದಿಂದಿಹಪರ ಸೌಖ್ಯ ॥
ಧರ್ಮವಿಲ್ಲದ ಸಾಹಿತ್ಯವದೇಕೆಂದು । ಧರ್ಮವ ಪೇಳ್ದ ಭೂಷಣನು ॥೨೧॥

ಸಿರಿಕೃಷ್ಣಭೂಪಾಲನ ರಾಜ್ಯಕಾಲದಿ । ಸುರುಚಿರ ಮೈಸೂರಿನಲಿ ॥
ವರಜೈನವಿದ್ಯಾರ್ಥಿನಿಲಯದೊಳಿರುತಿರ್ದ । ವರಜಿನಗುರುಗಳಿಂ ನಾನು ॥೨೨॥

ಸರಸದಿಂ ನೆರೆಜೈನಧರ್ಮವ ಕಲಿತು ನಾ । ನುರು ಬೆಂಗಳೂರಿಗೆ ಬಂದು ॥
ಪರಮಶ್ರೀಮಹಾವೀರಸ್ವಾಮಿಯ ಕೃಪೆಯಿಂದ।ಸುರುಚಿರ ಸುಖದೊಳಗಿರ್ದು ॥೨೩॥

ಜೈನಾಯುರ್ವೇದ ಗ್ರಂಥದಧ್ಯಯನದಿಂ । ದಾನಂದದೊಳಹಿಂಸೆಯನು ॥
ಭೂಸುತವೈದ್ಯವಿದರ ಸಭೆಯೊಳು ಪೇಳೆ । ಸಾನಂದ ಪದವಿತ್ತರವರು ॥೨೪॥

ಪರಿಪರಿಪದವಿಯ ಪಡೆದ ಕಾರಣದಿಂದ । ಸುರುಚಿರಾತ್ಮನು ಹೆಚ್ಚಲಿಲ್ಲ ॥
ವರವೈದ್ಯವಿದ್ಯೆಯನರಿತು ಪೇಳಿದವರ । ವರಗುರುಗಳ ಸತ್ಕೃಪೆಯದು ॥೨೫॥

ಸಿದ್ಧರಸಾಯನ ಕಲ್ಯಾಣಕಾರಕ । ಶುದ್ಧಭಿಷಗ್ಸಾರಗಳನು ॥
ಶುದ್ಧಪಡಿಸಿ ಪ್ರಕಟಿಸಿ ಬೋಧಿಸಿದೆನು । ಶುದ್ಧ ಜೈನಾಯುರ್ವೇದವನು ॥೨೬॥

ವರಪಂಡಿತ ಎಲ್ಲಪ್ಪಶಾಸ್ತ್ರಿಯು ನಾನು । ಸರಸದಿ ಬರೆದ ಈ ಕೃತಿಯು ॥
ಉರುತರಭಕ್ತಿಯಿಂ ಪಠಿಸಲು ಗುರುವರ । ಪರಮಕೃಪೆಯ ತೋರುವನು ॥೨೭॥

ಜೀವದಯಾಪರಸಂಘವನಡೆಸುತ್ತ । ಜೀವದಯೆಯ ಬೋಧಿಸುತ ॥
ಆವಾಗ ಗೋವಧೆಯನು ತಡೆಗಟ್ಟುತ । ತೀವಿಭಾವಿಸುತಿದ್ದೆ ನಾನು ॥೨೮॥

ದೇವರ ಹೆಸರಿನಿಂ ಮಂತ್ರವನುರೆ ಪೇಳ್ದು । ಆವಾಗಲು ಜೀವವಧೆಯ ॥
ತೀವಿದ ಯಜ್ಞದಿ ಮಾಡುತಲಿರ್ಪರ । ನೋವಿ ಖಂಡಿಸಿದೆನು ಸಭೆಯೊಳ್ ॥೨೯॥

ಸರ್ವಾರ್ಥಸಿದ್ಧಿ ಅಹಿಂಸೆ ಪತ್ರಿಕೆಗಳ । ನಿರ್ವಹಿಸಿದೆ ಧರ್ಮಕಾಗಿ ॥
ಸಾರ್ವರೊಳ್ಮೈತ್ರಿಯ ಬೆಳೆಸುತಜೀವಿಸಿ । ಉರ್ವಿಯೊಳ್ಬಾಳುತಲಿಹೆನು ॥೩೦॥

ಪರಮಾತ್ಮನಪ್ರಕಾಶಿಸುವೀಕಾವ್ಯವ । ಬರೆಯಲಿಪ್ಪತ್ನಾಲ್ಕುದಿವಸ ।
ಸರಸದಿ ಕಳೆದುದರಿಂದಲಿಪ್ಪತ್ನಾಲ್ಕು । ಪರಮಜಿನರನುತಿಸಿಹರು ॥೩೧॥

ಆರುಖಂಡದ ಸಿದ್ಧಾಂತಶಾಸ್ತ್ರದೊಳು । ಆರನೆಯದು ಮಹಾಬಂಧ ॥
ಸಾರಿ ಕನ್ನಡದಿ ಬರೆಯಲಾರಂಭಿಸಿದೆನು । ವರಪಟ್ಟಣಕುಡಿಯಲ್ಲಿ ॥೩೨॥

ಪಟ್ಟಣಕುಡಿಯೊಳಗಿಹಭವ್ಯರೆಲ್ಲರು । ದಿಟ್ಟರು ಸಮ್ಯಕ್ತ್ವದಲ್ಲಿ ॥
ಪಟ್ಟವರ್ಧನರಾದಯೋಗಿಗಳನು ತಾವು । ದಟ್ಟಭಕ್ತಿಯೊಳು ಪೂಜಿಪರು ॥೩೩॥

ಪೂಜೆಯಗೈಯುವ ವ್ಯಾಜದೊಳವರು । ನೈಜದಿ ಸಕಲದಾನವನು ॥
ಓಜೆಯಿಂದಲಿಮಾಡಿ ಪುಣ್ಯವಗಳಿಪರು । ಶ್ರೀ ಜಿನವಾಕ್ಯವನಂಬಿ ॥೩೪॥

ಸಿರಿಪಾರ್ಶ್ವನಾಥನ ವರಕೃಪೆಯಿಂದಲಿ । ಸರಸಪಟ್ಟಣ ಕುಡಿಯೊಳಿಹ ॥
ವರಭವ್ಯಜನರಿಗೆ ಸರಸಕೋವಿದರಿಗೆ । ಸುರಪದ ತಪ್ಪದಲಹುದು ॥೩೫॥

ಪರಮಾತ್ಮಬೆಳಕನು ಬರೆಯುತಲಿರ್ಪಾಗ । ಸರಸಪಟ್ಟಣಕುಡಿಯಲ್ಲಿ ॥
ಪರಿಪರಿಗ್ರಾಮದ ಸರಸದ ಭಕ್ತಿಯ । ವರಭವ್ಯಜನರೆಲ್ಲ ನೆರೆದು ॥೩೬॥

ದೇಶಭೂಷಣಗುರುವಿನ ಕೇಶಲೋಚನು । ಆಶೆಯಿಂ ವೈಭವದಿಂದ ॥
ಶ್ರೀಶಪಾರ್ಶ್ವೇಶನ ಪೂಜಾಪೂರ್ವಕವಾಗಿ । ಆಶೆಯಿಂದಲಿ ಮಾಡಿದರು ॥೩೭॥

ಮಳೆಬೆಳೆಹೆಚ್ಚಲಿ ಇಂದ್ರಪ್ರಜೆಯು ಗೂಡಿ । ಇಳೆಯಾಣ್ಮರು ಸುಖಮಿರಲಿ ॥
ಕಳೆಯುಳ್ಳಪರಮಾತ್ಮಬೆಳಕು ಸದಾಕಾಲ । ಬೆಳಗುತಲಿರಲಿ ಲೋಕದೊಳು ॥೩೮॥

ಮಂಗಲ ಮಹವೀರಸ್ವಾಮಿಯ ಚರಣಕೆ । ಮಂಗಲ ಪೂರ್ವಾಚಾರ್ಯರಿಗೆ ॥
ಮಂಗಲ ಧರಸೇನ ಪುಷ್ಪದಂತರಿಗೆ । ಮಂಗಲಮಯಭೂತಬಲಿಗೆ ॥೩೯॥

ಸಿರಿವೀರಸೇನಾಚಾರ್ಯಗುರುಗಳಿಗೆ । ಪರಮಸಿದ್ಧಾಂತತ್ರಯಕೆ ॥
ಪರಿಪರಿವಿಧದ ಸಾರತ್ರಯವನುಪೇಳ್ದ । ಪರಮಾತ್ಮ ಕುಂಡಕುಂದರಿಗೆ ॥೪೦॥

ಯೋಗೀಂದ್ರದೇವರಿಗವರ ಶಿಷ್ಯರಿಗೆ । ರಾಗದಿಂದನೋದುವರಿಗೆ ॥
ಬಾಗಿನಮಿಸುತಂತ್ಯವ [illegible] ವನ್ನು ॥೪೧॥

ಸ್ವಸ್ತಿಶ್ರೀ ೧೦೮ ದೇಶಭೂಷಣ ಮಹಾಮುನಿ ಗ್ರಂಥಮಾಲೆ



ದೇಶಭೂಷಣಗುರುವಿನ ಶ್ರಾವಕಶಿಷ್ಯ । ದೇಶಭೂಷಣರಾದೇಶದಲಿ ॥
ಆಶೆಯಿಂದಲಿ ಪರಮಾತ್ಮನ ಬೆಳಕನು । ದೇಶಭಾಷೆಯೊಳಗೆ ಬರೆದ ॥*॥

ವೈದ್ಯವಿಶಾರದ ಸ್ಯಾದ್ವಾದಭಿಷಜ್ಮಣಿ । ವಿದ್ಯೆಯ ಪದಗಳ ಪಡೆದ ॥
ವೈದ್ಯನು **ಪಂಡಿತ ಎಲ್ಲಪ್ಪಶಾಸ್ತ್ರಿಯು** । ವಿದ್ಯಾಗುರು ಪದಭಕ್ತ ॥*॥

ಶಾಂತಿಪ್ರೆಸ್
ವಿಶ್ವೇಶ್ವರಪುರಂ, ಬೆಂಗಳೂರು ಸಿಟಿ